বল্মীক



নারায়ণ সান্যাল

ಹದಿನೇಳನೆಯ ಹೂವು

ಕರ್ಣಾಮೃತ

[ರೇಡಿಯೊ ರೂಪಕಗಳು]

ಗೌರೀಶ ಕಾಯ್ಕಿಣಿ

ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ (ಉ. ಕ.)
೧೯೮೦

"KARNAMRITA" (colleetion of kannada Radio plays) by shri Gourish Kaikini, Gokarna, Uttar Kannada. Published by shri Raghavendra Prakashana, Ankola Uttar kannada (Karnataka).

First Impression : 1980. pages : 102 price : 6-50

ಪ್ರಥಮ ಮುದ್ರಣ : ೧೯೮೦.

ಪ್ರತಿಗಳು : ಒಂದು ಸಾವಿರ.

ಹಕ್ಕುಗಳು : ಲೇಖಕರವು.

ಪ್ರಕಾಶಕರು : ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ (ಉ.ಕ.)

ಮುದ್ರಕರು : ಶ್ರೀ ಶಂಕರ ಪಾಟೀಲ, ಜಾಗೃತಿ ಪ್ರಿಂಟರ್ಸ್, ಹುಬ್ಬಳ್ಳಿ.

ಮುಖ ಪುಟ : ಶ್ರೀ ಜಯಂತ ಕಾಯ್ಕಿಣಿ.

ಬೆಲೆ : ೬-೫೦

ಪ್ರಕಾಶಕನಿಂದ

ನನ್ನನ್ನು ತಮ್ಮ "ಮಾನಸಪುತ್ರ"ನೆಂದು ಒಪ್ಪಿಕೊಂಡಿರುವ ತಂದೆ ಗೌರೀಶರು ೧೯೮೦ ಸೆಪ್ಟೆಂಬರ್ ೧೨ರಂದು, ಅರವತ್ತೆಂಟು ಸಾರ್ಥಕ ಸಂವತ್ಸರಗಳನ್ನು ಪೂರೈಸಿ ಅರವತ್ತೊಂಬತ್ತರಲ್ಲಿ ಪದಾರ್ಪಣ ಮಾಡುತ್ತಿದ್ದಾರೆ. ಈ ಸಂತಸದ ಸಂದರ್ಭದಲ್ಲಿ ಅವರದೊಂದು ಕೃತಿಯನ್ನು ಪ್ರಕಟಿಸಿ ಅರ್ಪಿಸುವ ಭಾಗ್ಯ ನನ್ನದಾದುದಕ್ಕೆ ಧನ್ಯತೆಯನ್ನು ಅನುಭವಿಸುತ್ತಿದ್ದೇನೆ.

ಗೌರೀಶರು ಬರೆದವುಗಳೆಲ್ಲ ಗ್ರಂಥರೂಪದಲ್ಲಿ ಬಂದಿದ್ದರೆ ಸಂಖ್ಯೆ ನೂರರ ಗಡಿ ದಾಟುತ್ತಿತ್ತು. ಇಂದಿನವರೆಗೆ ಬೆಳಕು ಕಂಡ ಗ್ರಂಥಗಳು—ಈ ಕೃತಿಯೂ ಸೇರಿ ಇಪ್ಪತ್ತೇಳು ಮಾತ್ರವೆಂದು ಕಾಣುತ್ತದೆ. ಉಳಿದವುಗಳ ಪಾಡೇನು?... ಕಾಲಗರ್ಭದಲ್ಲಿ ಯಾರಿಗೂ ದಕ್ಕದೆ ಕಣ್ಮರೆಯಾಗಿ ಹೋಗಬೇಕೇ?...

ಗೌರೀಶ ಕಾಯ್ಕಿಣಿಯವರಂತೆ ಶೋಷಣೆಗೆ ಒಳಗಾದ ಹಿರಿಯ ಸಾಹಿತಿಗಳು ಕನ್ನಡದಲ್ಲಿ ಹಲವು ಜನ ಸಿಗಲಾರರೆಂದು ನನ್ನ ಎಣಿಕೆ. ಅವರ ಅಸಾಧಾರಣ ಪ್ರತಿಭೆಯೆಲ್ಲ ಪತ್ರಿಕೆಗಳ ಪಾಲಾಯಿತು. ಅವನ್ನೆಲ್ಲ ಒಂದೆಡೆ ತಂದು ಗ್ರಂಥ ರೂಪದಲ್ಲಿ ಪ್ರಕಟಿಸುವ ಕೆಲಸ ಯಾರದು?...ಬರೆದು ಉಪಕರಿಸಿದ ತಪ್ಪಿಗೆ ಈ ಇಳಿವಯಸ್ಸಿನಲ್ಲಿ ದುಡ್ಡು ಚೆಲ್ಲಿ ಆ ಕೆಲಸವನ್ನು ಅವರೇ ಮಾಡಬೇಕೇ?... ಜಿಲ್ಲೆಯ ಬುದ್ಧಿಜೀವಿಗಳು, ನಾಡಿನ ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಗಳು ಈ ಬಗ್ಗೆ ಆಲೋಚಿಸಬೇಕು. ಒಬ್ಬ ಮೇಧಾವಿಯ ಸಾಹಿತ್ಯ ಸಂಪತ್ತನ್ನು ಉಳಿಸಿಕೊಳ್ಳುವ ಹೊಣೆ ನಾಡಿನದು.

"ಕರ್ಣಾಮೃತ" ವನ್ನು ಪ್ರಕಟಿಸುವಲ್ಲಿ ರಾಘವೇಂದ್ರ ಪ್ರಕಾಶನವು ಮುಂದಾದುದಾದರೂ ಇದೇ ಕಾರಣಕ್ಕಾಗಿ. ನಮ್ಮ ಪ್ರಕಾಶನದ ಮೂಲಕ ತಮ್ಮನಾಲ್ಕುರೇಡಿಯೊ ರೂಪಕಗಳನ್ನು ಪ್ರಕಟಿಸಲು ಸಮ್ಮತಿಸಿನ ಗೌರೀಶರನ್ನು ಮೊದಲಿಗೆ ಗೌರವದಿಂದ ಸ್ಮರಿಸುತ್ತೇನೆ. ಗೌರೀಶರ ಪುತ್ರ ಶ್ರೀ ಜಯಂತ ಕಾಯ್ಕಿಣಿಯವರು ಕೃತಿಯ ಮುಖ ಪುಟಕ್ಕೊಂದು ಅರ್ಥಪೂರ್ಣ ಚಿತ್ರಬರೆದು ತಾವೇ ಪಡಿಯಚ್ಚಿನ ಭಾರವನ್ನೂ ಹೊತ್ತು, ಮುಂಬಯಿಯಿಂದ ಕಳಿಸಿದ್ದಾರೆ.

ಗಣ್ಯ ಸಾಹಿತಿಗಳೂ ವಿದ್ವಾಂಸರೂ ಆಗಿರುವ ನಮ್ಮ ಅಂಕೋಲೆಯಂ ಅಳಿಯ ಡಾ॥ ಎಚ್.ಕೆ. ರಂಗನಾಥ ಅವರು ಬರೆದ 'ಮುನ್ನುಡಿ' ಈ ಕೃತಿಗೆ ಇನ್ನೊಂದ ಮೆರಗು. ನನ್ನ ಹಲವು ಬಗೆಯ ಕಿರಿಕಿರಿಯನ್ನು ಮುಗುಳ್ನಗುತ್ತ ಸಹಿಸಿ ಶ್ರೀ ಶಂಕರ ಪಾಟೀಲರು ಇದನ್ನು ಮುದ್ರಿಸಿ ಕೊಟ್ಟಿದ್ದಾರೆ. ಈ ಎಲ್ಲ ಮಹನೀಯರಿಗೆ ನನ್ನ ವಂದನೆಗಳು.

ವಿಷ್ಣು ನಾಯ್ಕ.

ಜನಾಂತಿಕ

ಸನ್ಮಿತ್ರ ಪ್ರಿಯ ಶ್ರೀ ವಿಷ್ಣುನಾಯ್ಕರ ಅನುಗ್ರಹದಿಂದಾಗಿ ನನ್ನ ಈ ಕೆಲವು ರೇಡಿಯೋ ರೂಪಕಗಳು ಇದೀಗ ಬೆಳಕು ಕಾಣುತ್ತಿವೆ. ಇವನ್ನು ಮೂಲದಲ್ಲಿ ಬರೆದು ಧಾರವಾಡ ಆಕಾಶವಾಣಿಯಿಂದ ಆಯಾಕಾಲಕ್ಕೆ ಬಿತ್ತರಿಸಿ ಕೆಲವು ವರ್ಷಗಳು ಸಂದವು. ಆದರೆ ಈ ಕಿವಿಯ ಬದುಕು ಹೀಗೆ ಕಣ್ಣಿನ ಬದುಕಾಗಿ ಹೊರಬರಲು ಶ್ರೀ ರಾಘವೇಂದ್ರ ಪ್ರಕಾಶನದ ಸಹಯೋಗವೇ ಕೂಡಿ ಬರಬೇಕಾಯಿತು. ಅದಕ್ಕಾಗಿ ನಾನು ನನ್ನ ಈ ಪ್ರಕಾಶಕ ಮಿತ್ರರಿಗೆ ಅನನ್ಯ ಋಣಿ.

ಬಿಡಿ ಬಿಡಿಯಾಗಿ ಈ ರೂಪಕಗಳ ಬಗೆಗೆ ಬೇರೆ ಏನೂ ಹೇಳಬೇಕಾಗಿಲ್ಲ. ಇಲ್ಲಿಯ 'ದೇವಿ ಕಂಡ ಬೆಳಕು' ೧೯೩೦ರ ನಮ್ಮ ಜಿಲ್ಲೆಯ ಸಿದ್ದಾಪುರ ಸೀಮೆಯ ಕರನಿರಾಕರಣೆಯ ವೀರ ಯುಗದ ಒಂದು ಹೃದಯಸ್ಪರ್ಶಿಯಾದ ಘಟನೆಯನ್ನು ನಿರೂಪಿಸುತ್ತದೆ 'ಕರ್ಣಾಮೃತ' ಏಕಾಂಕ ನಾಟಕ ಮೊದಲು ರಚಿಸಿದ್ದು, ಆ ಮೇಲೆ ಆಕಾಶವಾಣಿಯಬಗ್ಗೆ ವಿಶೇಷವಾಗಿ ರೂಪಿಸಿಕೊಳ್ಳಬೇಕಾಯಿತು. 'ಶಿವಯೋಗ ಸಿದ್ಧಿ'ಯ ಕಥಾಬೀಜ ನನ್ನದಲ್ಲ. ಕೌಂಟಲಿಯೋ ಟಾಲಸ್ಟಾಯಿಯ ಒಂದು ಕಥೆಯಿಂದ ಗೋಕರ್ಣ ಕ್ಷೇತ್ರಯಾತ್ರೆಯ ಈ ಮಹಾಪರ್ವಕ್ಕೆ ಅಳವಡಿಸಿಕೊಂಡಾಗಿದೆ.

ಎಲ್ಲ ರೂಪಕಗಳನ್ನು ನನ್ನಿಂದ ಬರೆಯಿಸಿಕೊಂಡು ಬಿತ್ತರಿಸಿದ್ದಲ್ಲದೆ ಬಹು ಕಾಲದ ನಂತರ ಪ್ರಕಟಣೆಗಾಗಿ ನನಗೆ ಅವುಗಳ ಕರಡು ಒದಗಿಸಿಕೊಟ್ಟ ಧಾರವಾಡ ಆಕಾಶವಾಣಿಯ ಪರಿವಾರದ ಈ ಮಹದುಪಕಾರವನ್ನು ನಾನು ಮನ್ನಿಸಿದಷ್ಟು ಕಡಿಮೆಯೇ.

ಇನ್ನು ಮುನ್ನುಡಿ ಬರೆದ ನನ್ನ ಹಿರಿಯ ಗೆಳೆಯರಾದ ಡಾ. ಎಚ್. ಕೆ. ರಂಗನಾಥರ ಋಣವನ್ನು ಹೇಗೆ ತೀರಿಸಲಿ? ಅವರು ನನ್ನ ಹಳೆಯ ಗೆಳೆಯರು ಧಾರವಾಡ ಆಕಾಶವಾಣಿಯಲ್ಲಿ ನಾಟಕ ದಿಗ್ದರ್ಶಕರಾಗಿದ್ದಂದಿನಿಂದಲೂ ನಾನು ಅವರಸೌಜನ್ಯಕ್ಕೆ, ಸೌಹಾರ್ದಕ್ಕೆ, ಹಾಗೆಯೇ ಅವರ ನಾಟ್ಯ ದಿಗ್ದರ್ಶನ-

ಸೃಷ್ಟಿಗೆ ಮಾರು ಹೋದ ಮೂಕ ಪ್ರಶಂಸಕನು. ಇಂಥ ಸಹೃದಯ ಮಿತ್ರ ವರ್ಯನ ಒಂದು "ವತ್ಸಲಾಂಛನ" ನನ್ನ ಕೃತಿಯ ಎದೆಯ ಮೇಲೆ ಸ್ಥಿರವಾಗಿ ಉಳಿಯಲೆಂದು ಹಾರೈಸಿ ನಾನು ಅವರಿಂದ ಮುನ್ನುಡಿಯನ್ನು ಕೋರಿದೆ. ಡಾ. ರಂಗನಾಥರೂ ತಮ್ಮ ರಂಗ ವಿಜ್ಞಾನ ಪರಿಣತಿಯ ಯಾವ ಆಢ್ಯತೆಯನ್ನೂ ಮೆರೆಯದೆ ಈ ಮುದಿಗೆಳೆಯನ "ರಂಗ ಬಿನ್ನಪ"ವನ್ನು ಪ್ರೀತಿಯಿಂದ ಒಪ್ಪಿಕೊಂಡರು. ಅವರಿಗೆ ಅತ್ಯಂತ ಆಭಾರಿ ಎನ್ನುವದು ನನಗೆ ಅದೇಕೋ ಅತ್ಯಂತ ಕೃತಕವೆನಿಸುತ್ತದೆ. ಆಡಿದರೆ ಉಪಚಾರ, ಬಿಟ್ಟರೆ ಅಪಚಾರ! ಹೀಗಿದೆ ನಿರುಪಾಯದ ಅಪಾಯ!

ಪುಸ್ತಕದ ಮೇಲ್ಹೊದಿಕೆಗಾಗಿ ಅಂದವಾದ ಚಿತ್ರವನ್ನು ಪಡಿಯಚ್ಚನ್ನು ಸಕಾಲಕ್ಕೆ ಶೀಘ್ರವಾಗಿ ತಯಾರಿಸಿಕೊಟ್ಟ ಯುವ ಕವಿ ಚಿರಂಜೀವಿ ಪ್ರಿಯ ಜಯಂತನಿಗೆ ನನ್ನ ಅಚ್ಚುಮೆಚ್ಚಿನ ಅಭಿನಂದನೆಗಳು.

ಈ ರೂಪಕಗಳನ್ನು ರೂಪಗೆಡದಂತೆ ಆದಷ್ಟು ಬೇಗ ಜಾಗೃತೆಯಾಗಿ ಮುದ್ರಿಸಿಕೊಟ್ಟ ಹುಬ್ಬಳ್ಳಿಯ 'ಜಾಗೃತಿ' ಪ್ರೆಸ್ಸಿನ ಒಡೆಯರಾದ ನನ್ನ ಮಿತ್ರ ಶ್ರೀ ಶಂಕರ ಪಾಟೀಲರ ಉಪಕಾರವನ್ನು ಇಲ್ಲಿ ನೆನೆಯಲೇಬೇಕು.

ಇನ್ನು ಆಕಾಶವಾಣಿಯಲ್ಲಿ ಪ್ರಸಾರಗೊಂಡಾಗ ಕೇಳಿ ಮೆಚ್ಚಿದ ಸಾವಿರಾರು ಜನರಲ್ಲಿ ಸಾಕಷ್ಟು ಸಂಖ್ಯೆಯಲ್ಲಾದರೂ ರಸಿಕರು ಈ ಕೃತಿಗಳನ್ನು ಹೀಗೆ ಪ್ರಕಾಶನವನ್ನು ಕಂಡಾಗ ಓದಿಕೊಂಡು (ಕೊಂಡು ಓದಿ!) ಹೆಚ್ಚಿನ ಸಂತೋಷವನ್ನು ಪಡೆಯುವಂತಾದರೆ ನಾನು ಕೃತಕೃತ್ಯ.

ಗೋಕರ್ಣ —ಗೌರೀಶ ಕಾಯ್ಕಿಣಿ

೧೫–೮–೧೯೮೦

ಆಶಯ

ಗೌರೀಶರಂತಹ ವಿಖ್ಯಾತ ವಿಮರ್ಶಕ-ಕವಿ-ಸಾಹಿತಿಯು ರಚಿಸಿದ ಪುಸ್ತಕಕ್ಕೆ ಮುನ್ನುಡಿ ಅನವಶ್ಯಕವೆಂದು ನನ್ನ ಎಣಿಕೆ. ಹಾಗೆಂದೇ ಅವರಿಗೆ ಬರೆದೆ. ಬೇಕೆ ಬೇಕೆಂದರೆ ತಮ್ಮ ಮಗನೇ ಆದ ಕವಿ ವಿಮರ್ಶಕ ಜಯಂತ ನಿಂದ ನಾಲ್ಕು ನುಡಿ ಬರೆಯಿಸಿ ಎಂದೆ. ಒಪ್ಪದೆ, ಮಾಗಿದ ನಮ್ಮ ಸ್ನೇಹವನ್ನು ಅವರು ಒರೆಗೆ ಹಚ್ಚುತ್ತಿದ್ದಾರೆ. ಎಂದೇ ನನ್ನ "ಆಶಯ"ವನ್ನು ವ್ಯಕ್ತಪಡಿಸು ತ್ತಿದ್ದೇನೆ; ಮುನ್ನುಡಿಯಲ್ಲ ಇದು.

೧೯೫೦ರಲ್ಲಿ ಧಾರವಾಡದ ಬಾನುಲಿ ಕೇಂದ್ರವು ಪ್ರಾರಂಭವಾದ ಮೇಲೆ, ಅಲ್ಲಿನ ಕಾರ್ಯಕ್ರಮಗಳ ನಿರ್ದೇಶಕರಾಗಿದ್ದ ನಾವು ಕೆಲವರು ಎದುರಿಸಿದ ಪಣ ವೆಂದರೆ ಧುತ್ತೆಂದು ಪ್ರತ್ಯಕ್ಷನಾದ ಬಾನುಲಿ ರಾಕ್ಷಸನ ಹಿಂಗದ ಹಸಿವಿನ ಹೊಟ್ಟೆಯನ್ನು ತುಂಬಿಸುವ ಪ್ರಯತ್ನ, ಆ ಪ್ರಯತ್ನದಲ್ಲಿ ನಮ್ಮೊಡನೆ ಸಹ ಕರಿಸುವುದಕ್ಕಾಗಿ, ಕವಿ, ಸಾಹಿತಿ, ನಾಟಕಕಾರ, ನಗೆಗಾರರ ಒಂದು ದೊಡ್ಡ ಬಳಗವೇ ನಿರ್ಮಾಣಗೊಂಡುದನ್ನು, ಆ ಬಳಗ ಅದೆಷ್ಟು ಆಸ್ಥೆಯಿಂದ, ಎಷ್ಟೊಂದು ಬಗೆಯ ಶುಚಿರುಚಿಯಾದ ಕಾರ್ಯಕ್ರಮಗಳನ್ನು ರಚಿಸಿ, ಶ್ರೋತೃ ಗಳಿಗೆ ಉಣ (ಕೇಳ) ಬಡಿಸಿತೆಂಬುದನ್ನು ನೆನೆದರೆ ಇಂದಿಗೂ ಮನಸ್ಸಿನ ತುಂಬ ಹರ್ಷ ಹನಿಯುತ್ತದೆ. ಗೌರೀಶರೂ ಆ ಬಳಗವಲ್ಲಿ ಉತ್ಸಾಹದಿಂದ ಬೆರೆದು ಬಾನುಲಿಗಾಗಿ ದುಡಿದರು. 'ಕಾವ್ಯಸತ್ವ – ಕಲಾಸತ್ವ – ಭಾವಸತ್ವ' ಗಳನ್ನೂ ಸೊನೆದ ಅವರ ಗೀತ ನಾಟಕಗಳಿಗೆ ಸುಗಂಧವು ಬೀಸಾಡುವಂತಹ ಧಾಟಿಗಳನ್ನೂ ತೊಡಿಸಿದವರು ಪಿ. ಆರ್. ಭಾಗವತ ಅವರು. ಹೃದಯದಿಂದ ಅತ್ಯಂತ ಸಿರಿವಂತನಾದ ಒಬ್ಬ ಸಾಹಿತಿಯೊಂದಿಗೆ, ಸೂಕ್ಷ್ಮ ಸಂವೇದಿಯಾದ ಒಬ್ಬ ಗಾಯಕನು ಬೆಸೆದ ಈ ಮಧುರ ಮೇಳವು ಸುಖ ಸೌಂದರ್ಯಗಳನ್ನೂ ಉಗ್ಗಿಸಿದ ಪ್ರಸಾರಿಕೆಗಳನ್ನು ಧಾರವಾಡದ ಬಾನುಲಿಗೆ ಕೊಟ್ಟಿತು. ಮುಂದೆ, ಗೌರೀಶರು ರಚಿಸಿದ ಗದ್ಯನಾಟಕಗಳಾದರೂ, ಬೇಲೂರಿನ ಶಿಲಾಬಾಲಿಕೆಯರಂತೆ, ಕುಸುರಿ ಕೆಲಸದ ರಮ್ಯಕೃತಿಯು ತರಬಲ್ಲ ಸಂತೋಷವನ್ನು ಶ್ರೋತೃವಿಗೆ ತಂದುಕೊಟ್ಟವು. ಅವರ ಕೃತಿಗಳನ್ನೂ ಪ್ರಸಾರಗೊಳಿಸುವಲ್ಲಿ ನಾನು ಪಡೆದುಕೊಂಡ ಆನಂದ ವಾದರೂ ಮರೆಯದಂಥದು

ಇದೀಗ ಬೆಳಕುಕಾಣುತ್ತಿರುವ ಗೌರೀಶರ 'ಕರ್ಣಾಮೃತ'ದಲ್ಲಿ ನಾಲ್ಕು ಪ್ರಸಾರಿಕೆಗಳಿವೆ. 'ಕರ್ಣಾಮೃತ'ದಲ್ಲಿ ಕುಂತಿ–ಕರ್ಣರ ಹೃದಯ ಭೇದಕ ಸಮಾವೇಶವಿದೆ. 'ವಾಸವದತ್ತ' ನಾಟಕದಲ್ಲಿ ಸುರಸುಂದರಿ ವಾಸವದತ್ತೆ ಹಾಗೂ ಸನ್ಯಾಸಿ ಉಪಗುಪ್ತರ ದರ್ಶನ–ಸಂದರ್ಶನಗಳ ಮಾಲಿಕೆಯೇ ಇದೆ. 'ದೇವಿ ಕೊಟ್ಟಬೆಳಕು' ಎಂಬ ಧ್ವನಿಚಿತ್ರದಲ್ಲಿ ಕರನಿರಾಕರಣೆಯ ವೀರಕಥೆಗಳಲ್ಲಿ ಒಂದನ್ನು ಮಾಡಿದ ದೇವಿಯ ಚಿತ್ರ ನಿಚ್ಚಳವಾಗಿ ಮೂಡುತ್ತದೆ. 'ಶಿವಯೋಗ ಸಿದ್ಧಿ'ಯಲ್ಲಿ ಬಸವಣ್ಣಪ್ಪನ ಪರೋಪಕಾರದ ಕಾಯಕ, ಹೇಗೆ ಆತನನ್ನು ಗೋಕರ್ಣೇಶ್ವರನ ಸನಿಯಕ್ಕೆ ಒಯ್ಯಿತೆಂದು,–ಟಾಲ್‌ಸ್ಟಾಯ್ ಕಥೆಯೊಂದನು ಅನುಸರಿಸಿ ಶಬ್ದ ಚಿತ್ರದಲ್ಲಿ ಹೆಣೆದಿದೆ. ರಂಗನಾಟಕದ ಪ್ರಸಾರ ರೂಪಗಳು ಬಾನುಲಿಯನ್ನು ಆಳುತ್ತಿರುವ ಇಂದಿನ ದಿನಗಳಲ್ಲಿ, ಕೆಲವೊಂದು ನಿಷ್ಕೃಷ್ಟ ಪ್ರಸಾರ ಲಕ್ಷಣಗಳನ್ನು ಮೆರೆಯಿಸುವ ಈ ಶ್ರುತಿಕೆಗಳ ಪ್ರಕಟಣೆಯಿಂದಾಗಿ, ಮುಂದೆ, ಪ್ರಸಾರ ಮಾಧ್ಯಮವನ್ನು ದುಡಿಸಿಕೊಳ್ಳಬೇಕೆನ್ನುವವರ ಕಣ್ಣು ತೆರೆಯುತ್ತದೆಂಬ ನಂಬಿಕೆ ನನಗೆ.

ಎಪ್ಪತ್ತರ ಗೆರೆಯನ್ನು ಮುಟ್ಟುತ್ತಿರುವ ಹರಯದ ಹುಮ್ಮಸ್ಸಿನ ಗೌರೀಶರ ನೂರಕ್ಕೆ ಮೀರಿದ ಕಾವ್ಯ–ಸಾಹಿತ್ಯ ಕೃತಿಗಳು ಪ್ರಕಟಣೆಗೆ ಸಿದ್ಧವಾಗಿವೆ ಯೆಂದು ಪ್ರಕಾಶಕ ವಿಷ್ಣು ನಾಯ್ಕರು ತಿಳಿಸಿದ್ದಾರೆ. ಆ ಎಲ್ಲ ಶುಚಿರುಚಿಯಾದ ಸಾಹಿತ್ಯವು ಬೆಳಕುಕಂಡು ಕನ್ನಡಿಗರೆದೆಯ ಶ್ರೀಮಂತಿಕೆಯನ್ನು ಹೆಚ್ಚಿಸಲಿ ಎಂಬುದು ನನ್ನ ಆಶಯ.

ಬೆಂಗಳೂರ
೧೫–೮–೧೯೮೦

ಎಚ್. ಕೆ. ರಂಗನಾಥ

ಮುಡಿಪು

ಬರೆದರೆ ಮುತ್ತಿನ ಹಾರದಂತೆ
ಅಚ್ಚಿಗಿಂತ ಅಚ್ಚುಕಟ್ಟಾದ ಅಕ್ಷರದ
ನನ್ನ ನೆಚ್ಚಿನ ನಿತ್ಯ ಲಿಪಿಕಾರ
ಮುತ್ತಿನಂತೆ ಮರೆಯಲ್ಲಿಯೇ ನಿಲ್ಲುವ
ಆತ್ಮೀಯ ಬಂಧು.

ಪ್ರಿಯ

ಶ್ರೀ ಗೋಪಾಲಕೃಷ್ಣ ವೆಂಟೇಕರರಿಗೆ

ಮಮತೆಯ ಮುಡಿಪು

ಭಾಗ ೧

ಕರ್ಣಾಮೃತ
(೧೯೭೧)

ಪಾತ್ರಗಳು

ಕರ್ಣ

ಕೃಷ್ಣ

ವಿದುರ

ಅಧಿರಥ
(ಕರ್ಣನ ಸಾಕು ತಂದೆ)

ಕುಂತಿ

ಭಾಗಿರಥಿ

ರಾಧಾ
(ಕರ್ಣನ ಸಾಕು ತಾಯಿ)

ಧ್ವನಿಗಳು

ರಥ, ಕುದುರೆ, ನದಿ-ಸದ್ದುಗಳು

(ವಸ್ತುವಿಗೆ ಮೂಲ-ವಚನಭಾರತ, ಕುಮಾರವ್ಯಾಸ ಮತ್ತು
ಉಳಿದುದೆಲ್ಲ ಕಲ್ಪನೆ)

೧

[ಕೌರವ ಸಭಾ-ವಿಸರ್ಜನೆಯನ್ನು ಸೂಸುವ ಕಲಕಲ ಕೋಲಾಹಲ ಶಂಖ, ತುತ್ತೂರಿ, ನಗಾರೆಗಳು ಮೊಳಗುತ್ತಿವೆ. ಜನಸ್ತೋಮ ಗುಂಪು ಗುಂಪಾಗಿ ಚದುರುವ ಸದ್ದು-ಮಾತುಕತೆ, ಕೃಷ್ಣ ಸಂಧಾನ ವಿಫಲವಾದ ಸಭೆಯ ವಿಚಿತ್ರ ಮುಗಿತಾಯದ ಬಗೆಗೆ ಮಿಶ್ರ ಪ್ರತಿಕ್ರಿಯೆ-ಉದ್ಗಾರಗಳು ಮುನ್ನೆಲೆಯಲ್ಲಿ-ಹಿನ್ನೆಲೆಯಲ್ಲಿ ನಗಾರೆಯ ಸದ್ದು ಕೆಲ ನಿಮಿಷ ಮುಂದುವರಿಯುತ್ತ ಮಂದವಾಗುತ್ತದೆ.]

ಧ್ವನಿಗಳು :

೧ :– ರಾಜಾಧಿರಾಜ ಕೌರವೇಶ್ವರರಿಗೆ ಜಯವಾಗಲಿ !

೨ :– ದ್ವಾರಕಾಧೀಶ್ವರ ಶ್ರೀಕೃಷ್ಣ ಮಹಾರಾಜರಿಗೆ ಜಯವಾಗಲಿ !

೩ :– ಮಹರಾಜನಲ್ಲ, ಪ್ರತ್ಯಕ್ಷ ಪರಮಾತ್ಮ !

೨ :– (ಕೆಳದನಿ) ಮೂರ್ಖಾ, ಹಾಗೆನ್ನಬೇಡ. ಶಕುನಿಯ ಕಿವಿಗಳು ಕೇಳ್ಯಾರು: ಆಮೇಲೆ ನಿನಗೆ ಉಳಿಗಾಲ ಉಂಟೆ?-ಈ ಕೌರವ ಸಭೆಯಲ್ಲಿ !

೧ :– ಸಾಕು. ಸುಮ್ಮನಿರು ಕೌರವ ಸಭೆ ಅಲ್ಲ. ರೌರವ ಸಭೆ.

೨ :– ಹೌದು, ಇಲ್ಲಿ ಎಲ್ಲಿ ಮಾತಿಗೆ ಗೌರವ ?

೩ :– ಅದೆಲ್ಲ ಹಳೆಕತೆ. ಏನು ಅದ್ಭುತ ನಡೆಯಿತು-ಇಂದಿನ ಸಭೆಯಲ್ಲಿ! ಓಹೋ , ಎಂಥ ಚಮತ್ಕಾರ !

೧ :– ಅದೆಂಥ ದುಃಸಾಹಸ ಸುಯೋಧನ ದೊರೆಗೆ ಹೋಗೋಕಾಲ.

೨ :– ದುಃಶಾಸನನಿಂದ ಶ್ರೀಕೃಷ್ಣನನ್ನು ಕಟ್ಟಿ ಹಾಕಿಸಲು ಹವಣಿಸಿದ ಮಹಾಮೂರ್ಖ .

೩ :– ಕೃಷ್ಣನೆಂದರೆ ಅದೇನು ದ್ರೌಪದಿಯ ಸೀರೆಯೋ ?

೧ :– ಆದರೆ, ಅದೆಂಥ ಘೋರರೂಪ ಶ್ರೀಕೃಷ್ಣ ಪ್ರಕಟಿಸಿದ .

೨ :– ವಿರಾಟ್‌ರೂಪ !

೩ :– ಭೀಷ್ಮ ದ್ರೋಣಾದಿಗಳ ಕಣ್ಣು ಕುಕ್ಕಿತು .

೧ :– ದುರ್ಯೋಧನನ ದರ್ಪ ಮಣ್ಣು ಮುಕ್ಕಿತು .

೨ :– ಶ್, ಶ್ ಅದಾರೋ ಬರುತ್ತಿದ್ದಾರೆ. ಕೌರವನ ಕಡೆಯುವರಿರ ಬೇಕು.

೩ ;– ಹೆದರಬೇಡೋ ಅದು ಮಹಾತ್ಮಾ ವಿದುರ. ದಾರಿ ಬಿಡು.

ವಿದುರ : ಧನ್ಯ, ಧನ್ಯ–ಜನ್ಮ ಸಾರ್ಥಕವಾಯಿತು. ಕಣ್ಣಿನ ಪುಣ್ಯ ಫಲಿಸಿತು. ಪರಮಾತ್ಮನ ವಿರಾಟರೂಪ ಕಂಡೆ. ಸಮಸ್ತ ಸಭೆ–ಅಂಧ ಧೃತರಾಷ್ಟ್ರನೂ ಕಂಡ. ಅದೆಂಥ ಭವ್ಯ ದಿವ್ಯ–ದರ್ಶನ. ಕೃಷ್ಣನ ರೋಮ ರೋಮದಿಂದ ತೇಜಃಪುಂಜ ರುದ್ರಾದಿತ್ಯವಸು ದೇವತೆಗಳು ಹೊರ ಬಂದು ನಿಂತರು. ಶಂಖ ಚಕ್ರ ಗದಾಪದ್ಮಗಳು ಎದುರಿಗ ಸಜ್ಜಾದವು. ಸಭೆಗೆ ಸಭೆಯೇ ಭಯಚಕಿತ. ಶರಣಾಗತ. ಆದರೂ ಅದೇನು ದರ್ಪ ದುರ್ಯೋಧನನದು! ಅಂಧಪುತ್ರ ಮದಾಂಧರಾಜಪುತ್ರ. ಕೊನೆಗೂ ಸಿಂಹಾಸನದಿಂದ ಉರುಳಿಬಿದ್ದ. ಶ್ರೀ ಕೃಷ್ಣನ ಅಡಿದಾವರೆಗೆ ಅಬ್ಬ! ಓಹೋ –ಹೋ–

ಧ್ವನಿ ೨ :(ರಥವು ಹತ್ತಿರಬಂದ ಸದ್ದು) ಓ ಶ್ರೀಕೃಷ್ಣನ ರಥ.

ಶ್ರೀಕೃಷ್ಣ :– ಹಾಂ ಹಾಂ ನೀನೂ ಅಡಿಗೆ ಬೀಳುವಿ. ಬಡ ಕುದುರೆಗಳ ಅಡಿದಾವರೆಗೆ! ಜೋಕೆ!

ವಿದುರ : ಅದಾರು? ಕೃಷ್ಣಾ ಅದ್ಭುತ ಮಾಡಿಬಿಟ್ಟೆಯೋ! (ಹರ್ಷಗದ್ಗದ) ಕಣ್ಣಪಾಪ ತೊಳೆಯಿತು.

ಕೃಷ್ಣ : ತೊಳೆಯಲು ನೀನು ಪಾಪವಾದರೂ ಏನು ಮಾಡಿರುವಿ? ಈ ಸುಳ್ಳೇ ಒಂದು ಪಾಪ. (ನಗು) ಇರಲಿ. ಬಾ ರಥವನ್ನೇರು. ನಡೆದೇಕೆ ಹೋಗುವಿ?

ವಿದುರ : ಬೇಡ ಕೃಷ್ಣಾ ನನ್ನ ಉಸಿರು-ಗಟ್ಟಿದಂತಾಗಿದೆ. ಸಭೆಯಲ್ಲಿ ನಡೆದ ರಾದ್ಧಾಂತದಿಂದ. ನೀನು ಮುಂದೆ ನಡೆ. ನಾನು ನಿಧಾನ ವಾಗಿ ನಡೆದು ಬರುತ್ತೇನೆ. ಮುಂದಾಗು, ನಾ ಹಿಂಬಾಲಿಸು ತ್ತೇನೆ.

ಕೃಷ್ಣ : (ನಕ್ಕು) ನೀನು ಎಂದಿಗೂ ನನ್ನ ಹಿಂಬಾಲಕನೆ.

ವಿದುರ : ಅಲ್ಲವೆ? ಮತ್ತೆ? ನಾನು ಬಾಲಕ. ನೀನು ಗೋಪಾಲಕ ನಿನ್ನ ಹಿಂದೆ ನಾನು ಗೋವು.

ಕೃಷ್ಣ : ಇಲ್ಲಿ ತಪ್ಪಿದೆ ನೀನು. ಗೋವೆಲ್ಲ ಮುಂದೆ. ಅವನ್ನು ತರಬುವ ಗೋಪಾಲ ಹಿಂದೆ. (ನಗು) ಗಡ್ಡ ಹಣ್ಣಾಯಿತು. ಇದು ಇನ್ನು ಗೊತ್ತಾಗಿಲ್ಲವೆ?

ವಿದುರ : ಗಡ್ಡ ಹಣ್ಣಾದರೂ-ನನ್ನ ಕರ್ಮ ಹಣ್ಣಾಗಿಲ್ಲ. ಬುದ್ಧಿ ಕರ್ಮವನ್ನು ಹಿಂಬಾಲಿಸುತ್ತದೆ.

ಕೃಷ್ಣ : ನೋಡು, ವಿದುರಾ ನನ್ನ ರಥದಲ್ಲಿ ಬಾ. ಇನ್ನೊಂದು ಪವಾಡ ನೋಡುವಿಯಂತೆ!

ವಿದುರ : ಸಾಕು ದೇವಾ. ಈ ದಿವಸಕ್ಕೆ ಒಂದು ಪವಾಡ ಸಾಕು ಕಣ್ಣು ಮಂದವಾದ ಮುದುಕನಿಗೆ. ನೀ ಮುಂದಾಗು. ಮನೆಗೆ ಹೋಗಿ ವಿಶ್ರಮಿಸು.

ಕೃಷ್ಣ : ನಿನ್ನ ಇಚ್ಛೆ. (ರಥ ಮುಂದುವರಿಯುವ ಸದ್ದು)

ವಿದುರ : ಗೋಪಾಲ ನೀನು, ಕುರುಕುಲವನ್ನು ತುರುಮಂದೆಯಂತೆ ಅಟ್ಟಿಕೊಂಡು ಹೋಗ್ತಾ ಇದ್ದೀಯೆ,-ಕಾಲನ ಕೊಟ್ಟಿಗೆಗೆ. ಅರೆ ಇದೇನು? ಕೃಷ್ಣನ ರಥ ಮತ್ತೆ ನಿಂತಿತು. ಅದಾರು! ಕರ್ಣನನ್ನು ಕರೆದು ಮಾತಾಡಿಸುತ್ತಿದ್ದಾನೆ! ಎಲಾ, ಕೈಹಿಡಿದು ಕರ್ಣನನ್ನು ಎತ್ತಿ ರಥದಲಿ ಕುಳ್ಳಿರಿಸಿಕೊಂಡ, ತನ್ನ ತೊಡೆಗೆ ತೊಡೆ ತಾಗಿಸಿ! ಸರಿ, ಇದೇ ಇನ್ನೊಂದು ಪವಾಡ. ಕೃಷ್ಣಸಂಧಾನದ ನಂತರ ಕರ್ಣಸಂಧಾನ! ಇದೂ ನಡಿಯಲಿ. ಜಗನ್ನಾಟಕ, ಸೂತ್ರಧಾರ. ನಿನ್ನ ಲೀಲೆನೋಡುವದೊಂದೇ ನಮ್ಮ ಭಾಗ್ಯ !

(ಕಾಲಕ್ರಮೇಣ ಸೂಚಕ ಸಿತಾರ-ಸ್ವರಜತಿ)

೨

(ದೃಶ್ಯಪಲ್ಲಟ)

(ವಿದುರನ ಮನೆಯಲ್ಲಿ–ವಿದುರ-ಕುಂತಿ)

ಕುಂತಿ : ವಿದುರಣ್ಣಾ ಕೊನೆಗೂ ಹೀಗಾಯಿತೇ? ಸಂಧಾನ ಮುರಿಯಿತೇ?

ವಿದುರ : ಒಂದು ಸಂಧಾನ ಮುರಿಯಿತು. ಕುಂತಿದೇವಿ.ಆದರೆ ಇನ್ನೊಂದು ಆರಂಭವಾಗಿದೆ.

ಕುಂತಿ : ಅದೇನು?

ವಿದುರ : ಕರ್ಣಸಂಧಾನ!

ಕುಂತಿ ; ಅಂದರೇನಣ್ಣಾ?

ವಿದುರ : ಶ್ರೀಕೃಷ್ಣ ಕರ್ಣನನ್ನು ಸಂಧಿಸಿ ಭೇದೋಪಾಯ ನಡೆಯಿಸಿದ್ದಾನೆ. ಇದೋ ಆ ಕಪಟ ಕಾರಸ್ಥಾನಿಯೇ ಬಂದ. ಕೃಷ್ಣಾ–

ಕೃಷ್ಣ : ಕಾರಸ್ಥಾನ ಸರಿ ! ಆದರೆ ಕಪಟವಿಲ್ಲ. ಹಿಂದೆಯೇ ಆದ ಕಪಟದ ಕವಾಟವನ್ನು ತೆರೆದು ತೋರಿಸಿದೆ, ಅಷ್ಟೆ!

ವಿದುರ : ಆದರೆ ಕರ್ಣನೆಲ್ಲಿ?

ಕೃಷ್ಣ : ಇದ್ದಲ್ಲಿಯೇ! ಸುಯೋಧನ ಪಕ್ಕದಲ್ಲಿ. ಆತ ತನ್ನ ತಮ್ಮಂದಿರ ಪಕ್ಷಕ್ಕೆ ಬರಲೊಲ್ಲ.

ಕುಂತಿ : ತಮ್ಮಂದಿರ? ಅಂದಾಗ–

ಕೃಷ್ಣ : ಆಗಲೆ ಅಂದೆನಲ್ಲ! ಹಳೆಯ ಕಪಟದ ಕವಾಟ ತೆರೆದು ತೋರಿಸಿದೆನೆಂದು. ಕರ್ಣನಿಗೆ ಅವನ ಹುಟ್ಟಿನ ಗುಟ್ಟನ್ನು ತಿಳಿಸಿಬಿಟ್ಟೆ.

ಕುಂತಿ : ಅಯ್ಯೋ, ಕೃಷ್ಣ, ಇದೇನು ಮಾಡಿಬಿಟ್ಟೆ! ನನ್ನ ಬಚ್ಚಿಟ್ಟ ಪಾಪ ಬಯಲಾಯಿತಲ್ಲ.

ಕೃಷ್ಣ : ವ್ಯಥೆ ಪಡಬೇಡ ಅತ್ತೆ! ಅದು ಎಂದೋ ಬಯಲಾಗಿದೆ.

ಸೂರ್ಯನಲ್ಲಿ ಘಟಿಸಿದ್ದು ಬೆಳಕಿಗೆ ಬಾರದುಂಟೆ? ಕರ್ಣನಿಗೆ ತಾನು ಯಾರೆಂದು ಮೊದಲೇ ಗೊತ್ತಾಗಿದೆ.

ಕುಂತಿ : ಅದು ಹೇಗೆ?

(ಸಿತಾರಿನ ಸ್ವರಜತಿ)

ಕೃಷ್ಣ : ಸೂರ್ಯದೇವನೇ ಬಂದು ಮಗನಿಗೆ ಹೇಳಿದನಂತೆ.

ವಿದುರ : ತಾನು ಪ್ರಥಮ ಪಾಂಡವನೆಂದು ತಿಳಿದ ಮೇಲೂ ಕರ್ಣ ಕೌರವನ ಪಕ್ಷ ಬಿಡಲೊಲ್ಲನೆ?

ಕೃಷ್ಣ : ಇಲ್ಲ—ವಿದುರ ಇಲ್ಲ. ಆತ ನಿಜವಾಗಿಯೂ ಸತ್ಯಸಂಧ. ಸ್ವಾಮಿಭಕ್ತ. ಆದರ್ಶಮಿತ್ರ. ಕೌರವನ ಅನ್ನದ ಋಣವನ್ನು ತೀರಿಸಲು ನಾಳಿನ ಕುರುಕ್ಷೇತ್ರವನ್ನು ಕಾತರನಾಗಿ ಕಾಯುತ್ತಿದ್ದಾನೆ.

ವಿದುರ : ಕೃಷ್ಣಾ, ನಿನ್ನ ಮಾತಿನ ಜಾಣತನ ಅವನಲ್ಲಿ ಪರಿಣಾಮ ಮಾಡಲಿಲ್ಲವೇ?

ಕೃಷ್ಣ : ಮಾತಿನ ಜಾಣತನ ಕಾಣಿಸಲು ಹೋದೆ. ಜಾಣತನದ ಮಾತನ್ನು ಕೇಳಿ ಮರಳಿ ಬಂದೆ.

ಕುಂತಿ : ಕರ್ಣನೇನೆಂದ?

ಕೃಷ್ಣ : (ನಕ್ಕು) ನನಗೇ ಮರುಳನೆಂದ.

ಕುಂತಿ :
ವಿದುರ : } ಮರುಳ ? ನಿನಗೆ ?

ಕೃಷ್ಣ : ಮರುಳನಲ್ಲದೇ ಮತ್ತೇನು? ಅವನ ಅನನ್ಯ ನಿಷ್ಠೆಯನ್ನು ರಾಜ್ಯದ ರಕ್ತ-ಸಂಬಂಧದ ಮೋಹ ಹಚ್ಚಿ ಭ್ರಷ್ಟ ಮಾಡಲು ಹವಣಿಸಿದ ನಾನು ಅವನ ಕಣ್ಣಿಗೆ ಮರುಳನಾಗಿ ಕಂಡರೆ ಸೋಜಿಗವೇನು ?

ಕುಂತಿ : ಹಾಗಾದರೆ. ಕರ್ಣನ ನಿಲುಮೆ ನಿನಗೂ ಸಮ್ಮತವೇ?

ಕೃಷ್ಣ : ಪೂರ್ತಿ ಸಮ್ಮತ ಅತ್ತೆ. ಕರ್ಣನ ದೃಢ ನಿರ್ಧಾರಕ್ಕೆ ಅದಕ್ಕೂ ಮಿಗಿಲಾದ ನಿಷ್ಠೆಗೆ ನಾನು ಮಾರಿಹೋದೆ. ಅಹಹ, ನಿಜವಾ

ಗಿಯೂ ಕರ್ಣ–ಕೌರವರ ಸ್ನೇಹವೇ ಸ್ನೇಹ ಕೃಷ್ಣಾರ್ಜುನರ ಸಖ್ಯ ಆದರೆ ಮುಂದೆ ಏನೂ ಅಲ್ಲ. ಇರಲಿಲ್ಲ.

ಕುಂತಿ : ಹಾಗಾದರೆ ಮುಂದೇನು !

ಕೃಷ್ಣ : ನಾನಿನ್ನು ಯುಧಿಷ್ಠಿರನಿದ್ದಲ್ಲಿಗೆ ತೆರಳಬೇಕು. ಇಲ್ಲಿಯ ವಿದ್ಯಮಾನಗಳನ್ನು ಅವನಿಗೆ ಅರುಹಬೇಕು. ಅತ್ತೆ ಹೋಗಿಬರುತ್ತೇನೆ ನಿನ್ನ ಮಕ್ಕಳಿಗೆ ಏನಾದರೂ ಸಂದೇಶ?

ಕುಂತಿ : ಇನ್ನೇನು ಸಂದೇಶ? ಕ್ಷತ್ರೀಯ ಧರ್ಮವನ್ನು ಕಾಪಾಡಲು ಯುಧಿಷ್ಠಿರನಿಗೆ ಹೇಳು. ಸಾಮಭೇದಗಳಾದವು ಇನ್ನು ಕಾದುದ್ದು ದಂಡ. ರಾಜಕಾರಣದ ಕೊನೆಗೆ ರಣ. ಹೆರವರ ಮನೆಯಲ್ಲಿ ಅನ್ನಕ್ಕಾಗಿ ಆಶ್ರಯ ಪಡೆದ ನಾನು, ತುಂಬಿದ ಸಭೆಯಲ್ಲಿ ಅಪಮಾನ ಮಾಡಿಸಿಕೊಂಡ ನನ್ನ ಸೊಸೆ, ಇವರ ದುರ್ದೆಶೆಗೆ ಕೊನೆ ಎಂದು? ಶಾಸ್ತ್ರಾರ್ಥದ ವಿನೀತ–ಮೋಷ ಮುಗಿಯಿತು. ಇನ್ನು ಶಸ್ತ್ರಾಸ್ತ್ರ ಪುರುಷಾರ್ಥದ ಕರೆ. ಕೌರವರ ಸೇಡು ಅವರ ಪಕ್ಷದವರ ಕೇಡು. ಅದೊಂದೇ ನನ್ನ ಮಕ್ಕಳ ಹಾದಿ, ಹೆಜ್ಜೆ, ಹೆಗ್ಗುರಿಯಾಗಲಿ.

ಕೃಷ್ಣ : ಅತ್ತೆ, ನಿನ್ನ ಪಾದಕ್ಕೆ ಬಿದ್ದೆ. ವಿದುರಾ, ನಿನಗೂ ನಮಸ್ಕಾರ.

ಕುಂತಿ :
ವಿದುರ: } ನಿನ್ನ ಪಯಣ ಸುಖವಾಗಲಿ. ಶುಭಮಸ್ತು.

[ದೃಶ್ಯ ಪಲ್ಲಟ]

(ವಾದ್ಯ-ಸಂಗೀತ ಉದಯದ ರಾಗ)

೩

(ಕರ್ಣನ ಮಂದಿರ. ಚಿಂತಾಕ್ರಾಂತನಾದ ಕರ್ಣ)

ನಿವೇದಕ : ಕಾದುಕೊಲುವೊಡೆ ಪಾಂಡುಸುತರು ಸ
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದೊಡೆ ಕೌರವೇಂದ್ರನಿಗುಮನಿಯಲಿ ಹೋಗಲಿಲ್ಲ

ಭೇದವಲಿ ಹೊಕ್ಕಿರಿದನೋ ಮಧು
ಸೂದನನು ತಾನಕಟಿನುತ್ತಚಿಂ
ತೋದಧಿಯೊಳದ್ದಂತೆ ಮೌನದೊಳಿದ್ದನಾ ಕರ್ಣ

ಕರ್ಣ : (ನಿಟ್ಟುಸಿರು) ಅಬ್ಬ! ಏನೆಲ್ಲ ಘಟಿಸಿಹೋಯಿತು.! ಸಂಧಾನ ಮುರಿಯಿತು. ಆದರೆ ನನ್ನ ಸ್ವಾಮಿ ಸುಯೋಧನನ ಅಭಿಮಾನ ಮುರಿಯಲಿಲ್ಲ, ಕೌರವೇಶ್ವರನಿಗೆ ವಿನಾಶ ನಿಶ್ಚಿತ. ನಾವೆಲ್ಲರೂ ಅದೇ ಲೋಕಸಂಹಾರದ ಸರ್ವನಾಶದ, ಸಾಗರವನ್ನು ಸೇರಲು ಸಾಗರಬಿದ್ದು ಧಾವಿಸುವ ಹುಚ್ಚು ಹೊಳೆ ಹಳ್ಳಗಳು.ಮುನ್ನುಗ್ಗು ವದೊಂದೇ ನಮ್ಮ ನಿಯತಿ. ತಡೆ ಇಲ್ಲ, ತಡವಿಲ್ಲ, ಹೊರಟು ಮರಳುವದಿಲ್ಲ. ಆದರೆ ಶ್ರೀಕೃಷ್ಣ, ಇದೇನು ನೀನು ಮಾಡಿದಿ! ಭೇದವಲಿ ಹೊಕ್ಕಿರಿದಿಯಾ? ಮಧುಸೂದನ! ನಿಜವಾಗಿಯೂ ನೀನು ಮಧುಸೂದನ–ಮಧುಮಧುರ ಮಾತಿನಿಂದಲೆ ಕೊಲ್ಲುವ ಕಾರಸ್ಥಾನಿ. ನನ್ನ ಜನನವನ್ನು ಅರುಹಿಕೊಂದೆ. ಆ ಕುರುಪತಿ ಯನ್ನು ಕೊಂದೆ. ಹಾ ಎಂಥ ಧರ್ಮಸಂಕಟಕ್ಕೆ ನಮ್ಮನ್ನು ಒಡ್ಡಿ ಬಿಟ್ಟಿಯೋ? ಪಾಂಡವರು ನನ್ನ ತಮ್ಮಂದಿರು ಅವರನ್ನು ಕೊಲ್ಲು ವಂತಿಲ್ಲ. ಅವರನ್ನು ಹಾಗೆಯೆ ಬಿಟ್ಟರೆ ಅವರಿಂದ ನನ್ನ ಜೀವದ ಜೀವದ ಗೆಳೆಯ , ಬಾಳಿನ ಒಡೆಯ ಕೌರವೇಶ್ವರ ಬದಕುವಂತಿಲ್ಲ. ಒಹ್ , ಎಂಥ ಪೇಚು . – ಅತ್ತ ಬಂಧುಹತ್ಯೆ ಇತ್ತ ಸ್ವಾಮಿ - ದ್ರೋಹ . ಅತ್ತ ಶತ್ರುಪ್ರೇಮ ಇತ್ತ ಮಿತ್ರದ್ರೋಹ. ಅಮಮಾ, ಎಂಥ ದಾಹ! ಏನು ಮಾಡಲಿ ?– ಹೂಂ . ಇದೇ ನಿರ್ಧಾರ . ನಾಳಿನ ಭಾರತ ಪೂರಿಗೌತ್ತಣ . ಪಾಂಡವರ ಸೇನೆ ಯನ್ನೆಲ್ಲ ಧ್ವಂಸ ಮಾಡಿ ನನ್ನ ಸ್ವಾಮಿಯ ಋಣ ತೀರಿಸುವೆನು. ಅವನನ್ನು ರಕ್ಷಿಸಲು ನನ್ನೀ ದೇಹವನ್ನು ರಣದೇವತೆಗೆ ಬಲಿ ಕೊಡುವೆನು . ಹುಟ್ಟಿನಲ್ಲಿ ಕೆಟ್ಟೆ . – ಅದು ನನ್ನದಿದ್ದಿಲ್ಲ. ಸಾವು ನನ್ನದು – ಅದರಲ್ಲಿ ಕೆಡಲಾರೆ . – ಇದೊ ಸೂರ್ಯೋ ದಯುವಾಯಿತು . (ದೂರದಲ್ಲಿ ಕೋಳಿ ಕೂಗು ಪಕ್ಕಿಗಳು

ಚಿಲಿಪಿಲಿ ಹೆಚ್ಚಾಗುವದು. ಹಿನ್ನೆಲೆಯಲ್ಲಿ ಮುಂಜಾವಿನ ನಾಗ-ಸ್ವರ, ನಗಾರೆ)

ರಾತ್ರಿ ಎಲ್ಲಾ ಒದ್ದಾಡಿದೆ. ಆ ಕೃಷ್ಣ ನನ್ನ ನಿದ್ರೆಯನ್ನೂ ಕೊಂದ. ತಾಯಿ ಭಾಗೀರಥಿಯ ತೊಡೆಯಲ್ಲಿ ಆದರೂ ಮೈಮನಗಳನ್ನು ತಣಿಸೋಣ.

(**ದೃಶ್ಯ – ಪಲ್ಲಟ**)

(ವಾದ್ಯಸಂಗೀತ – ಉದಯ ಪೂರ್ಣ - ಉತ್ತರರಾತ್ರಿಯರಾಗ)

೪

(ವಿದುರನ ಮನೆ ಕುಂತಿ - ವಿದುರರು ಅದೇ ರಾತ್ರಿ)

ಕುಂತಿ : ವಿದುರಣ್ಣಾऽऽ

ವಿದುರ : ಕುಂತೀದೇವಿ. ಏನು ಕರೆದಿ?

ಕುಂತಿ : ಏನಿಲ್ಲ (ನಿಟ್ಟುಸಿರು) ನೀನು ಮೌನವಾಗಿ ಕುಳಿತಿರುವೆ. ನಿನ್ನ ಮೋರೆ ಏಕೆ ಇಷ್ಟು ಗಂಭೀರ?

ವಿದುರ : (ಖಿನ್ನವಾಗಿ ನಕ್ಕು) ಮತ್ತೆ ನೀನೇಕೆ ಇಷ್ಟು ವ್ಯಾಕುಲ? ಅಂದು ಯುಧಿಷ್ಠಿರನಿಗೆ ಅಷ್ಟೊಂದು ರಣೋತ್ಸಾಹದಿಂದ ವೀರಸಂದೇಶ ಕಳುಹಿಸಿದವಳು ನೀನೇ ತಾನೆ?

ಕುಂತಿ : ಆ ಜ್ವರವೀಗ ಇಳಿಯಿತು. ಈಗ ನಮ್ಮಿಬ್ಬರಿಗೆ ಒಂದೇ ಚಿಂತೆ.

ವಿದುರ : ಯುದ್ಧಕ್ಕೆ ಸಿದ್ಧರಾಗೆಂದು ನೀನು ಯುಧಿಷ್ಠಿರನಿಗೆ ಸಂದೇಶ ಕಳುಹಿಸಿದಿ.

ಕುಂತಿ : ಸರಿ ಅದು ವಿಧಿಯಾದ ಸಂದೇಶ. ನನ್ನ ಬಾಯಿಂದ ಬಂತು. ಕುರು–ಪಾಂಡವರ ಯುದ್ಧ ಕ್ಷತ್ರಿಯ ಕುಲಕ್ಕೇ ಸರ್ವನಾಶ ಲೋಕ ಕ್ಷಯಕ್ಕೆ. ಕಾಲಪಾಶ.

ವಿದುರ : ಮತ್ತೆ?

ಕುಂತಿ : ಅಹುದಣ್ಣಾ ಅದೇ ಚಿಂತೆ ಅದಕ್ಕೇನು ಗತಿ?

ವಿದುರ : (ಖಿನ್ನನಾಗಿ ನಕ್ಕು) ಇನ್ನೇನು? ವೀರರಿಗೆ ಸದ್ಗತಿ ಹೇಡಿಗಳಿ ದುರ್ಗತಿ, ಇನ್ನು ನೀನೂ ನಾನೂ ಚಿಂತಿಸಿ ಫಲವೇನು? ಶ್ರೀ ಕೃಷ್ಣನಿದ್ದಾನೆ. ನೋಡಿಕೊಳ್ಳುತ್ತಾನೆ. ಏಳು, ರಾತ್ರಿ ಬಹ ವಾಯಿತು. ವಿಶ್ರಮಿಸೋಣ. ತಂಗಿ, ನಿನ್ನ ಮಂದಿರಕ್ಕೆ ತೆರಳ ಬಾಗಿಲಲಿ ಪಂಜಿನಾಳು ಕಾಯುತ್ತಿದ್ದಾನೆ. ನಾನು ಎದ್ದ (ಹೋಗುವನು)

ಕುಂತಿ : ಅಯ್ಯೋ ಹಾಳು ಯುದ್ಧ ಜ್ವಾಲೆಗಳು. ಪರಸ್ಪರ ಹೊಡೆದಾಡಿ ಸಾಯುವರಲ್ಲ. ಸ್ವಜನರನ್ನೆಲ್ಲ ಕೊಂದು ಪಡೆದ ಗೆಲುವು ಗೆಲುವೇ? ನೆತ್ತರದ ಕೋಡಿ ಕುಲಕ್ಷಯ. ನನಗಂತೂ ಭೀಷ್ಮ-ದ್ರೋಣ- ಕರ್ಣರಿಂದಲೇ ಭಯ. ಅಲ್ಲಿಯೂ ಭೀಷ್ಮನಿಗೆ ಮೊಮ್ಮಕ್ಕಳೆಂದು ದ್ರೋಣನಿಗೆ ಪ್ರಿಯಶಿಷ್ಯರೆಂದು ಪಾಂಡವರಲ್ಲಿ ಮಮತೆ ಉಂಟು. ಆದರೆ ಕರ್ಣ; ಅಕ್ಕಟ, ಅಬ್ಬ ಆ ದುರ್ಯೋಧನನ ಬೊಗಸೆ ಯಿಂದ ನೀರು ಕುಡಿದು ನನ್ನ ಮಕ್ಕಳ ಮೇಲೆ ವಿಷ ಕಾರುತ್ತಾನೆ. ದ್ವೇಷದ ದಳ್ಳುರಿಯಾಗಿದ್ದಾನೆ. ಅವನೊಬ್ಬನೆ ನಮಗೆ ಎದೆಗಿಚ್ಚು ಹೇಗಾದರೂ ಅವನನ್ನು ಒಲಿಸಿಕೊಳ್ಳಲೇಬೇಕು ಹೇಗೆ? ಶ್ರೀಕೃಷ್ಣ ನಿಗೇ ಕರಗಲಿಲ್ಲ ಆತ. ಆದರೂ ನನ್ನ ತಾಯ್ನುಡಿಗೆ ಒಲಿಯ ಬಹುದು. ಒಮ್ಮೆ ಹೋಗಿ ಕಂಡು ಪ್ರಯತ್ನ ಮಾಡುವೆನ್ನು ನಾಳೆ ಸೂರ್ಯೋದಯಕ್ಕೆ...

[ದೃಶ್ಯ ಪಲ್ಲಟ]

(ವಾದ್ಯ-ಸಂಗೀತ ಉದಯದ ರಾಗ)

(ಭಾಗೀರಥಿ ತೀರ ಸ್ನಾನ ಸಂಧ್ಯಾದಿಗಳ ಸದ್ದು. ಮೊದಲು ಸಮೀಪ ಆ ಮೇಲೆ ದೂರವಾಗುತ್ತ ಹೋಗುತ್ತದೆ)

ಕರ್ಣ : ಓಂ ಭೂರ್ಭುವಸ್ವಃ
ಓಂ ತತ್ಸವಿತುರ್ವರೇಣ್ಯಂ

ಭರ್ಗೋದೇವಸ್ಯ ಧೀಮಹೀ
ಧಿಯೋಯೋನಃ ಪ್ರಚೋದಯಾತ್

(ಈ ಸದಿತ್ಯಮಂತ್ರವನ್ನು ಜಪಿಸುತ್ತಿರುತ್ತಾನೆ-ಧೀರ ಗಂಭೀರ ದನಿಯಲ್ಲಿ. ಕುಂತಿಯು ಬರುತ್ತಾಳೆ)

ಕುಂತಿ : ಅದೋ ಕರ್ಣ ಸ್ನಾನಾದಿ ಆಹ್ನಿಕಮುಗಿಸಿ ಸೌರಮಂತ್ರವನ್ನು ಜಪಿಸುತ್ತ ಸೂರ್ಯನಿಗೆ ಇದುರಾಗಿ ನಿಂತಿದ್ದಾನೆ. ಎಂಥ ಧೀರ ಉದಾತ್ತ ಠೀವಿ! ಈತ ಔದಾರ್ಯದ ಕಲ್ಪವೃಕ್ಷ! ನನ್ನ ಭಿಕ್ಷೆ ತಿರಸ್ಕರಿಸಲಾರ ಓ ಎಂಥ ಬಿಸಿಲು ಸೂರ್ಯದೇವನು ಬರಿಗಣ್ಣು ಬಿಟ್ಟಿದ್ದಾನೆ ನನ್ನ ನೋಡಿ. ಕರ್ಣನ ಜಪ ಮುಗಿಯುವ ತನಕ ಹಿಂದೆಯೆ ಜಪ್ಪಿಸಿ ನಿಲ್ಲುತ್ತೇನೆ.

ಕರ್ಣ : ಆದಾರು ಹೆಣ್ಣು ಆಕೃತಿ? ಮೋರೆ ಮುಸುಕುಹಾಕಿ ಇತ್ತ ಬರುವಂತಿದೆ. ಬಾಡಿದ ತಾವರೆಯ ಬಳ್ಳಿಯಂತೆ ಬಳಕುತ್ತಾಳೆ. ಅರೇ ನನ್ನ ಬಳಿಗೇ ಬಂದಳು! ಓ ಗೊತ್ತಾಯಿತು. ಇವಳು ಕುಂತಿದೇವಿ ಪಾಂಡವರ–ನನ್ನ–ಹಡೆದವ್ವ-ಅಮ್ಮಾ ಇದೋ ನಾನು ಅಧಿರಥ ರಾಧೆಯರ ಪುತ್ರ ವಸುಷೇಣ ಕರ್ಣ ಅಭಿವಂದಿಸುತ್ತೇನೆ.

(ಕುಂತಿ ಬಿಕ್ಕಿ ಬಿಕ್ಕಿ ಅಳುವ ದನಿ) ಇದೇನು ತಾಯಿ ಈ ಅಳು ನಾನು, ರಾಧೇಯ.......

ಕುಂತಿ : (ಬಿಕ್ಕುತ್ತ) ಅಲ್ಲ. ಅಲ್ಲ ನೀನು ರಾಧೇಯನಲ್ಲ. ಕಂದಾ ಕಾಂತೇಯ. ನನ್ನ ಹೊಟ್ಟೆಯ ಕೂಸು ನೀನು ಚೊಚ್ಚಲ ಕೂಸು. ಬಾ, ಹೀಗೆ ಬಾ. ನನ್ನನ್ನು ಹೀಗೆ ಬಿಗಿದಪ್ಪು! ಆಹಾಹಾಹಾ.s

ಕರ್ಣ : (ಗದ್ಗದ) ಆಹಾ, ಧನ್ಯನಾದೆ! ಅಮ್ಮಾ, ಈ ತೋಳತೆಕ್ಕೆ ಎಂದೊ ಸಿಗಬೇಕಿತ್ತು ಅಂದು ಬೇಕಾದಾಗ ಸಿಗಲಿಲ್ಲ. ಇಂದು ಸಿಕ್ಕಾಗ ಬೇಕಾಗಿಲ್ಲ. ಅಹುದಮ್ಮ, ಬೇಕಾಗಿಲ್ಲ!

ಕುಂತಿ : ಅಯ್ಯೋ! ಹೆತ್ತ ತಾಯಿಗೆ ಹಾಗೆ ಅನ್ನಬಾರದು.

ಕರ್ಣ : ಅವ್ವಾ ನನಗೂ ಗೊತ್ತು. ಹಾಗೆ ಅನ್ನಿಸುತ್ತದೆ. ಆದರೆ ಹಾಗೆನ್ನದೆ

ವಿಧಿ ಇಲ್ಲ. ನೀನು ನನ್ನ ಹೆತ್ತ ತಾಯಿ. ನಾನು ಪ್ರಥಮಪಾಂಡವ
ಇದು ನನಗೆ ಹಿಂದೆಯೇಗೊತ್ತು. ಶ್ರೀಕೃಷ್ಣನೂ ಹೇಳು
ಮುಂಚೆಯೇ ಗೊತ್ತು.

ಕುಂತಿ : ಅಂದಾಗ ಹೀಗೇಕೆ?

ಕರ್ಣ : ಈಗ ಕಾಲ ಮಿಂಚಿ ಹೋಯಿತಮ್ಮಾ!

ಕುಂತಿ : ಇಲ್ಲ ಹೆತ್ತ ತಾಯಿ ಎಂದೆಂದಿಗೂ ಹೆತ್ತ ತಾಯಿಯೇ, ಈ ಸತ್ಯ
ಕಾಲಬಾಧೆ ಇಲ್ಲ.

ಕರ್ಣ : ಹೆತ್ತ ತಾಯಿಯೊಬ್ಬಳೇ ತಾಯಿಯಲ್ಲ. ನನಗಾಗಿ ತನ್ನ ಬಾಳನ್ನೆ
ತೆತ್ತ ತಾಯಿ, ನನ್ನ ಸಾಕಿ ಸಲಹಿ ಬಾಳು ಕೊಟ್ಟ ತಾಯಿ—ಅವಳ
ನಿಜವಾದ ತಾಯಿ, ನನ್ನ ಹಡೆದವ್ವಳಲ್ಲಿ ನಾನು ಪಡೆದದ್ದೇನು
ಅಮ್ಮಾ ನೀನು ಹುಟ್ಟಿದೊಡನೆ ನನ್ನ ಕೈ ಬಿಟ್ಟೆ. ಪಾಪದ ಪಿಂ
ಡೆಂದು ಹಳ್ಳಕ್ಕೆಸೆದು ಬಿಟ್ಟೆ.

ಕುಂತಿ : ಮಗು ಅಂದಿನ ದೇಶ ಕಾಲ ಪರಿಸ್ಥಿತಿ ನನ್ನ ಮನಸ್ಥಿತಿ ಬೇ
ಅವನ್ನು ಇಂದಿನ ಕಣ್ಣಿನಿಂದ ಕಂಡು ಅಳೆಯಬೇಡ.

ಕರ್ಣ : ಅಂದು ಇಂದು ಮುಂದೂ ಎಂದೆಂದಿಗೂ ತಾಯ್ತನ ಒಂದೆ.
ಸತ್ಯಕ್ಕೆ ಕಾಲಬಾಧೆ ಇಲ್ಲ! ಹೊರುವದು, ಹೆರುವದು ಪ್ರಕೃತಿ ಸ
ಸಲಹಿ ಬದುಕಿಸಿ ಬೆಳೆಸುವದು ಸಂಸ್ಕೃತಿ. ಅದು ನನ್ನದಾಗಲಿಲ್ಲ
ತಾಯಿ ನಿನ್ನದಾಗಲಿಲ್ಲ.

(ದೃಶ್ಯ ಪಲ್ಲಟ)

(ಹಿನ್ನೋಟ—ವಾದ್ಯಸಂಗೀತ)

೫

(ಗಂಗಾ ತೀರದಲ್ಲಿ ಚೊಚ್ಚಲ ಶಿಶುವೊಂದಿಗೆ ಕುಂತಿ)

ಕುಂತಿ : ಹೇ ಗಂಗೆ, ಪಾವನತರಂಗೆ ಈ ನನ್ನ ಕೂಸು ಕನ್ಯಾವಸ್ಥೆಯ

ಹುಟ್ಟಿದ್ದು ನಿನ್ನ ಉಡಿಯಲ್ಲಿ ಬಿಡುತ್ತೇನೇ. ಇದನ್ನು ತೇಲಿಸು ಇಲ್ಲವೇ ಮುಳುಗಿಸು ದೇವಿ, ನನ್ನ ಕೌಮಾರ್ಯವನ್ನು ಕಾಪಾಡು.

(ಮತ್ತೆ ಮೊದಲಿನ ದೃಶ್ಯ–ಉದಯ ವಾದ್ಯ ಸಂಗೀತ)

ಕುಂತಿ : ಕಂದಾ, ಆಗ ನಾನು ಹಾಗೆ ಮಾಡಿದ್ದು ಲೋಕಲಜ್ಜೆಗಾಗಿ ಅಂದು ನಾನು ಕನ್ಯೆ ನನ್ನ ಹೆಸರು ಕೆಡಬಾರದೆಂದು.

ಕರ್ಣ : (ಖಿನ್ನನಾಗಿ) ಅದು ಗೊತ್ತು. ಅಮ್ಮಾ ನಿನ್ನನ್ನು ನಾನು ದೂಷಿಸುವದಿಲ್ಲ. ಅಂದು ನೀನು ತಾಯಿಯಾಗಿ ಕೆಟ್ಟೆ. ನಾನು ನಿನ್ನ ಮಗನಾಗಿ ಕೆಟ್ಟೆ. ಆದರೂ ಧನ್ಯಗೊಳಿಸಿದೆ–ಅಧಿರಥರಾಧೆಯರ ಹೊಟ್ಟೆ.

(ಮತ್ತೆ ಹಿಂದಿನ ದೃಶ್ಯ–ಅದೇ ವಾದ್ಯ ಸಂಗೀತ)

(ಭಾಗಿರಥೀ ತೀರ ಕುದುರೆ–ಬಟ್ಟೆ ತೊಳೆವ ಸೂತ ದಂಪತಿ)

ಅಧಿರಥ : ಎಲಾ ಎಲಾ ಎಲಾ ಇಕಾ! ಲೇ ಲೇ ಲೇ.

ರಾಧಾ : ಅದೇನ್ರೀ ಕೂಕ್ಕೊಳ್ತೀರಿ? ಕುದುರೆ ಮೈ ತೊಳೆಯೊದು ಬಿಟ್ಟು?

ಅಧಿರಥ : ರಾಧೆ, ಲೇ ಅತ್ತ ಆಕಡೆ ನೋಡು ನೀರಿನತ್ತ ಅದೇನು ತೇಲ್ತಾ ಮುಳ್ಗತಾ ಬರ್ತಾ ಇದೆ.

ರಾಧಾ : ಹೌದಲಾ ಅದೇನೋ ಪೆಟ್ಟಿಗೆ.

ಅಧಿರಥ : ಅದನ್ನ ನಾ ನೋಡಿಕೊಳ್ತೀನಿ. ನೀ ಬಟ್ಟೆ ಒಗೆದು ಮುಗಿಸು ನಾ ಕುದುರೆ ಮೈ ತೊಳೆದಾಯ್ತು.

(ಕುದುರೆ ಹೇಕರಿಸುವ ದನಿಗಳು ನಡು ನಡುವೆ)

ರಾಧಾ : ಇಕಾ ನೋಡು ಪೆಟ್ಟಿಗೆ ಈ ಕಡೆಗೇ ಬಂತು ಹೊಳೆ ತಂದು ಚಲ್ತು.

ಅಧಿರಥ : ಅಬ್ಬ ಪೆಟ್ಟಿಗೆ ಚಂದೈತಿ ಒಳಗೇನಿದೆ ನೋಡ್ಲಾ?

ರಾಧಾ : ನೋಡಿ, ನೋಡಿ ಚಿನ್ನಗಿನ್ನ ಇರ್ಬೋದು. ಸಿಕ್ಕರೆ ಈ ರಥಾ ಹೊಡೆಯೋ ಚಾಕರಿನಾದ್ರೂ ತಪ್ಪೀತು. ಈ ಕೆಟ್ಟ ಸೊಕ್ಕಿನ ಕೌರವನಲ್ಲಿ.

ಅಧಿರಥ ; ಮುಚ್ಚುಬಾಯಿ, ಮಳ್ಳಹೆಣ್ಣೆ! ಇದು ಬಟಾಬಯಲು ಸುತ್ತೆಲ್ಲ ಕಿವಿ! ಇತ್ತ ಬಾ, ಆ ಪೆಟ್ಟಿಗೆ ಹಿಡಿ.

ರಾಧಾ : ಯವ್ವಾ ಯವ್ವಾ, ಇದೇನು ಇದರಲ್ಲಿ ಒಂದು ಕಂದಮ್ಮ. ಬಂಗಾರದಂಥ ಮಗು ಯಾವ ಪಾಪಿ ತಾಯಿ ಹೀಗೆ ಒಗೆದಿಟ್ಟಳು ಸೀರಿಗೆ!

ಅಧಿರಥ : ಇಕಾ ಈ ಬಾಲೆ ಕಿವಿಗೆ ಥಳಾ ಥಳಾ ಹೊಳೆತ್ತೈತಿ ಇದೇನು?

ರಾಧಾ : ಇವು ಕುಂಡ್ಲಾ ಹುಟ್ಟಾ ಕಿವಿಗೆ ಕುಂಡ್ಲಾ.

ಅಧಿರಥ : ಎತ್ಕೋ ಆ ಬಾಲೇನ ಇದೇನು ಫಕ್ಕನೆ ನಾಚಿ ಕೆಂಪಾಗ್ಬಿಟ್ಟೆ.

ರಾಧಾ : ಕಂದಮ್ಮನ ತಕ್ಕೊಂಡೆ ಕುಬ್ಸಾ ಎಲ್ಲಾ ತೋಯ್ದುಹೋಯ್ತು. (ನಾಚಿಕೆಧ್ವನಿ)

ಅಧಿ : ಇಸ್ಶಿ ಮಾಡ್ದನಾ?

ರಾಧಾ : (ನಾಚಿ ನಗುತ್ತ) ಹೋಗ್ರೀ ಹಳೇ ಹುಚ್ರು ಕಣ್ರೀ ನೀವು, ನನ್ನ ಎದೇಲಿ ಹಾಲು ತುಂಬಿ ಬಂತು.

ಅಧಿ : (ಗಹಗಹಿಸಿ ನಗುತ್ತ) ಅಯಿ ಭೇಶ ಆತುಬಿಡು. ಬಂಜೆ ಎದೆಗೆ ಹಾಲು ಅಂದ್ರೇನು. ಈ ಕಂದ ನಿನ್ನ ಮಗ ಅಂತ ಇಟ್ಕೋ.

ರಾಧಾ : ಇಟ್ಕೊಂಡ ಬಿಡ್ಲಾ? ಈಗ ನನ್ನ ಮಗು. (ಮುತ್ತಿಟ್ಟು ಮುತ್ತಿಟ್ಟು ಅದು ಅಳುತ್ತದೆ) ಅಯ್ಯೋ ಅಳಬೇಡ ಮರಿ. ನನ್ನ ಮುದ್ದು ಮರಿ. ಅಲ್ಲಾ ಈ ನನ್ನ ಕಂದನ ಏನೆಂದು ಕರೆಯೋಣ.

ಅಧಿ : ಇನ್ನೇನು ನಮ್ಮಜ್ಜಂದೇ ಹೆಸರು–ವಸುಷೇಣ.

ರಾಧಾ : ವಷ–ವಸಣ್ಣ? (ಅಧಿರಥ ಖೊಳ್ಳನೆ ನಗುತ್ತಾನೆ)

ಅಧಿ : ಹುಚ್ಚೀ ವಸಣ್ಣಲ್ಲ ವಸುಷೇಣ.

ರಾಧಾ : ವರ್ಸೆ ವರ್ಸೇಣ (ಮತ್ತೆ ನಗು) ನಾ ಒಲ್ಲೆ ನಾನಿಡ್ತಾ ಒಂದು ಮುದ್ದಾದ ಹೆಸರು.

ಅಧಿ : ಅಯ್ತು ಹಾಗಾದ್ರೆ ಇಟ್ಟುಬಿಡು ಯಾವ್ದನು?

ರಾಧಾ : ಇಕಾ ನೋಡಿ ಹುಟ್ಟಾ ಕರ್ಣಕುಂಡ್ಲ ತೊಟ್ಕೊಂಡೆ ಬಂದಾನೆ. ನನ್ನ ಬಂಟಾ. ಅದಕ್ಕೆ ಇವಂಗೆ ಕರ್ಣ ಎಂದೆ ಕರೆಯೋಣ. (ಮಗು ಅಳುತ್ತದೆ)

ಅಧಿ : ಸರಿ ಹೋಯ್ತು ಕರ್ಣ. ಆದರೆ ಕರ್ಣ ಮುಂದೆ ಈತ ಲಂಬ ಕರ್ಣನೊ ಕುಂಬಕರ್ಣನೋ–ಏನಾಗ್ತಾನೋ (ಮಗು ಅಳುತ್ತದೆ)

ರಾಧಾ : ಅದಿರಲಿ. ಈಗ ಮಗುಗೇ ಹಸಿವೆ, ಹಾಲುಣಿಸುತ್ತೇನೆ. ಆ ಮೇಲೆ ಕುಂಭಕರ್ಣಾ.

(ಇಬ್ಬರೂ ನಗುತ್ತ ತೆರಳುತ್ತಾರೆ)

೬

[ಮತ್ತೆ ಮೊದಲಿನ ದೃಶ್ಯ – ವಾದ್ಯ ಸಂಗೀತ]

ಕರ್ಣ : ದೇವಿ, ಆ ರಾಧ ನನ್ನ ತಾಯಿ ಅವಳ ಹಾಲುಂಡು ನನ್ನ ಈ ವಜ್ರದೇಹ ಬೆಳೆಯಿತು. ನಿನ್ನಿಂದಾಗಿ ನಾನು ಕ್ಷತ್ರಿಯ ಕುಲವನ್ನು ಸಂಸ್ಕಾರವನ್ನು ಕಳೆದುಕೊಂಡೆ. ಲೋಕದಲ್ಲಿ ಯಾವ ತಾಯಿಯೂ ಹೀಗೆ ಮಾಡಿರಲಿಕ್ಕಿಲ್ಲ, ನಾನು ಸೂತಪುತ್ರನಾಗಿ ಬೆಳೆದು ಸೂತರಲ್ಲಿಯೇ ಮಡದಿ ಮಕ್ಕಳನ್ನು ಪಡೆದೆ.

ಕುಂತಿ : ಈಗಾದರೂ ನನ್ನ ಮಗನಾಗಿ ಒಲಿದು ಬಾ.

ಕರ್ಣ : ಈಗಾದರೂ ನೀನು ಏಕೆ ಬಂದಿ? ನಿನ್ನ ಸ್ವಾರ್ಥಕ್ಕಾಗಿ ನಿನ್ನವರೆ ಎಂಬ ಮಕ್ಕಳನ್ನು ಉಳಿಸಿಕೊಳ್ಳುವದಕ್ಕಾಗಿ ಅದಕ್ಕಾಗಿ ಅಷ್ಟಕ್ಕಾಗಿ ನಾನು ನಿಮ್ಮ ಪಕ್ಷಕ್ಕೆ ಬರಬೇಕಾಗಿಲ್ಲ.

ಕುಂತಿ : ನನ್ನದೇನೆ ತಪ್ಪಿರಲಿ, ಯುಧಿಷ್ಠರಾದಿಗಳು ನಿನ್ನ ಸೋದರರಲ್ಲವೆ?

ಕರ್ಣ : ಅಲ್ಲವೇ ಅಲ್ಲ ನನಗೊಬ್ಬನೆ ಸೋದರ, ಆಪ್ತ, ಮಿತ್ರ, ಸರ್ವಸ್ವ. ಆತ ಸುಯೋಧನ. ಲೋಕವೇ ದೂರ ಮಾಡಿದಾಗ ದೂಷಿಸುತ್ತಿರುವಾಗ ಸುಯೋಧನ ನನ್ನನ್ನು ಒಪ್ಪಿಕೊಂಡ; ಅಪ್ಪಿಕೊಂಡ.

ಎಂದೆಂದಿಗೂ ತಪ್ಪಿ ನಡೆಯಲಿಲ್ಲ. ನನ್ನ ಬಾಳು, ನನ್ನ ತೋಳು, ನನ್ನ ಬಲವೆಲ್ಲವೂ ಅವನಿಗೆ ಮುಡಿಪು ಅವನಿಂದ ನಾನು, ಅವನಿಗಾಗಿ ನಾನು, ಅವನಿಲ್ಲದೆ ನಾನಿಲ್ಲ.

ಕುಂತಿ : ಅಯ್ಯೋ ಇದೆಂಥ ದುರ್ಬುದ್ಧಿಯೋ?

ಕರ್ಣ : (ತೀಕ್ಷ್ಣವಾಗಿ) ಅದನ್ನು ದುರ್ಬುದ್ಧಿ ಎನ್ನಬೇಡ ಇದು ದುರ್ಬುದ್ಧಿಯಲ್ಲ. ಕರ್ತವ್ಯಬುದ್ಧಿ. ಅಮ್ಮಾ ಲೋಕದಲ್ಲಿ ಕೃತಘ್ನನಿಗೆ ಗತಿಇಲ್ಲ, ಕೃತಘ್ನನಿಗೆ ಇಹವಿಲ್ಲ ಪರವಿಲ್ಲ ಅಮ್ಮಾ ನಾನು ಪಾಂಡವರನ್ನು ಬಂದು ಸೇರುವಸಮಯ ಎಂದೋ ಕಳೆಯಿತು. ಅದು ದ್ರೌಪದಿಯ ಸ್ವಯಂವರದ ಸಮಯವಾಗಿತ್ತು. ಅದಕ್ಕೂ ಹಿಂದೆ ಧನುರ್ವಿದ್ಯೆಯ ಪರೀಕ್ಷೆಯ ಸಮಯವಾಗಿತ್ತು. ಆಗ ನೀನು ಮೂಕಾಗಿಬಿಟ್ಟೆ. ಇಂದು ಸಾವು ಬಲುದೂರ ಬಂದು ಬಿಟ್ಟಿದ್ದೇವೆ ನಾಳೆ ಯುದ್ಧ ಬಾಗಿಲಲ್ಲಿ ಕಾಯುತ್ತಿದೆ. ಈಗ ನಾನು ಪಾಂಡವರು ನನ್ನ ಸೋದರರೆಂದು ತಮ್ಮಂದಿರೆಂದು ಬಂದು ಸೇರಿದರೆ ಜೀವಗಳ್ಳನಾಗಿ ಹಾಗೆ ಮಾಡಿದೆನೆಂದು ಆಗುತ್ತದೆ. ನನ್ನ ಸತ್ಯವನ್ನು ಲೊಕ ನಂಬಲಾರದು.

ಕುಂತಿ : ಮಗು, ಏನೇ ಆದರೂ ಇದು ನೆತ್ತರದ ನಂಟು

ಕರ್ಣ : ಅಮ್ಮಾ, ಕ್ಷತ್ರಿಯನಿಗೆ ನೆತ್ತರದ ನಂಟು, ರಣಕಣದಲ್ಲಿ ಇದು ಗಾಳಿಯ ಗಂಟಲಿಗೆ ಗಂಟು ಪಾಂಡವರು ನನ್ನ ಸ್ವಾಮಿ, ಸಖ, ಸರ್ವಸ್ವನಾದ ಸುಯೋಧನನ ಶತ್ರುಗಳು ಅವನ ಹಗೆ ನನಗೆ ಹಗೆ ಅವರ ನಾಶಕ್ಕಾಗಿಯೇ ನಾನು ಬದುಕಿದ್ದೇನೆ!

ಕುಂತಿ : ಹಾಗಾದರೆ ನನ್ನ ಮಕ್ಕಳು? (ಬಿಕ್ಕಿ ಬಿಕ್ಕಿ ಅಳುವಳು)

ಕರ್ಣ : ಅಳಬೇಡ, ತಾಯಿ, ಅಳಬೇಡ ಎಂದೆಂದೂ ಹಿಂದೆ ಬಾರದಿರುವ ವಳು ಇಂದು ಬಂದಿರುವಿ ನೀನು ಬಂದ ಕಾರ್ಯ ವ್ಯರ್ಥವಾಗಬಾರದು ಆದ್ದರಿಂದ ಅಮ್ಮಾ ನಿನಗೆ ವಚನ ಕೊಡುತ್ತೇನೆ. ಇದೇ ವಚನ ನಿನ್ನೆ ಶ್ರೀಕೃಷ್ಣನಿಗೂ ನೀಡಿದ್ದೆ ನಿನ್ನ ಮಕ್ಕಳನ್ನು ಆ ಧೀರ ವೀರ (ವ್ಯಂಗ್ಯ) ಪಾಂಡವರನ್ನು ನೋಯಿಸುವದಿಲ್ಲ ನಾಳಿನ

ಯುದ್ಧದಲ್ಲಿ ನಿನ್ನವರ ಪ್ರಾಣಭಿಕ್ಷೆ ನೀಡಿದ್ದೇನೆ–ಅವರಿಗೆ ವೀರ ಸ್ವರ್ಗವಿಲ್ಲ–ಆದರೆ

ಕುಂತಿ : ಆದರೇನು?

ಕರ್ಣ : ಅರ್ಜುನನೊಬ್ಬನನ್ನು ಬಿಟ್ಟು.(ಒಮ್ಮೆಲೆ ದನಿ ಏರಿಸಿ) ಆತ ನನ್ನ ಪ್ರಥಮ ಶತ್ರು. ಪರಮಶತ್ರು, ಅವನನ್ನುಕೊಲ್ಲದೆ ಬಿಡುವದಿಲ್ಲ. ನಿನಗೆ ಆವನೇನು? ನಾನೇನು? ಕೊನೆಗೆ ಪಂಚಪಾಂಡವರೆಂದೇ ಲೋಕಪ್ರಸಿದ್ಧಿ. ನಿನಗೂ ನಿನ್ನಐವರು ಮಕ್ಕಳು ಉಳಿಯುವರು. ಆದರೆ, ಅಮ್ಮಾ, ಪ್ರಪಂಚದಲ್ಲಿ ಕರ್ಣಾರ್ಜುನರಿಬ್ಬರಿಗೂ ಸ್ಥಾನ ವಿಲ್ಲ, ಅರ್ಜುನನನ್ನು ನಾನು ಕೊಲ್ಲುವವನೆ. ಅದೇ ನನ್ನ ಬಾಳಿನ ಗುರಿ, ಬಾಣದ ಗುರಿ.

ಕುಂತಿ : ಕಂದಾ, ಇಷ್ಟು ದ್ವೇಷವೇಕೆ?

ಕರ್ಣ : ಏಕೋ ನಾನರಿಯೆ. ನಮ್ಮಿಬ್ಬರಲ್ಲಿ ಸ್ಥಿರಬದ್ಧ ಮತ್ಸರ ಕಟ್ಟಿಕೊಂಡು ಬಂದಿದೆ. ಇದು ನಿನಗೂ ಗೊತ್ತು ಅಮ್ಮಾ. ಈ ಒಂದು ಅಂಶದಲ್ಲಿ ನಾನು ನಿರುಪಾಯ; ಅಸಹಾಯ ಕ್ಷಮಿಸು, ಅರ್ಜುನನಿದ್ದರೇನು? ನಾನಿದ್ದರೇನು? ನಾನು ಅವನಿಗೇನು ಕಡಿಮೆ? ಅಲ್ಲದೆ ನಾನೇ ನಿನ್ನ ಹಿರಿಯ ಮಗ. (ವ್ಯಂಗ ನಗು)

ಕುಂತಿ : ನಿನ್ನ ಇಷ್ಟ, ಆದರೂ ನನ್ನದೊಂದು ಮಾತು ಸಲ್ಲಿಸಿಕೊಡು.

ಕರ್ಣ : ಇನ್ನೂ, ಇನ್ನೂ ಒಂದು ಮಾತಿದೆಯೆ? ಹೇಳು, ಅಮ್ಮಾ ಸಂಕೋಚಬೇಡ.

(ವಾದ್ಯಸಂಗೀತ)

೭

(ನದಿಯಿಂದ ಎದ್ದು ಬಂದು ಭಾಗೀರಥಿ ಕಾಣಿಸಿಕೊಳ್ಳುವಳು)

ಭಾಗೀರಥಿ : ಕರ್ಣಾ, ಕರ್ಣಾ. ಅವಳ ಮಾತಿಗೆ ಕಿವಿಗೊಡಬೇಡ. ಅವಿವೇಕಿ ಆಗಬೇಡ.

ಕರ್ಣ : ಅದಾರು? ಭಗವತಿದೇವಿ ಭಾಗೀರಥಿನಮಸ್ತೇ. ಇದೇನು ಆಕಸ್ಮಾತ್ ಕಂದನ ಕಾಣಲು ಬಂದೆ?

ಭಾಗೀರಥಿ : ನಿನ್ನನ್ನು ತೇಲಿಸಿದವಳು ನಾನು, ಈಗಲೂ ಉಳಿಸಲು ಬಂದೆ. ಈ ಕುಂತಿ ನಿನ್ನಿಂದ ಅರ್ಜುನನ ಪ್ರಾಣಭಿಕ್ಷೆಗೆ ಇನ್ನೇನೋ ಬೇಡ ಲಿದ್ದಾಳೆ. ಈಗಾಗಲೇ ನೀನು ಪಾಂಡವರಿಗೆ ಅಭಯವಿತ್ತೆ. ಆದರೆ ಅವರಿಂದ ನಿನಗೆ ಅಭಯದ ಅಭಿವಚನ ಈ ಮಹಾತಾಯಿ ಕೊಡಿಸುವ ಮಾತೇ ಎತ್ತಿಲ್ಲ.

ಕರ್ಣ : ಭಗವತಿ, ಅದು ಗೊತ್ತು. ತಾಯಿ. ಆದರೆ ನನ್ನದು ದಯಾದಾನ. ಸಂಧಾನವಲ್ಲ. ಇಲ್ಲಿ ನನಗೆ ಪ್ರತಿಫಲದ ಅಪೇಕ್ಷೆ ಇಲ್ಲ.

ಭಾಗೀರಥಿ : ನೀನೊಬ್ಬಹುಚ್ಚ. ನಿನ್ನ ದಾನಶೂರತ್ವಕ್ಕೆ ನೀನೇ ಮರುಳಾ ಗಿದ್ದೀಯೋ? ಅತಿದಾನದಿಂದ ಬಲಿರಾಜನೇನಾದ ನೆನೆದುಕೊ.

ಕರ್ಣ : ಆದರೆ ನಾನು ಯಾರಿಗೂ ಬಲಿಯಾಗುವವನಲ್ಲ, ನನ್ನ ರಕ್ಷಣೆ ನಾನು ಮಾಡಿಕೊಳ್ಳಬಲ್ಲೆ. ತಾಯೀ, ಆದ್ದರಿಂದ ನಾನು ದಾನದ ದಾರಿಯಲ್ಲಿ ಇಷ್ಟು ಮುಂದೆ ಬಂದೆ. ಈಗ ಇನ್ನೊಂದು ಹೆಜ್ಜೆ ದೊಡ್ಡದಲ್ಲ.

ಭಾಗೀರಥಿ : ತಥಾಸ್ತು, ನೀನಾದರೂ ಏನು ಮಾಡಬಲ್ಲೆ. ನಿನ್ನ ದೈವ ನಿನ್ನ ನಾಲಿಗೆಯಲ್ಲಿ ಆಡುತ್ತದೆ. ನಿನಗೆ ಶುಭವಾಗಲಿ.

(ಅಂತರ್ಧಾನವಾಗುವಳು)

ಕರ್ಣ : ಅಮ್ಮಾ ಕೇಳಿದಿಯಾ ಭಾಗೀರಥಿದೇವಿಯ ಎಚ್ಚರಿಕೆ,

ಕುಂತಿ : ಕೇಳಿದೆ, ನಿನ್ನ ಧೀರ ಪ್ರತ್ಯುತ್ತರವನ್ನೂ ಕೇಳಿದೆ, ನನ್ನ ಮಾತು ಇಷ್ಟೇ, ಅರ್ಜುನನೊಂದಿಗೆ ಹೋರಾಡುವಾಗ ಒಮ್ಮೆ ತೊಟ್ಟ ಬಾಣವನ್ನು ಮತ್ತೆ ತೊಡಬೇಡ.

ಕರ್ಣ : (ನಕ್ಕು) ಅದು ಸಾಧ್ಯವಿಲ್ಲ ತಾಯೀ–

ಕುಂತಿ : (ಗಾಬರಿ) ಅಂದರೆ? ಇದೊಂದು ಮಾತೂ ನಡೆಯಿಸಿಕೊಡಲಾರೆಯಾ?

ಕರ್ಣ : ಹಾಗಲ್ಲ ಅಮ್ಮಾ. ನೀನು ಬೇಡಿದ ಸಂಗತಿ ನನ್ನ ಎಂದಿನ ವ್ರತ ನಾನು ಒಮ್ಮೆ ತೊಟ್ಟ ಬಾಣ ಮರಳಿ ತೊಟ್ಟವನೆ ಅಲ್ಲ. ನನ್ನದು ಒಂದೇ ಮಾತು, ಒಂದೇ ಬಾಣ.

ಕುಂತಿ : ಸರಿ, ನನ್ನ ಈ ಒಂದು ಆಸೆ ಫಲಿಸಿತು. ಈ ಮೂಲಕವಾದರೂ ನನ್ನ ಅರ್ಜುನ ಬದುಕಲಿ.

ಕರ್ಣ : ಅಂದರೆ ಈ ಕರ್ಣ ಸಾಯಲಿ! ಸರಿ ಇದು ಅನಿವಾರ್ಯ. ಇಬ್ಬರಲ್ಲಿ ಒಬ್ಬ ಸಾಯಲೇ ಬೇಕು. 'ನನ್ನ ಅರ್ಜುನ'! ನಾನೂ ನಿನ್ನವನೇ ಅಂದಿದ್ದಿಯಲ್ಲ. ಅದು ಇಷ್ಟು ಬೇಗ ಮರೆಯಿತೇ?

ಕುಂತಿ : ಹಾಗಲ್ಲ ಮಗೂ (ಅಳುವಳು)

ಕರ್ಣ : ಅಮ್ಮಾ ಅಳಬೇಡ. ನೀನು ವೀರಮಾತೆ. ನಮ್ಮೀರ್ವರಲ್ಲಿ ಯುದ್ಧದಲ್ಲಿ ಯಾರು ಸತ್ತರೂ ಸರಿಯೆ. ಅರ್ಜುನನ ವಧೆ–ನನ್ನ ಏಕಮೇವ ಉದ್ದೇಶ. ಅದುವೆ ನನ್ನ ದೊರೆಯ ಆದೇಶ. ದೈವದ ನಿರ್ದೇಶ ಆಯಿತಲ್ಲ? ಇನ್ನೇನು ನಿನ್ನ ಉಪದೇಶ?

ಕುಂತಿ : ಇನ್ನು ನಿನ್ನ ಇಷ್ಟ, ಈಶ್ವರೇಚ್ಛೆಯೇ ಬಲಿಷ್ಠ! ಕುರುಕ್ಷೇತ್ರದಲ್ಲಿ ಕುರುಕುಲಕ್ಕೆ ವಿನಾಶ ಕಟ್ಟಿಟ್ಟಿದೆ. ನೀನು ಈ ಕುಲವನ್ನು ತಬ್ಬಿಕೊಂಡಿದ್ದೀಯೇ. ಇದು ಕರ್ಮದ ಸೆರೆ, ಕಾಲನ ಕರೆ. ನಾನಿನ್ನು ಬರುವೆ. ನಿನಗೆ ಕಲ್ಯಾಣವಾಗಲಿ ಈ ಹತಭಾಗ್ಯ ತಾಯಿಯನ್ನು ಮರೆಯಬೇಡ.

ಕರ್ಣ : ಅದು ಹೇಗೆ ಸಾಧ್ಯ? ಹುಟ್ಟಿನ ಹೊಸ್ತಿಲಲ್ಲಿ ತಾಯಿಯನ್ನು ಕಳೆದುಕೊಂಡೆ. ಈಗ ಸಾವಿನ ಹೊಸ್ತಿಲಲ್ಲಿ ತಿರುಗಿ ಕಂಡುಕೊಂಡೆ ನಿನ್ನ ಪಾದ ಧೂಳಿ ನನ್ನಹಣೆಗಿರಲಿ ಅಮ್ಮಾ. ಒಮ್ಮೆ ಬಿಗಿದಪ್ಪಿಕೋ ಅಮ್ಮಾ.

(ಇಬ್ಬರೂ ಬಿಕ್ಕು–ಆಲಿಂಗನ)

ಕರ್ಣ : ಆಹಹ ! ಇದು ಸ್ವರ್ಗ ! ಆತ್ಮೋತ್ಸರ್ಗ !

ವಾಸವದತ್ತಾ

(೧೯೬೪)

ಪಾತ್ರಗಳು :

ಉಪಗುಪ್ತ (ಬೌದ್ಧಗುರು)
ಅಶೋಕ ಸಮ್ರಾಟ
ಲಕ್ಷ್ಮೀಕಾಂತ (ಧನಿಕಶ್ರೇಷ್ಠಿ)
ವಾಸವದತ್ತ (ವೇಶ್ಯೆ)
ವಾಸಂತಿ (ಸಖಿ)
ಡಂಗುರದವ

ಸಿಂಹಗರ್ಜನೆ, ನದಿ-ನಾವೆ, ಹೆಜ್ಜೆ-ಗೆಜ್ಜೆ ಸದ್ದುಗಳು

[ಈ ರೂಪಕದಲ್ಲಿ ಇತಿಹಾಸದ ಅಂಶ ಕಡಿಮೆ; ಆಖ್ಯಾಯಿಕೆಯಂದರ… ಹೆಚ್ಚು. ಆದರೆ ಎಲ್ಲವೂ ಕಾವ್ಯಸತ್ವ-ಕಲಾಸತ್ವ-ಭಾವತತ್ವ]

ಡಂಗುರದವ : (ನಗಾರಿಯ ಅಬ್ಬರದ ನಂತರ) ಕೇಳಿರಿ, ಪೌರರೇ. ಇಂದು ಪಾಟಲೀಪುತ್ರ ನಗರದಲ್ಲಿ ಮಹೋತ್ಸವವನ್ನಾಚರಿಸಬೇಕೆಂದು ಸಮ್ರಾಟ ಅಶೋಕ ಚಕ್ರವರ್ತಿಗಳ ಕಟ್ಟಪ್ಪಣೆ. ಕಲಿಂಗ ವಿಜಯದ ನಂತರ ಆ ಯುದ್ಧದಲ್ಲಿ ನಡೆದ ಹಿಂಸೆ ರಕ್ತಪಾತಗಳಿಗೆ ಹೇಸಿ ಸಮ್ರಾಟ ಅಶೋಕರು ಇನ್ನು ಯುದ್ಧವನ್ನ ತ್ಯಜಿಸಿ ಖಡ್ಗವನ್ನು ಮುರಿದೊಗೆದು ಧರ್ಮಸಾಮ್ರಾಜ್ಯ ಸ್ಥಾಪನೆ ಕೈಗೊಂಡಿದ್ದಾರೆ. (ನಗಾರೆ) ಅದರ ಸ್ಮಾರಕವಾಗಿ ಈ ದಿನ ಮನೆ ಮನೆಯಲ್ಲಿ ಹಬ್ಬ ವಾಗಬೇಕು. ಬೀದಿ ಕೇರಿಗಳಲ್ಲಿ ತೋರಣ ಓರಣಗಳಾಗಬೇಕು. (ನಗಾರೆ)

ವಾಸವದತ್ತಾ : ಕೇಳಿದೆಯೇನೇ ವಾಸಂತೀ.ಮನೆ ಮನೆಗೆ ಹಬ್ಬವಂತೆ.ರಾಜನಿಗೆ ಯುದ್ಧ ಬೇಡವಾದರೆ ಅವನ ಶತ್ರುಗಳು ಹಬ್ಬ ಮಾಡಲಿ. ನಮಗೇಕೆ ಈ ಉತ್ಸವ-ಸಂಭ್ರಮ?

ವಾಸಂತಿ : ಹಾಗಲ್ಲ ದೇವಿ ವಾಸವದತ್ತಾ, ಇದು ಬರೆ ಯುದ್ಧ ಮುಗಿತಾಯ ವಲ್ಲ. ಅಶೋಕ ಚಕ್ರವರ್ತಿಗೆ ಪುನರ್ಜನ್ಮ.

ವಾಸವದತ್ತಾ : ಪುನರ್ಜನ್ಮ? ಅಂದರೆ, ಅವರು ಸಾಯುವ ಮೊದಲೇ?

ವಾಸಂತಿ : ಹೂಂ. ಅವರೀಗ ಬೌದ್ಧಧರ್ಮವನ್ನು ಸ್ವೀಕರಿಸುವರಂತೆ ಹಿಂಸೆಗೆ ಹೇಸಿ

ವಾಸವದತ್ತಾ : ಯಾರಿಂದ ಈ ಧರ್ಮದೀಕ್ಷೆ?
(ಕೆಳಗೆ ದೂರದಿಂದ ಸಮೀಪಿಸುವ ಮಧುರ ಗಂಭೀರ ಧ್ವನಿ-'ಓಂ ಮಣಿಪದ್ಮೇ ಓಂsss ನಮೋ ಬುದ್ಧಾಯ ನಮೋ ಬುದ್ಧಾಯ')

ವಾಸಂತಿ : ಅಕೋ ಕೇಳಿದಿರಾ, ಅವರೇ. ಅವರೇ ಸಮ್ರಾಟರಿಗೆ ಹೊಸ ಧರ್ಮದ ದೀಕ್ಷೆ ಕೊಡುವರಂತೆ.

ವಾಸವದತ್ತಾ : ಯಾರವರು? ಬಾ. ಗವಾಕ್ಷದಿಂದ ನೋಡೋಣ. ಓ ಎಂಥ

ರೂಪ! ಎಂಥ ತೇಜ! ಎಂಥ ಚರ್ಯೆ! ಎಂಥ ನಿಲುವು! (ಮೆಲು ದನಿಯಲ್ಲಿ ಕಂಪನ) ಇವರಾರೇ?

ವಾಸಂತಿ : ಇವರು ಗೊತ್ತಿಲ್ಲವೇ? ಭಿಕ್ಷು ಉಪಗುಪ್ತರು. ಗುರು ಅಮಿತಾಭರ ಶಿಷ್ಯರು.
(ಗವಾಕ್ಷದ ಕೆಳಗೇ ಸ್ಪಷ್ಟ ದನಿ)

ಉಪಗುಪ್ತ : ಓಂ ಮಣೀಪದ್ಮೇ, ಓಂ. ನಮೋ ಬುದ್ಧಾಯ.

ವಾಸವದತ್ತಾ : ಹೋಗೇ ವಾಸಂತಿ. ಕೆಳಗೆ ಹೋಗಿ ಅವರನ್ನು ಇಲ್ಲಿಗೆ ಕರೆದು ತಾ. ನಾವು ಸತ್ಕರಿಸೋಣ. ಹೂಂ ಹೋಗು.(ವೇಗವಉಸಿರಾಟ)

ವಾಸಂತಿ : ಸರಿ, ಗೊತ್ತಾಯಿತು. (ನಗುತ್ತ ಕೆಳಗಿಳಿದು ಹೋಗುವಳು.)

ವಾಸವದತ್ತಾ : ಓ ಇದೆಂಥ ತೇಜಸ್ಸು, ಎಂಥ ಮಾಧುರ್ಯ. ಏನು ಓಜಸ್ಸು, ಏನು ಗಾಂಭೀರ್ಯ! (ಕೆಳಗಿನಿಂದ) -"ಭವತಿ ಭಿಕ್ಷಾಂ ದೇಹಿ") ವಾಣಿಯೋ ವೀಣೆಯಂತೆ–ಅಲ್ಲ, ಅಲ್ಲ ಶಂಖನಾದದಂತೆ. ಇದೇನು ಅವಸ್ಥೆ ನನ್ನದು? ಅಬ್ಬ, ಅವರ ದನಿಗೆ ಮೈಯೆಲ್ಲಾ ಜುಮ್ಮೆಂದಿತಂ ರೋಮ -ರೋಮ ಕೆರಳಿದೆ. ಆಂs ಆಂss ಹೇಗೆ ಕುಪ್ಪಸ ಬಿಗಿಯಾಗಿದೆ. ಜಡೆ ಸಡಿಲಾಯಿತು. ಅದೋ ಮುಡಿ ಹೂವೆಲ್ಲ ಚೆಲ್ಲಿ ಉದುರಿತು. ಓ, ಹೂ ಉರುಳಿ ಇಳಿದು ಅವರ ಪಾದಕ್ಕೆ ಬಿದ್ದವು! ಅಯ್ಯೋ! ಇದೇನು, ಅವರ ಭಿಕ್ಷಾಪಾತ್ರೆಯಲ್ಲಿ ಬಿದ್ದವು! ಅವರು ತಲೆ ಎತ್ತಿ ನೋಡಿಯೇ ಬಿಟ್ಟರು ನನ್ನ. ಎಂಥ ಕಣ್ಣು, ವಜ್ರ ಮಿಂಚಿದಂತೆ ಆs ಹಾs ವಾಸಂತೀ.... ಎಲ್ಲಿ ಸತ್ತಿಯೋ?

ವಾಸಂತಿ : (ಕೆಳಗಿನಿಂದ) ದೇವೀ ಬಂದೆ. (ವಾಸಂತಿ ಏರಿ ಬರುವ ಸದ್ದು ತುಸು ಕರ್ಕಶ ನೇಪುರಗಳಿಂದ)

ವಾಸವದತ್ತಾ : ಏನೇ? ಅವರೆಲ್ಲಿ?

ವಾಸಂತಿ : ಅವರಲ್ಲಿ ಕೆಳಗೆ ಬಾಗಿಲಲ್ಲಿ. ಅವರಿಗೆ ಭಿಕ್ಷೆ ಮಾತ್ರ ಬೇಕಂತೆ. ಅಕಾ.

ಉಪಗುಪ್ತ : ಭವತಿ ಭಿಕ್ಷಾಂ ದೇಹಿ,

ವಾಸವದತ್ತಾ : ನಾನೇ ಹೋಗಿ ಕರೆದು ತರುತ್ತೇನೆ,ನೋಡು! (ಓಡುತ್ತ ಕೆಳಗಿಳಿದು ಹೋಗುವ ಹೆಜ್ಜೆ ಗೆಜ್ಜೆಗಳ ಸದ್ದು) ಓ ಭಿಕ್ಷು ತಮ್ಮ ಭಿಕ್ಷಾ ಪಾತ್ರೆ ಮುಂದೆ ಮಾಡಿ.

ಉಪಗುಪ್ತ : ಆದರೆ ದೇವಿ ನಿಮ್ಮ ಎರಡುಕೈಗಳು ಬರಿದು, ಇವೇನಂ ಕೊಡಬಲ್ಲವು?

ವಾಸವದತ್ತಾ : ಈ ಮುಡಿ ಹೂ ಕೊಡಬಲ್ಲವು, ಕೊಳ್ಳಿ.

ಉಪಗುಪ್ತ : ಮುಡಿ ಹೂ? ಈ ಭಿಕ್ಷುಗೇಕೆ ಹೂವು?

ವಾಸವದತ್ತಾ : (ನಕ್ಕು) ಇದು ಪ್ರಸಾದ ಕೊಳ್ಳಿ

ಉಪಗುಪ್ತ : ಪ್ರಸಾದ? ಯಾರದು?

ವಾಸವದತ್ತ : ಸೌಂದರ್ಯದೇವತೆಯುದು. ಇಕೋ ಇವಳು ನಿಮ್ಮಲ್ಲಿ ಒಲಿದು ಬಂದಿದ್ದಾಳೆ. ನಖಶಿಖಾಂತ ಮೋಹದಲ್ಲಿ ಮೋಹರಿಸಿ ನಿಂತಿದ್ದಾಳೆ.

ಉಪಗುಪ್ತ : ಈ ಉಪಗುಪ್ತನಿಗೇನು ಉಪಯೋಗ ಈ ಬರಿಗೈ ಪ್ರಸಾದ? ನಾನೊಬ್ಬ ಬಡ ಸನ್ಯಾಸಿ, ಹಸಿದಿದ್ದೇನೆ. ಹಿಡಿ ಅನ್ನ ಹಾಕಿ.

ವಾಸವದತ್ತಾ : ಅನ್ನ! ನನ್ನಲಿಗೆ ಬಂದು ಬರೇ ಅನ್ನ ಬೇಡುವದೆ? ಅನ್ನ ಕೊಡಲು ಇದೇನು ಅನ್ನಸತ್ರವೇ? ಓ ಭಾಗ್ಯವಂತ ಭಿಕ್ಷು ಈ ಕೈ ಬರಿದಲ್ಲ.

ಉಪಗುಪ್ತ : ಸರಿ ಗೊತ್ತು. ಇವು ರತ್ನಾಭರಣಗಳಿಂದ ತುಂಬಿವೆ. ಆದರೆ ಭಿಕ್ಷುಕನಿಗೆ ಈ ಆಭರಣಗಳೇಕೆ?

ವಾಸವದತ್ತಾ ; ಅಲ್ಲ ಭಗವಾನ, ಈ ಕೈಗಳು ಅನ್ನಕ್ಕಿಂತಲೂ ಹೆಚ್ಚಿನದನ್ನು ರನ್ನಕ್ಕಿಂತಲೂ ಮಿಗಿಲಾದ್ದನ್ನು ಕೊಡಬಲ್ಲವು-ಕೊಡಬಂದಿವೆ. ಈ ಬೊಗಸೆಯುಲ್ಲಿ ನನ್ನ ಯೌವನವಿದೆ. ಸೌಂದರ್ಯವಿದೆ, ನನ್ನ ಹೃದಯುವಿದೆ. ಜೀವನ ಸರ್ವಸ್ವವೇ ಇದೆ. ಹೂಂ ಸುಮ್ಮನೆ ನಿಂತಿರುವಿರೇಕೆ? ಮುಂದೆ ಮಾಡಿ ಭಿಕ್ಷಾಪಾತ್ರೆ!

ಉಪಗುಪ್ತ : (ದಿಗ್ಭ್ರಾಂತ) ಅಂ ...ದ...ರೆ?

ವಾಸವದತ್ತಾ : ಅಂದರೇನು? ಅಯ್ಯೋ ಮುಗ್ಧ ಭಿಕ್ಷು! ನನ್ನನ್ನೇ ತಮಗೆ ಒಪ್ಪಿಸಿಕೊಳ್ಳುತ್ತಿದ್ದೇನೆ ಪರಿಗ್ರಹಿಸಿರಿ, ಅನುಗ್ರಹಿಸಿರಿ.

ಉಪಗುಪ್ತ : (ನಕ್ಕು ನಿರ್ವಿಕಾರವಾಗಿ) ನಿಮ್ಮನ್ನು ಪಡೆದು ನಾನು ಏನು ಮಾಡಲಿ ದೇವಿ? ನಿಮ್ಮ ಸೌಂದರ್ಯ ಐಶ್ವರ್ಯ ಎಲ್ಲ ಈ ನಗರದ ಶ್ರೀಮಂತರಿಗೆ, ಸಮ್ರಾಟ ಅಶೋಕನಿಗೆ ಯೋಗ್ಯ, ಭೋಗ್ಯ! ನಮ್ಮಂಥ ಭಿಕ್ಷುಕರಿಗೇಕೆ. ಈ ಭಾಗ್ಯ? ಈ ಪಾತ್ರೆಗೆ ಭಿಕ್ಷೆನೀಡಿ ಅಮ್ಮಾ.

ವಾಸವದತ್ತಾ : ನಿಮ್ಮ ಭಿಕ್ಷೆಗೆ ನಾನು ಪಾತ್ರ. ನನ್ನನ್ನೇ ಅಮ್ಮಾ ಅನಿಸಿಕೊಳ್ಳು ವಂತೆ ಮಾಡಿ.

ಉಪಗುಪ್ತ : ನಮೋ ಬುದ್ಧಾಯ. (ಅಸಹ್ಯಪಟ್ಟು)

ವಾಸವದತ್ತಾ : ಅಯ್ಯೋ ಮಂಕೇ. ನಾನು ನಿಮ್ಮವಳಾಗಿ ಬಂದಿದ್ದೇನೆ. ಸರ್ವ ಸ್ವದೊಂದಿಗೆ. ಸರ್ವಸ್ವ ಬಿಟ್ಟು ನಿಮ್ಮ ಕೈ ಹಿಡಿಯಲು ಕಾಲು ಹಿಡಿಯಲು ಬಂದಿದ್ದೇನೆ. ಉಪಗುಪ್ತ ನಿಮ್ಮ ಈ ಅಂಗಾಂಗದ ಕೌಮಾರ್ಯ. ಅಸಂಗನ ಸೌಕುಮಾರ್ಯ ಈ ಭಿಕ್ಷುವೃತ್ತಿಗೆ, ಭಿಕ್ಷಾ ಪಾತ್ರೆಗೆ ಅಲ್ಲ. ನೀವು ಬರುವದು ನನ್ನಂಥವಳಿಗೆ ಪ್ರೇಮ ಭೀಕ್ಷೆ ನೀಡಲಿಕ್ಕೆ!

ಉಪಗುಪ್ತ ; (ಗಾಬರಿ) ಎಂಥ ಮಾತು! ನಮೋ ಬುದ್ಧಾಯ!ಅಂಥದೇನಿದೆ ನನ್ನಲ್ಲಿ?

ವಾಸವದತ್ತಾ : ಅಯ್ಯೋ ಅಪ್ರಬುದ್ಧರೇ, ನಿಮ್ಮಲ್ಲಿ ಏನಿದೆ? ನಿಮ್ಮನ್ನೇ ನೀವು ನೋಡಿಕೊಳ್ಳಿ,

ಉಪಗುಪ್ತ : ತಥಾಸ್ತು. ದೇವಿ ನಮ್ಮ ತಥಾಗತನೂ ಇದನ್ನೇ ಹೇಳಿದ್ದು– ನಿಮ್ಮನ್ನೇ ನೀವು ನೋಡಿಕೊಳ್ಳಿ ಬೋಧಿಸತ್ವರದು ಅದೇ ಸಂದೇಶ. ನನ್ನ ಗುರು ಅಮಿತಾಭರದೂ ಅದೇ ಆದೇಶ ದೇವಿ. ನಿನ್ನದೂ ಅದೇ ಉಪದೇಶ. ಧನ್ಯ ತಾಯಿ. "ಆತ್ಮಾನಂ ವಿದ್ಧಿ!"

ವಾಸವದತ್ತಾ : ಇದೇನು ಅನ್ನುತ್ತಿದ್ದೀರಿ. ನನ್ನ ಮಾತೇ ನಿಮ್ಮ ಗುರುಗಳು ಹೇಳಿದ್ದೇ. ಸರಿ ಹೋಯಿತು ಬಿಡಿ. (ಖಿನ್ನ ನಿಟ್ಟುಸಿರು)

ಉಪಗುಪ್ತ : ಅಹುದು ಸುಂದರಿ. ನನ್ನಲ್ಲಿ ಏನಿದೆ ಎಂಬುದನ್ನು ನೋಡಿ ಕೊಳ್ಳುತ್ತಿದ್ದೇನೆ. ಅದೇ ಹಟ, ಅದೇ ಹಾದಿ ಹಿಡಿದಿದ್ದೇನೆ.

ವಾಸವದತ್ತಾ : ಹಾಗಾದರೆ ನನ್ನ ಬೇಡಿಕೆ.

ಉಪಗುಪ್ತ : ಅವಕ್ಕೆ ಇನ್ನೂ ತಡವಿದೆ. ಅದು ನನ್ನಲ್ಲಿ, ನನ್ನನ್ನು ನಾನು ನೋಡಿಕೊಂಡ ಮೇಲೆ. ನಾನಿನ್ನು ಬರುವೆ.

ವಾಸವದತ್ತಾ : (ಕಳವಳ) ಅಯ್ಯೋ ದೇವರೇ, ನನ್ನನ್ನು ಧಿಃಕ್ಕರಿಸಿ ಹೋಗುವಿರಾ?

ಉಪಗುಪ್ತ : ಛೇ, ಛೇ ಧಿಃಕರಿಸುವವರು ನಾವಲ್ಲ. ಬೋಧಿಸತ್ವನ ತತ್ವ ಪವರು ನಾವು. ಬಂದುದೆಲ್ಲ ಸ್ವೀಕರಿಸುವವರು. ಆದರೆ ಅದಕ್ಕೂ ಕಾಲ ಕೂಡಿ ಬರಬೇಕು.

ವಾಸವದತ್ತಾ ; ಹಾಗಾದರೆ ಸ್ವಾಮಿ, ಇನ್ನೆಂದು ತಮ್ಮ ಭೆಟ್ಟಿ?

ಉಪಗುಪ್ತ : ಸಮಯ ನಿರೀಕ್ಷಿಸು ದೇವಿ. ಕೂಡಿ ಬಂದಾಗ ಬಂದು ಕೂಡುವೆನು.

ವಾಸವದತ್ತಾ ಹಾಗಿದ್ದರೆ ಆಶೀರ್ವದಿಸಿರಿ. ವಾಸಂತೀ. ಭಿಕ್ಷುವಿನ ಪಾತ್ರೆ ತುಂಬ ಧಾನ್ಯ ನೀಡು.

ವಾಸಂತಿ : ಆಗಲಿ. (ಬಂದು ನೀಡಿಹೋದ ಸದ್ದು–ಹೆಜ್ಜೆ ಗೆಜ್ಜೆ ಇತ್ಯಾದಿ)

ಉಪಗುಪ್ತ : ಶುಭಮಸ್ತು. ಓ ಮಣೀ ಪದ್ಮೇ,ಓಂ. ನಮೋ ಬುದ್ಧಾಯ. (ಶಬ್ದಗಳ ಸದ್ದೂ ಆವಿಗೆಗಳ ಸದ್ದೂ ದೂರ ಹೋಗುವವು. ವಾದ್ಯಸಂಗೀತ)

೨

ಉಪಗುಪ್ತ : ಅರೇ ಹೊತ್ತು ಮೀರಿತು. ಕತ್ತಲು ಕವಿಯಿತು. ಈ ಕಟ್ಟಡವಿ ಕಳೆಯುವದು ಎಂತೋ? ಭಿಕ್ಷೆಗಾಗಿ ಈ ದಿನ ಸುತ್ತಾಡಿದ್ದೂ

ತುಂಬ ಸುಸ್ತಾಯಿತು. ಸುಸ್ತಾಯಿತು. ಅಬ್ಬ, ಲಗುಬಗೆಯಿಂದ ಇನ್ನೂ ಸಂಘಾರಾಮವನ್ನು ಸೇರಬೇಕು. (ಸಿಂಹ ಗರ್ಜನೆ ಸಮೀಪಿಸುವದು.) ಇದೇನು ಬಂತು ಸಂಕಟ? ಅದೋ ಸಿಂಹ. ಮರದಡಿಗೆ ಎದ್ದು ಕೂತಿದೆ. (ಗರ್ಜನೆ ತೀವ್ರ) ಅಕೋ ನಮ್ಮನ್ನು ನೋಡಿಯೇ ಬಿಟ್ಟಿತು. (ಗರ್ಜನೆ ಇನ್ನೂ ಹತ್ತಿರ) ಎಲೆ ಮೃಗರಾಜನೇ ನಮಸ್ತೆ, ನನಗೆ ಹಾದಿ ಬಿಡು. (ಇನ್ನೂ ದೊಡ್ಡ ಗರ್ಜನೆ) ಏನು ಹಸಿದಿರುವೆಯಾ? ನಿನ್ನ ಹೊಟ್ಟೆಗೆ ನನ್ನ ದೇಹ ಬೇಕೇ? ಏನಿದೆ ಅಂತ ಈ ದೇಹದಲ್ಲಿ? ಈ ಬಡ ಭಿಕ್ಷುವಿನಿಂದ ನಿನ್ನ ಹೊಟ್ಟೆ ಎಷ್ಟು ತುಂಬೀತು? ಪಾಪ, ತುಂಬ ಹಸಿದಿರುವಿ. (ಇನ್ನೂ ಗರ್ಜನೆ, ಮಂದ್ರ ತೀವ್ರವಾಗಿ ತೀರ ಹತ್ತಿರ) ಇಕೋ, ನಾನು ಸಿದ್ಧ–ನನ್ನನ್ನು ಕೊಂದು ಬಿಡು. ಬೇರೆ ಬಡಪ್ರಾಣಿಗಳು ಉಳಿಯಲಿ. (ಸಿಂಹ ಗರ್ಜನೆಯೊಂದಿಗೆ ಉಪಗುಪ್ತನ ಮೇಲೆ ಹಾರುತ್ತಿರುವಾಗ ಮರೆಯಿಂದ ಅದಕ್ಕೆ ಬಾಣ ಪ್ರಯೋಗ.)

ಮರೆಯಿಂದ : ಸ್ವಾಮಿ ಆಚೆ ಸರಿಯಿರಿ. (ಬಾಣಕ್ಕೆ ಸಿಂಹ ಬೀಳುವ ಸದ್ದು. ಅದರ ಭೀಮಗರ್ಜನೆಗೆ ಅಡವಿಯ ಹಕ್ಕಿಪಕ್ಕಿಗಳೆಲ್ಲ ಚಿಲಿಪಿಲಿ ಕೂಗಾಡಿ ಹಾರಿ ಹೋಗುವವು.)

ಉಪಗುಪ್ತ : ಅಯ್ಯೋ ಯಾರವು? ಬಡಸಿಂಹವನ್ನು ಹೊಡೆದು ಕೆಡುಹಿದರು?

ಅಶೋಕ : ನಾನು ಭಿಕ್ಷುವರ್ಯರೇ-ಅಶೋಕ ಸಮ್ರಾಟ, ಸಿಂಹ ತಮ್ಮನ ಕೊಲ್ಲುತ್ತಿತ್ತು. ತಮ್ಮ ಪ್ರಾಣ ಉಳಿಸಿದೆ. ಅಭಿವಂದಿಸುತ್ತೇನೆ.

ಉಪಗುಪ್ತ : ಅಶೋಕ ರಾಜನೇ, ಇದೇನು ಮಾಡಿದಿ?–ಶೋಕದ ಕೆಲಸ? ಅನ್ಯಾಯವಾಗಿ ಸಿಂಹವನ್ನು ಹಿಂಸಿಸಿದಿರಿ. ನೋಡಿ ಹೇಗೆ ವಿಲಿ ವಿಲಿ ಒದ್ದಾಡುತ್ತಿದೆ. ತಾಳು ವನರಾಜಾ, ತಾಳು. ಎಲ್ಲಿ ನಟ್ಟಿದೆ–ಬಾಣ? ಹಾಂ ಇಲ್ಲಿ ತಡೆ. ಹಾ. (ಸಿಂಹದ ಎದೆಯ ಬಾಣ ಕೀಳಲು ಯತ್ನಿಸುತ್ತಾನೆ)

ಅಶೋಕ ; ಧನ್ಯ, ಉಪಗುಪ್ತರೇ ಧನ್ಯ. ತಮ್ಮನ್ನು ಕೊಲ್ಲಲು ಬಂದ

ಹಿಂಸ್ರ ಪಶುವಿನ ಪ್ರಾಣ ಉಳಿಸಲು ಹೋಗುತ್ತಿರುವಿರಿ. ಅದರ ಎದೆಯು ಬಾಣ ಕಿತ್ತಿರಿ.

ಉಪಗುಪ್ತ : ಹಿಂಸ್ರಪಶು? (ನಕ್ಕು) ಪಾಪ, ಅದು ಹೇಳಿಕೇಳಿ ಪಶು ಬುದ್ಧಿಗೇಡಿ. ಹಸಿವೆ ಹಿಂಗಿಸಲು ಹೊಡೆದು ಕೊಲ್ಲುತ್ತದೆ ಆದರೆ ಬುದ್ಧಿಬಲ್ಲ ಮನುಷ್ಯ? ಪಶುವಿಗಿಂತ ಕಡೆ.

ಅಶೋಕ : ಅಂದರೇನು ಸ್ವಾಮೀ?

ಉಪಗುಪ್ತ : ಸಿಂಹ ಸಿಂಹವನ್ನು ಕೊಲ್ಲುವದಿಲ್ಲ. ಆದರೆ ಮನುಷ್ಯ ಮನುಷ್ಯರನ್ನು ಯಾವ ಹೇಸಿಕೆ-ನಾಚಿಕೆ ಇಲ್ಲದೆಕೊಲ್ಲುತ್ತಿರುತ್ತಾನೆ

ಅಶೋಕ : ಕ್ಷಮಿಸಿ ಸ್ವಾಮಿ. ತಪ್ಪಾಯಿತು, ತಮ್ಮ ಮಾತು ಮರ್ಮಕ್ಕೆ ನಾಟಿತು, ಈ ಬಾಣ ಸಿಂಹವ ಎದೆ ಸೇರಿದಂತೆ. ಮೊನ್ನೆ ತಾನೇ ಕಳಿಂಗ ಯುದ್ಧ ಭೀಭತ್ಸ ಹಿಂಸೆಯ ಹತ್ಯಾಕಾಂಡದ ಪರಿಣಾಮ ಗಳಿಗೆ ತಾವು ನನ್ನ ಕಣ್ಣು ತೆರೆಸಿದ್ದೀರಿ. ಯುದ್ಧದ ಭೂಮಿಯಲ್ಲಿ ನನ್ನನ್ನು ಈ ನಡುರಾತ್ರಿ ಸುತ್ತಾಡಿಸಿ ಅಂದು ಆ ನೋವುನರಳಿಕೆ ಗಳ ನರಲೋಕವನ್ನೇ ನನಗೆ ಕಾಣಿಸಿ ಕಂಗೆಡುವಂತೆ ಮಾಡಿದಿರಿ.

ಉಪಗುಪ್ತ : ಆದರೆ ನೀನು ಇಂದು ಮತ್ತೆ ಹಿಂಸೆಗೆ ಈಣಿಯಾದಿ.

ಅಶೋಕ : ಇದು ಅಂಥ ಹಿಂಸೆಯಲ್ಲ, ಸ್ವಾಮಿ. ತಮ್ಮ ಪ್ರಾಣರಕ್ಷಣೆಗಾಗಿ ಹಿಂಸ್ರಸಿಂಹಕ್ಕೆ ತಕ್ಕ ದಂಡನೆ.

ಉಪಗುಪ್ತ : ಸಿಂಹಕ್ಕೆ ಹಿಂಸೆಯೇ ಧರ್ಮ. ಆದರೆ ಮನುಷ್ಯನಿಗೆ ಅಹಿಂಸೆಯೇ ಪರಮ ಧರ್ಮ. ದಯೆಗಿಂತಲೂ ಮಿಗಿಲಾಗಿ ದಂಡನೆ ಬೇರೆ ಇಲ್ಲ.

ಅಶೋಕ : ಕ್ಷಮಿಸಿ ಸ್ವಾಮಿ, ತಮ್ಮ ಉಪದೇಶ ನನಗೆ ಎಂದೆಂದೂ ಶಿರೋಧಾರ್ಯ, ಹೇ ಭಿಕ್ಷುವರ್ಯ. ಇಂದಿನಿಂದ ತಾವೇ ನನಗೆ, ನನ್ನ ರಾಜ ಕುಲಕ್ಕೆ ರಾಜ್ಯಕ್ಕೆ ಗುರು–ದೀಕ್ಷಾಚಾರ್ಯ. ಇಂದು ನಾನು ಎಲ್ಲರನ್ನೂ ಪ್ರಿಯವಾಗಿ ಕಾಣುವ ದೃಷ್ಟಿ ಪಡೆದೆನು.

ಉಪಗುಪ್ತ : ಧನ್ಯ, ಧನ್ಯ. ನೀನು ಇಂದಿನಿಂದ ಪ್ರಿಯದರ್ಶಿ. ದೇವತೆಗಳಿಗೂ ಪ್ರಿಯನಾಗುವಿ. ದೇವಾನಾಂಪ್ರಿಯಃ ಪ್ರಿಯದರ್ಶಿ· ಧರ್ಮಸಾಮ್ರಾಜ್ಯ ಚಕ್ರವರ್ತಿ.

ಅಶೋಕ : ಧನ್ಯೋಽಸ್ಮಿ ಧನ್ಯೋಽಸ್ಮಿ, ಸ್ವಾಮಿ ತಮಗೆ ನಾನು ಶರಣಾರ್ಥಿ.

(ವಾದ್ಯಸಂಗೀತ)

೩

(ಹೊಳೆಯ ತಡಿಯಲ್ಲಿ ಉಪಗುಪ್ತ ಸಿಂಹವನ್ನು ಉಪಚರಿಸುತ್ತಿದ್ದಾನೆ)

ಉಪಗುಪ್ತ : ಮರಿ, ಮರಿ. ಮರುಗಬೇಡ. ಮರಿ ನಿನ್ನ ಗಾಯಕ್ಕೆ ಮದ್ದು ಮಾಡುತ್ತೇನೆ. ಛೇ ಹಾಗೆ ಕೂಗಬೇಡ. ಇದು ಹೊಳೆಯ ದಂಡೆ. ಅಚೆ ಈಚೆ ಜನ ದನ ನೀರಿಗೆ ಬಂದಿವೆ. ನಿನ್ನ ಕೂಗಿಗೆ ಹೆದರಿ ಹೌಹಾರುವರು. ಸುಮ್ಮನಿರು. ಒಳ್ಳೇಮರಿ. (ನಗು ಮತ್ತು ಸಂಗೀತ ಈ ನೀರಿಗುಂಟ ಹರಿದು ಬರುತ್ತದೆ) ಓ ಇದು ವಾಸವದತ್ತೆಯ ದನಿ. ಅವಳ ನೌಕೆ ಇಲ್ಲಿಗೇ ಬಂತಲ್ಲ!

ವಾಸವದತ್ತಾ : ಹಾಂ ಹಾಂ ಅದೇ ನಾನು. ಅದೇ ತಾವು! ಆದರೆ ಇಲ್ಲಿ ಹೇಗೆ? ಅಯ್ಯಯ್ಯೋ ಇದೇನು? ಸಿಂಹ ಹಿಡಿದು ತಂದಿರಿ! ಸಿಂಹಕ್ಕೆ ಚಿಕಿತ್ಸೆ!

ಉಪಗುಪ್ತ : (ನಗುತ್ತ) ಸಿಂಹದ ಎದೆಗೆ ಗಾಯವಾಗಿದೆ. ಅದಕ್ಕೇ ಮದ್ದು

ವಾಸವದತ್ತಾ : ಯಾವ ಎದೆಗೂ ಮದ್ದು ಮಾಡುವ ಮಂತ್ರ ನಿಮ್ಮ ಕೈಗುಣ ಸ್ವಾಮಿ. ಅದೃಷ್ಟವಂತ ಈ ಸಿಂಹ, ಈ ಸಿಂಹದ ಕತೆ ನಮಗೆಲ್ಲ ಗೊತ್ತು. ತಮ್ಮದಂ ಸಿಂಹದ ಎದೆ. ಈ ಸಿಂಹದಹೊಟ್ಟೆ ತುಂಬಲು ಹೊರಟಿರಿ. ಆದರೆ ಉಪಗುಪ್ತ, ಈ ಬಡಸಿಂಹ ಕಟಿಗೆ ಈ ಕೈ ಕೊಡಲಾರಿರಾ?

ಉಪಗುಪ್ತ : (ನಕ್ಕು) ನಮೋ ಬುದ್ಧಾಯ.

ವಾಸವದತ್ತಾ : (ಅಣಕಿಸಿ) ನಮೋ ಅಪ್ರಬುದ್ಧಾಯ, ಸಾಕುಬಿಡಿ ಸಿಂಹ

ಬೊಡನೆ ಸಲಿಗೆ. ಬನ್ನಿ ಈ ನನ್ನ ನಾವೆಗೆ. ಇಂದಾದರೂ ಕೂಡಿ ಬನ್ನಿ.

ಉಪಗುಪ್ತ : ಕ್ಷಮಿಸಿ ದೇವಿ. ಇನ್ನೂ ಕೂಡಿ ಬಂದಿಲ್ಲ ಕಾಲ. ಕಾಯಬೇಕು.

ವಾಸವದತ್ತಾ : (ಖಿನ್ನ) ಇನ್ನೆಷ್ಟು ಜನ್ಮ ಕಾಯಲಿ?

ಉಪಗುಪ್ತ : (ನಕ್ಕು) ಇದೇ ಜನ್ಮ!

ವಾಸವದತ್ತಾ : ಆದರೆ ಎಷ್ಟು ಕಾಲ

ಉಪಗುಪ್ತ : ಸಕಾಲಕ್ಕೆ ಬರುವೆ. ಸಹನೆ ತಾಳು ಸುಂದರಿ.

ವಾಸವದತ್ತಾ : ಸೌಂದರ್ಯಕ್ಕೆ ಸಹನೆ ಕಡಿಮೆ. ಸ್ವಾಮಿ. ಈ ಸಿಂಹದ ಎದೆಯ ಬಾಣ ಕಿತ್ತ ಕರುಣಾಳು ನೀವು, ನನ್ನ ಮರ್ಮಕ್ಕೆ ಬಾಣ ನಾಟಿದೆ. ಆದರ ನೋವು ತಣಿಸಿ ಬನ್ನಿ.

ಉಪಗುಪ್ತ : ಎಂದು?

ವಾಸವದತ್ತಾ : ಇದೇ ಕ್ಷಣ.

ಉಪಗುಪ್ತ : ಸಾಧ್ಯವಿಲ್ಲ.

ವಾಸವದತ್ತಾ : ಇದೇ ತಿಂಗಳು?

ಉಪಗುಪ್ತ : ಶಕ್ಯವಿಲ್ಲ.

ವಾಸವದತ್ತಾ : ಹಾಗಾದರೆ ನಾನು ಬದುಕುವದೂ ಶಕ್ಯವಿಲ್ಲ. (ನೀರಿಗೆ ಹಾರಲು ಹವಣಿಸುವಳು),

ಉಪಗುಪ್ತ : ಹಾಂ. ಹಾಂ ದುಡುಕಬೇಡ ಮೂರ್ಖೇ, ನೀರಿಗೆ ಹಾರಬೇಡ. ಸಾಯುವದಕ್ಕೂ ಸಮಯವಿದೆ. ನಿನ್ನ ಕರ್ಮ ಸವೆಯಬೇಕು.

ವಾಸವದತ್ತಾ : ಇನ್ನೇಕೆ ಬದುಕಲಿ? ಇನ್ನೆಷ್ಟು ಕಾಲ? ನಿಮಗಾಗಿಯೇ ನಾನು ಬದುಕಿದ್ದು. ನನಗೆ ಹಾರಲು ಬಿಡಿ.

ಉಪಗುಪ್ತ : ನೀರಿಗೆ ಹಾರಿ ಸತ್ತರೆ ನಾನು ಸಿಗುವೆನೇ? ಹಃ ಹಃ ಹಃ ಕೇಳು ಈ ವರ್ಷ ಮುಗಿಯುವದರೊಳಗೆ ನಿನ್ನ ಬಳಿಗೆ ಬರುತ್ತೇನೆ. ಆಯಿತೇ?

ವಾಸವದತ್ತಾ : ನಿಜವೇ? ಮಾತು ಕೊಡಿ.

ಉಪಗುಪ್ತ : ಬೇರೆ ಮಾತೇಕೆ? ನನ್ನ ಕೈ ನಿನ್ನ ಕೈಯಲ್ಲಿದೆ ತಾನೇ? ಇದೇ ಮಾತು ಭಗವಾನ ಬುದ್ಧನ ಆಣೆ.

ವಾಸವದತ್ತಾ : ನಿಮ್ಮಿಷ್ಟ. ನನ್ನ ದುರದೃಷ್ಟ. ನಾನು ಕಾಯುತ್ತಿರುವೆ, ನೋಯುತ್ತಿರುವೆ. ದಿನದಿನವೂ ಸಾಯುತ್ತಿರುವೆ.

೪

ನಿವೇದಕ : ಋತು ಬಂದಿತು, ಋತು ತಂದಿತು. ತಿಂಗಳು ಮೂಡಿ ಬೆಳಗಿತು. ಬಾಡಿತು ಶರತ್–ಶಿಶಿರ–ಹೇಮ–ವಸಂತ–ಆದರೆ ವಾಸವದತ್ತೆಯ ಕಣ್ಣಲ್ಲಿ ನಿರಂತರ ವರ್ಷಾ ಋತು. ಮತ್ತೆ ಬಂತು ಮಧುಮಾಸ–ಶೃಂಗಾರಮಾಸ. ವಾಸವದತ್ತೆ ಕಾಮಾತುರೆಯಾಗಿ ಕಾತರಿಸಿ ಕಾದು ನಿಂತು ಕೊರಗಿದಳು ಈ ವಿರಹದವ್ಯಥೆಗೆ ತಾಳ್ಮೆಗೆಟ್ಟಳು. ಬಂದ, ಬರುವ ವಲ್ಲಭರನ್ನು ನಿರಾಕರಿಸಿದಳು, ಧಿಃಕರಿಸಿದಳು. ಆದರೂ ಅವರಿಗೆಲ್ಲಿ ತಾಳ್ಮೆ? ಅವರಿಗೆಲ್ಲಿ ಲಜ್ಜೆ? ಭಯ? ಇಂದು ನಗರದಲ್ಲೆಲ್ಲ ಹೋಳಿಯ ಉತ್ಸವ. ಆದರೆ ವಾಸವದತ್ತೆಯ ಅಂತಃಪುರದಲ್ಲಿ ಉತ್ಸಾಹವಿಲ್ಲ, ವಾಸವದತ್ತೆ ಉಪಗುಪ್ತನಿಗಾಗಿ ಹಂಬಲಿಸುತ್ತ ಕೂತಿದ್ದಾಳೆ. (ಬಾಗಿಲ ತಟ್ಟಿದ ಸದ್ದು)

ವಾಸವದತ್ತಾ : ಯಾರು?

ಲಕ್ಷ್ಮಿಕಾಂತ : (ಸೆರೆಯ ಅಮಲಿನಲ್ಲಿ) ನಾನು ಪ್ರಿಯೆ. ನಿನ್ನ ಪ್ರಿಯಕರ ಲಕ್ಷ್ಮಿಕಾಂತ.

ವಾಸವದತ್ತಾ : ಲಕ್ಷ್ಮಿಕಾಂತ, ಹುಃ ಇದು ಲಕ್ಷ್ಮಿಯ ಮನೆ ಅಲ್ಲ. ಅವಳಿದ್ದಲ್ಲಿಗೆ ಹೋಗಿ. (ಜೋರು ಜೋರಾಗಿ ಕದ ತಟ್ಟಿದ ಸದ್ದು.) ತಡೆಯಿರಿ ಕದ ಒಡೆಯಬೇಡಿ (ಹೋಗಿ ಕದ ತೆರೆದ ಸದ್ದು) ಹುಂ ಏಕೆ ಬಂದಿರಿ? ಏನು ಬೇಕು.?

ಲಕ್ಷ್ಮೀಕಾಂತ : ಹಃ ಹಃ ಹಃ ಏಕೆ ಬಂದಿ? ಇದೆಂಥ ಪ್ರಶ್ನೆ? ನಾನು ಇಲ್ಲಿಗಲ್ಲದೆ ಇನ್ನೆಲ್ಲಿಗೆ ಹೋಗಬೇಕು? ತುಂಬಿ ಬರುವದು ಹೂವಿಗೇ.

ವಾಸವದತ್ತಾ : ನಿಮಗೆ ತುಂಬಿ ಬಂದದ್ದೇನಿಜ. ಹೂಂ ಹೊರಡಿ.ಕಾಲ್ದೆಗೆಯಿರಿ ಇದೇನು ಒಳಗೆ ನುಗ್ಗಿ ಕುಳಿತೇ ಬಿಟ್ಟೀರಿ. ಹೊರಟು ಹೋಗಿ (ಕೆರಳಿ ಕೂಗುವಳು) ಹೋಗಿ, ಹೋಗಿ.

ಲಕ್ಷ್ಮೀಕಾಂತ : ಎಲ್ಲಿ ಹೋಗಲಿ ಪ್ರಿಯೇ.

ವಾಸವದತ್ತಾ : ಮಸಣಕ್ಕೆ ಹೋಗಿ.

ಲಕ್ಷ್ಮೀಕಾಂತ : ಸರಿ. ನಿನ್ನೊಂದಿಗೆ ನಾನು ಮಸಣಕ್ಕೂ ಹೋಗಲು, ನರಕಕ್ಕೂ ಹೋಗಲು ಸಿದ್ಧ ಬಾ ಸುಂದರಿ ನಡೆ ಹೋಗೋಣ. ಹಃ ಹಃ (ಕೈ ಹಿಡಿದು ಎಳೆಯುವನು)

ವಾಸವದತ್ತಾ : ಛೀ ಹೇಸಿಗೆ! ದೂರ ಸರಿ ನೀಚಾ, ಕುಡಿದು ಬಂದಿದ್ದಾನೆ-ಕಾಮಿ.

ಲಕ್ಷ್ಮೀಕಾಂತ : ಹೌದು, ನೀನೇ ಕುಡಿಸಿದ ಮತ್ತು, ಗುಂಡಿನ ಗಮ್ಮತ್ತು. ವಾಸವದತ್ತೆ ನನಗೆ ಆಸವದತ್ತೆ ಹೆಂಡಕೊಟ್ಟೆ. ಕಾಮದ ಹೆಂಡ ರೂಪದ ಹೆಂಡ, ಪಾಪದ ಹೆಂಡ ಹಃ ಹಃ ಹಃ (ಆಕೆ ಕಪಾಳಕ್ಕೆ ಬಿಗಿದ ಛಳಿರ್ ಸದ್ದು). ಅಹಃ ಇದೇನು ಮಾಡಿದೆ? ಕೆನ್ನೆಗೆ ಹೊಡೆದೆಯಾ ? ಅಯ್ಯೋ ನಿನ್ನ ಕೋಮಲ ಕೈಗೆ ಎಷ್ಟು ನೋವಾಯಿತೋ,ತಾ ನೋಡೋಣ. ಮುದ್ದಾಡುತ್ತೇನೆ ಹಃ ಹಃ

ವಾಸವದತ್ತಾ : ಸರಿ ಹಿಂದೆ. ದುಷ್ಟಾ ನನ್ನನ್ನು ಮುಟ್ಟಬೇಡ. (ದನಿ ಏರಿಸಿ)

ಲಕ್ಷ್ಮೀಕಾಂತ : ಇರಲಿ ಬಿಡು; ನೀನು ನನ್ನವಳು.

ವಾಸವದತ್ತಾ : ಕತೆ ಹಳೆಯದು. ನಾನೀಗ ಆ ವಾಸವದತ್ತೆ ಅಲ್ಲ !

ಲಕ್ಷ್ಮೀಕಾಂತ : ಹಃ ಹಃ ಹಃ' ಇನ್ನಾವ ವಾಸವದತ್ತೆ? ಒಳ್ಳೇ ಷೋಕಿ ಮಾತು ಬಾ ನನ್ನ ತೊಳ ತೆಕ್ಕೆಗೆ.

ವಾಸವದತ್ತಾ : (ತೀವ್ರ ಕ್ರೋಧ, ತಿರಸ್ಕಾರ, ಅಸಹಾಯಕತೆ) ಬಿಡು ನನ್ನ,

ಬಿಡು ಸರಿ ಹಿಂದೆ. ಅಯ್ಯೋ ಥೂ, ಪಾಪಿ, ಹೊಲಸು ಬಾಯಿ ಚಾಚಬೇಡ. ಅಯ್ಯೋ ಏನು ಮಾಡಲಿ? ದೂರಾಗು ನೀಚ.

ಲಕ್ಷ್ಮೀಕಾಂತ : ಎಲೆಲೆ ಹೆಣ್ಣೆ, ಇದೇನು ಹುಚ್ಚು.

ವಾಸವದತ್ತಾ : ಹೌದು ನನಗೆ ಹುಚ್ಚು. ನಾನು ಹುಚ್ಚಿ. ಹಃ ಹಃ ಹಃ ನೋಡು ಈ ಕಠಾರಿ. ದೂರ ಸರಿ.

ಲಕ್ಷ್ಮೀಕಾಂತ : ಹಃ ಹಃ ಹಃ ನೀನೇ ಮದನನ ಕೈಯ ಕಠಾರಿ. ನನ್ನ ಎದೆಯಲ್ಲಿ

ವಾಸವದತ್ತಾ : ಇದೋ ಅಪ್ಪಿಕೋ. ಸಾಯಿ! ಪಾಪಿ ನಾಯಿ! (ಉನ್ಮಾದದ ಆಕ್ರೋಶ)

ಲಕ್ಷ್ಮೀಕಾಂತ : ಅಯ್ಯಯ್ಯೋ ಸತ್ತೆ,ವಾಸವದತ್ತೆ! ಸತ್ತೆ ಹಾಯ್! (ಕುಸಿದು ಬಿದ್ದ ಸದ್ದು).
(ವಾಸವದತ್ತೆಯ ದೀರ್ಘ ನಿಟ್ಟುಸಿರು. ಕೆಳಗೆ ಬೀದಿಯಲ್ಲಿ)
"ನಮೋ ಬುದ್ಧಾಯ, ನಮೋ ಬುದ್ಧಾಯ"

ವಾಸವದತ್ತಾ : (ನಿದ್ದೆಯಿಂದ ಎದ್ದಂತೆ) ಯಾರು? ಸ್ವಾಮಿ,

ಉಪಗುಪ್ತ : (ಕೆಳಗಿನಿಂದ) ವಾಸವದತ್ತಾ, ಇನ್ನೂ ಎಚ್ಚರ! ನಿದ್ದೆಯನ್ನೇ ಕೊಂದೆಯಾ?

ವಾಸವದತ್ತಾ : ಸ್ವಾಮೀ.ಽ! ಸ್ವಾಮೀಽಽ! (ಪ್ರಜ್ಞೆ ತಪ್ಪಿ ಕುಸಿದ ಸದ್ದು) ("ನಮೋ ಬುದ್ಧಾಯ" ಕೇಳಿ ಹೋಗುವ ದನಿ), (ಅಪಸ್ವರ ವಾದ್ಯಸಂಗೀತ)

ಡಂಗುರದವ : ಕೇಳಿರಿ ಪೌರರೆ, ಕೇಳಿರಿ. (ನಗಾರೆ) ಈ ಮಹಾನಗಳದ ಮಹಾ ಶ್ರೇಷ್ಠಿ ಲಕ್ಷಾಧೀಶ ಲಕ್ಷ್ಮೀಕಾಂತನನ್ನು ಅವನ ವೇಶ್ಯೆ ಸುಪ್ರಸಿದ್ಧ ನರ್ತಕಿ ವಾಸವದತ್ತೆ ಕೊಲೆ ಮಾಡಿದಳು. (ನಗಾರೆ) ಅವಳಿಗೆ ನ್ಯಾಯಾಸ್ಥಾನವು ಕೈಕಾಲು ಕಡಿದು, ಕಣ್ಣು ಕೀಳುವ ಘೋರ ದಂಡದನ್ನು ವಿಧಿಸಿ, ಅವಳ ಸಕಲ ಸಂಪತ್ತು ರಾಜಭಂಡಾರಕ್ಕೆ ಒಪ್ಪಿಸಿದೆ.

(ನಗಾರೆ) ಇದೀಗ ವಾಸವದತ್ತೆಯನ್ನು ವಧಾಸ್ಥಾನಕ್ಕೆ ಒಯ್ಯುವಾಗ ಪೌರರೇ, ನೀವೆಲ್ಲರೂ ರಾಜಮಾರ್ಗದ ಬದಿಗೆ ಸಾಲುಗಟ್ಟಿ ನಿಂತು ಅವಳ ಮೋರೆಯ ಮೇಲೆ ಉಗುಳಬೇಕು. ಇದು ರಾಜಾಜ್ಞೆ. (ನಗಾರೆ).

೫

(ವಧ್ಯಸ್ಥಾನದಲ್ಲಿ, ವೇದನಾ ವಿಹ್ವಲೆ ವಾಸವದತ್ತೆ)

ವಾಸವದತ್ತಾ : ಅಯ್ಯೋ, ಹಾ. (ಬಿಕ್ಕುವಳು) ಏನಿದು ನನ್ನ ಗತಿ! ಹಾ, ವಿಧಿಯೇ! ಕೈಕಾಲು ಕಣ್ಣು ಕಳೆದುಕೊಂಡ ಕುಲಟೆ ನಾನು. ನನ್ನ ನೆತ್ತರವ ಕೆಸರಿನಲ್ಲಿಯೇ ಬಿದ್ದಿದ್ದೇನೆ. ಬೆಂಕಿ ಬಿತ್ತು ನನ್ನ ಬಾಳಿಗೆ, ಮಣ್ಣು ಬಿತ್ತು ನನ್ನ ಬಾಯಿಗೆ. ಅಯ್ಯೋ ಮಾಡಬಾರದ್ದು ಮಾಡಿದೆ, ಆಗಬಾರದ್ದು ಆಯಿತು. ಎಂಥ ಬಾಳಿಗೆ ಎಂಥ ಕೊನೆ ಹಾ ದೈವವೇ, (ಬಿಕ್ಕಿ ಬಿಕ್ಕಿ ಅಳು) ಅಯ್ಯೋ ನೋವು, ಉರಿ, ಹಾ ತಾಳಲಾರೆ! (ಸಿಂಹ ಗರ್ಜನೆ ಕೇಳಿಸುತ್ತದೆ), ಇದೇನು ಸಾವು ಸಿಂಹವಾಗಿ ಬಂತೇ? ಹಾ, ನನ್ನ ಮೈಕೈ ಮೂಸುತ್ತಿದೆ. ಅಯ್ಯೋ ಅಯ್ಯೋ....ಹೂಂ.... ಅಹ ಸಿಂಹವೇ ಹರಿದು ತಿನ್ನು ನನ್ನ ಮುಗಿಸಿ ಬಿಡು, ಆಹಾ, ಎಂಥ ಮಿದು ಬೆಚ್ಚನ್ನ ಸ್ಪರ್ಶ. ಸಿಂಹ ನನ್ನ ಗಾಯಗಳನ್ನು ನೆಕ್ಕುತ್ತಿದೆ! ಬಸಿದ ನೆತ್ತರು ನಿಂತಿತು. (ನಿಟ್ಟುಸಿರು) ಅಹಾ. ನೋವು ಕಡಿಮೆ ಆಯಿತು. ದಾಹ ತಣಿಯಿತು. ಏನಿದು ಪವಾಡ! ಯಾರು ನನ್ನ ತಲೆಯ ಮೇಲೆ ಕೈ ಆಡಿಸಿದ್ದು?

ಉಪಗುಪ್ತ : (ಮೆಲುದನಿ) ನಮೋ ಬುದ್ಧಾಯ! ವಾಸವದತ್ತಾ!

ವಾಸವದತ್ತಾ : ಓ ಸ್ವಾಮಿ, (ಬಿಕ್ಕಿಬಿಕ್ಕಿ ಅಳುತ್ತ)ಅಯ್ಯೋ ಈಗೇಕೆ ಬಂದಿರಿ? ಸಿಂಹ ಬಂದಾಗಲೇ ನನಗೇಕೆ ಗುರುತು ಗೊತ್ತಾಗಲಿಲ್ಲ?

ಉಪಗುಪ್ತ : ಸೋದರಿ. ಈಗಲಾದರೂ ಗುರುತಾಯಿತೇ?

ವಾಸವದತ್ತಾ : ಅಯ್ಯೋ ಅಯ್ಯೋ! (ಅಳುತ್ತ) ಈಗೇಕೆ ಬಂದಿರಿ. ಹೋಗಿರಿ (ಅಳು) ಬರುವಾಗ ಬಾರದೆ ಈಗೇಕೆ ಬಂದಿರಿ?

ಉಪಗುಪ್ತ : ಬರುವಾಗಲೇ ಬಂದಿದ್ದೇನೆ ಸುಂದರಿ.

ವಾಸವದತ್ತಾ : (ಅಳು ಉಕ್ಕಿ) ಸುಂದರಿ! ನನ್ನ ಅಣಕಿಸುವಿರಾ? ಕಣ್ಣು ಕಿತ್ತು ಕೈಕಾಲು ಕಡಿದು ಬಿದ್ದ ಈ ಮೋಟು ದೇಹವನ್ನು ಅಣುಕಿಸುವಿರಾ? ಸುಂದರಿ. ಆಹ್,

(ಅಳುವಳು) ಹೋಗಿ ಹೊರಟು ಹೋಗಿ ಈಗ (ಬಿಕ್ಕು) ನಾನೇನು ಕೊಡಬಲ್ಲೆ.

ಉಪಗುಪ್ತ : (ಸಾಂತ್ವನೆ) ನಾನೇ ಕೂಡಲು ಬಂದಿದ್ದೇನೆ. ನನ್ನ ಭಿಕ್ಷೆಗೆ ನೀನು ಪಾತ್ರ.

ವಾಸವದತ್ತಾ : ಈಗ ನೀವೇನು ಕೊಡುವಿರಿ?

ಉಪಗುಪ್ತ : ನಾನು ನಿಮಿತ್ತ ಮಾತ್ರ. ಕೊಡುವಾತ ಆತ. ತಥಾಗತ. ಅವನ ಕರುಣೆಗೆ ಪಾತ್ರಳಾಗು.

ವಾಸವದತ್ತಾ : ಸೌಂದರ್ಯ, ಐಶ್ವರ್ಯ ಎಲ್ಲ ಕಳೆದುಕೊಂಡ ಕುಲಟೆ ನಾನು.

ಉಪಗುಪ್ತ : ನೀನೀಗ ಪರಿಶುದ್ಧೆ. ಧನಕನಕ ರೂಪವೆಲ್ಲ ಬಿಸಿಲುಗುದುರೆ. ಮುಗಿಲ ನೆಳಲು ಅದೆಲ್ಲ ನಿನ್ನನ್ನು ಕಾಪಾಡಿತೇ ? ಇಲ್ಲ.

ವಾಸವದತ್ತಾ : (ಮೆಲುದನಿ). ಹಮ್ಮು ಹೆಮ್ಮೆ ಎಲ್ಲ ಕರಗಿ ಕಣ್ಣೀರಾಯಿತು. ಅಯ್ಯೋ ನನ್ನ ಕಣ್ಣೇ (ಅಳುವಳು)

ಉಪಗುಪ್ತ : ತಂಗೀ, ಅಳಬೇಡ. ಇಂದು ನಿನ್ನ ಒಳಗಣ್ಣು ತೆರೆದಿದೆ. ಆತ್ಮಬಿಂಬ ಬೆಳಗಿದೆ, ಬುದ್ಧ ದೇವನ ಮಹಾಕರುಣೆ ನಿನಗಾಗಲಿದೆ.

ವಾಸವದತಾ : ಅದು ಹೇಗೆ ಸ್ವಾಮೀ?

ಉಪಗುಪ್ತ : ದುಃಖಗಳಿಗೆಲ್ಲ ಮೂಲ ತೃಷ್ಣೆ, ಕಾಮತೃಷ್ಣೆ, ಭವತೃಷ್ಣೆ ವಿಭವತೃಷ್ಣೆ

ವಾಸಪದತ್ತಾ : (ಖಿನ್ನ ದನಿಯಲ್ಲಿ) ಅದೆಲ್ಲ ಇಂದು ಮೃಗತೃಷ್ಣೆ!

ಉಪಗುಪ್ತ : ಈ ತೃಷ್ಣಾತ್ರಯಗಳಿಂದ ನಿನಗೆ ಬಿಡುಗಡೆಯಾಗಿದೆ, ಪ್ರಜ್ಞೆಯ ಜ್ಯೋತಿ ಜಾಗೃತವಾಗಿದೆ. ಮೋಹಾಂಧಕಾರ ಮಾಯವಾಗಿದೆ

ವಾಸವದತ್ತಾ : ಇದೆಲ್ಲ ನಿಮ್ಮ ಅನುಗ್ರಹ.

ಉಪಗುಪ್ತ : ಅಲ್ಲ, ವಾಸವದತ್ತಾ, ಸುಗತಿ ಕೊಡುವವನು ಆತ ಸುಗತ. ಅಂಗುಲಿಮಾಲಿಯಂಥ ನೀಚನಿಗೂ ಅರ್ಹತ ಪದವಿ ಸಿಗುವಂತೆ ಮಾಡಿದ ಈ ಬುದ್ಧ ಭಗವಾನ, ಅವನ ಅಡಿಗೆ ಒಯ್ಯುತ್ತೇನೆ. ಬಾ

ವಾಸವದತ್ತಾ : ಇದಕ್ಕಾಗಿಯೇ ಇಂದು ಬಂದಿರಾ? ಇಷ್ಟು ದಿನ ನನ್ನೀ. ದುರ್ದೆಶೆಗಾಗಿ ಕಾದು ನಿಂತಿದ್ದೀರಾ. ಅಂದೇ ನನ್ನನ್ನು ಉದ್ಧರಿಸಲಿಲ್ಲ'

ಉಪಗುಪ್ತ : ಯಾರೂ ಯಾರನ್ನು ಉದ್ಧರಿಸಲಾರರು. ತನ್ನ ಉದ್ಧಾರ ತಾನೇ ಮಾಡಿಕೊಳ್ಳಬೇಕು–ಅಂದಿದ್ದಾರೆ ಬೋಧಿಸತ್ವರು. ನಡೆ– ನಿನ್ನ ಸಿಂಹ ಕಟಿಗೆ ಕೈ ಕೊಡಬೇಕೆಂದಿದ್ದಿಯಷ್ಟೇ. (ನಗುವನು) ಇಕೋ ನನ್ನ ತೋಳಿನ ತೆಕ್ಕೆ! ಸಂಘಾರಾಮಕ್ಕೆ ಹೋಗೋಣ. ಪಡೆ ನನ್ನ ಆಧಾರ.

ವಾಸವದತ್ತಾ : ಇದೇ ನನ್ನ ಉದ್ಧಾರ, ಆದರೆ ಇದೇನು. ನನ್ನ ಹೆಗಲ ಮೇಲೆ ಬಿಸಿ ಬಿಸಿ ಹನಿ.

ಉಪಗುಪ್ತ : ಇದು ಕರುಣೆಯ ಕಂಬನಿ. ಇನ್ನು ನನ್ನೊಂದಿಗೆ ದನಿಗೂಡಿಸು

ಸಂಘಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ
ಬುದ್ಧಂ ಶರಣಂ ಗಚ್ಛಾಮಿ

ಭಾಗ ೨

ದೇವಿಕೊಟ್ಟ ಬೆಳಕು

(೧೯೩೨)

ಪಾತ್ರಗಳು :

ಸೂತ್ರಧಾರ	ದೇವಿ (ಹಸಲರ ಹೆಂಗಸು)
ನಾಗಪ್ಪ ಹೆಗಡೆ	ನಾಗವೇಣಿ
ಸುಬ್ಬಣ್ಣ	ಸುಬ್ಬಿ (ಸುಬ್ಬಣ್ಣನ ಹೆಂಡತಿ)
ಶಂಕರಪ್ಪ	ಮಹಾದೇವಮ್ಮ (ದೇಶಸೇವಿಕೆ)

ಯಾಕೂಬ (ಹವಲ್ದಾರ)
ಸುಬ್ರಾಯ (ಪೋಲೀಸ)
ದಾವೂದ ,,
ಮಂಜಪ್ಪ (ಪಟೇಲ)
ಫಕೀರಾ (ದೇವಿಯ ಮಗ, ಚಿಕ್ಕ ಹುಡುಗ)

ಸ್ವಯಂಸೇವಕರ, ಹಸಲರ ಕೇರಿಯ ಪೋಲೀಸ ಲಾಠಿ ಚಾರ್ಜ್‌,
ಗೋಳಿಬಾರಿನ ಸದ್ದು ಗದ್ದಲ, ಜೈಕಾರ ಕೂಗಾಟ.

[ಉತ್ತರ ಕನ್ನಡ ಜಿಲ್ಲೆಯ ಕರನಿರಾಕರಣೆಯ ವೀರಗಾಥೆಯ ಒಂದು ಚಿನ್ನದ ಪುಟ. ಇಲ್ಲಿ ಸ್ಥಳ-ವ್ಯಕ್ತಿ-ನಾಮಾಂಕಿತಗಳನ್ನು ಮರೆಮಾಡಿ ನಾಯಿಕೆಯ ಪಾತ್ರವನ್ನು ಬಿಟ್ಟು-ಯಥಾವತ್ತಾಗಿ ರೂಪಗೊಂಡಿದೆ]

ಹಿನ್ನೆಲೆಯಲ್ಲಿ ಮಂದ್ರದಲ್ಲಿ : "ದೇವಿ ಕೊಟ್ಟ ಬೆಳಕು" "ದೇವಿಕೊಟ್ಟ ಬೆಳಕು"–ತಡೆ ತಡೆದು ಘೋಷ ನಡೆಯಬೇಕು.

ಮುನ್ನೆಲೆಯಲ್ಲಿ : ಬೌದ್ಧ ಪ್ರಾರ್ಥನೆ – ಜಾಗಟೆಯೊಂದಿಗೆ.
ಕ್ರೈಸ್ತ ಪ್ರಾರ್ಥನೆ – ಗಂಟೆಗಳೊಂದಿಗೆ.
ಇಸ್ಲಾಂ ಪ್ರಾರ್ಥನೆ – ನಗಾರೆಯೊಂದಿಗೆ.
ವೈದಿಕ ಪ್ರಾರ್ಥನೆ – ಶಂಖದೊಂದಿಗೆ.

ತಮಸೋಮಾ ಜ್ಯೋತಿರ್ಗಮಯ.....ಓಂ ಶಾಂತಿಃ ಶಾಂತಿಃ ಶಾಂತಿಃ

ಸೂತ್ರಧಾರ : ಶಾಂತಿ, ಶಾಂತಿ, ಶಾಂತಿ, ಶಾಂತಿ...ಎಲ್ಲಿದೆ ಶಾಂತಿ? ಸೂತ್ರಧಾರನಿಗೆ ದಾರಿ ಸುಸೂತ್ರವಿಲ್ಲ. ಶಾಂತಿಯಂತೆ. ಬರೀ ಭ್ರಾಂತಿ. ಅದಕ್ಕೆ ಹೆಸರು ಕ್ರಾಂತಿ.

ನಟಿ : "ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆನ್ನನು....ಕರುಣಾಳು ಬಾ ಬೆಳಕೇsss.

ಸೂತ್ರಧಾರ : ಲೇಲೇಲೇ ನಟೀ ನಾಟೀರಾಗ ಬಿಟ್ಟು ಇದೇನು ಹೊಸ ಧಾಟಿ ಹಾಡ್ತಾ ಇದ್ದೀಯಾ? ಬೆಳಕಂತೆ ಬೆಳಕು. ಎಲ್ಲಿದೆ ಬೆಳಕು? ಎಲ್ಲಾ ಕೊಳಕು. ಒಳಗೆ ಹುಳುಕು. ಮೇಲೆ ಥಳಕು. ಅಲ್ಲ ಎಲ್ಲೆಲ್ಲೂ ಕತ್ತಲೆ, ಕಾರ್ಗತ್ತಲೆ, ಕಗ್ಗತ್ತಲೆ, ಘನ ಘೋರ ಕತ್ತಲೆ. ಅಂಧಕಾಸುರನ ಸಾಮ್ರಾಜ್ಯಶಾಹಿ. ಕುರುಡು ದಬ್ಬಾಳಿಕೆ.

ನಟಿ : ಇಲ್ಲ ನಾಥಾ ಇಲ್ಲ, ಕತ್ತಲೆಯೆದೆಯೊಳಗೇ ಬೆಳಕಿನ ಕಿರಣ ಕಾರಾಗೃಹದಲ್ಲಿಯೇ ಕೃಷ್ಣನ ಜನನ.

"In the midst of darkness Light persists
In the midst of death Life persists"

(ಗಾಂಧೀಜಿಯ ಕೋಲಂಬಿಯ ರಿಕಾರ್ಡಿನ ಈ ಮೇಲಿನ ವಾಕ್ಯಗಳು ಕೇಳಿಸುತ್ತಿರುವಾಗಲೇ ಜನ ಕೋಲಾಹಲದ ದೂರದ ಸದ್ದು ಲಾಠಿ ಜಾರ್ಜು, ಕೂಗಾಟ, ಚೀರಾಟ, ಹುಸಿಗುಂಡುಗಳ ಅಬ್ಬರ ಕ್ರಮೇಣ ಸ್ಪಷ್ಟವಾಗುವದು).

ಸೂತ್ರಧಾರ : ಇದೋ ಬೆಳಕು ಕೊಲ್ಲುವ ಕತ್ತಲೆ! ದೆವ್ವ ಕುಣಿದಿದೆ ಬತ್ತಲೆ! ಪ್ರಿಯೇ, ಅಯ್ಯೋ ನನ್ನ ನಟಿ ಎಲ್ಲಿ? ಅದೋ, ಅದೋ ಆ ಜನರ ಗಲಭೆಯಲ್ಲಿ ನುಗ್ಗಿ ಬಿಟ್ಟಳಲ್ಲ. ಸಿದ್ದಾಪುರದಲ್ಲಿ ಶಿವರಾತ್ರಿ ೧೯೩೨ ಫೇಬ್ರುವರಿ ೨೮. ಉತ್ತರ ಕನ್ನಡದ ಜಲಿಯನವಾಲಾ ದುರಂತ........

(ಜನಸ್ತೋಮ, ಬೇರೆ ಬೇರೆ ದನಿಗಳು, ಪೋಲಿಸರ ಕೂಗು : "ಅಯ್ಯೋ ಅಯ್ಯಯ್ಯೋs ಹೊಡಿಬೇಡ್ರೋ'' "ಸತ್ರೋ, ಓಡ್ರೋ, ಹೆಂಡ್ರು ಮಕ್ಕಳ ಕಾಪಾಡ್ರೋ" ''ಕಳ್ಳ ಮುಂಡೆ ಮಕ್ಕಳು, ಕಚೇರಿಗೆ ಮುತ್ತಿಗೆ ಹಾಕೋಕೆ ಬಂದಾರೆ" ''ತಿಜೋರಿ ಒಡೆಯೋಕೆ ಬಂದಾರೆ, ಸಭೆ ಮಾಡ್ತಾರೆ ಸಭೆ...")

ಜನ ; ಅಲ್ರೀ, ಅಲ್ರೇಪೊ! ನಾವು ಸಂತೆಗೆ ಬಂದವ್ರು. ಸಭೆಗಲ್ಲ, ಹಬ್ಬದ ಸಂತೆ. ಶಿವರಾತ್ರಿ ಸಂತೆ. ಅಯ್ಯೋ, ಹಾಯ್! ಈ ಸರಕಾರ ಹಾಳಾಗ. ಹಾ ಸತ್ತೆ, ಸತ್ತೆ! ಶಿವರಾತ್ರಿ ಯಮಯಾತ್ರೆ ಆಯ್ತಲ್ಲ. ಅಯ್ಯಯ್ಯೋ (ಬೇರೆ ಬೇರೆ ದನಿಗಳು)

ಪೋಲಿಸ : ಏ ಬದ್ಮಾಷ ಕೂಗಬೇಡ್ರಿ.

ಜನ ; ನೀವು ಹೊಡೀಬೇಡ್ರಿ,

ಪೋಲೀಸ : ನಿಮಗೆಲ್ಲಿ ನಾವು ಹೊಡ್ದೀವಿ? ನೀವೇಕೆ ಕೂಗ್ತಿರಿ?

ಜನ : ಆ ಕಾಂಗ್ರೆಸ ಮಂದಿಗೆ ನೀವ್ ಹೊಡಿಯೋದು ನಮ್ಮಿಂದ ನೋಡೊಕೆ ಆಗೊದಿಲ್ಲ,

ಪೋಲೀಸ : ಹಾಗಾದರೆ ನಡೀರಿ, ಇಲ್ಲಿಂದ ಕಾಲ ಕೀಳ್ರಿ

ಜನ : ಓಡಲಿಕ್ಕೆ ಆಗೋದಿಲ್ಲ. ನಿಮ್ಮ ಅರ್ಭಾಟಕ್ಕೆ ಕೈ ಕಾಲೇ ಮೋಯ್ತು

ಪೋಲಿಸ : ಥೂ ರಣಹೇಡಿ ಮುಂಡೇಮಕ್ಕಳು.

ಜನ : ಈ ಹೇಡಿಗಳ ಮೇಲೆ ಪೌರುಷ ತೋರಿಸೋರು ನೀವ್ ಎಂಥೋರು. (ಲಾಠೀ ಚಾರ್ಜು ಹುಸಿಗುಂಡು ಸದ್ದು ಗದ್ದಲ ಬಲವಾಗುತ್ತ ಬರುತ್ತದೆ. ಆ ಹಿನ್ನಲೆಗೆ ಜನರ ಗುಂಪು ಹಾಡುತ್ತ ಬರುತ್ತದೆ ಬರುವಾಗ)

ಪೋಲಿಸ : ಸರೀರಿ, ಹಿಂದೆ ಸರೀರಿ ಹೂ.

ಗುಂಪು : "ಪ್ರಾಣ ಹೋದರೂ–

,, ೨ : ಹಿಂದೆ ಸರಿಯೆವು

,, ೧ : ಮುಂದೆ ಮುಂದಕೆ–

,, ೨ : ಸಾಗಿ ನಡೆವೆವು.

,, ೧ : ತೋಪು ತುಬಾಕಿಯು ಮದ್ದು ಗುಂಡುಗಳ

,, ೨ : ಒಂದಿಷ್ಟನ್ನೂ ಲೆಕ್ಕಿಸದೆ

,, ೧ : ಮುಂದು ಮುಂದಕೆ–

,, ೨ : ಸಾಗಿ ನಡೆವೆವು.

,, ೧ : ಪ್ರಾಣ ಹೋದರೂ–

,, ೨ : ಹಿಂದೆ ಸರಿಯೆವು.

(ಹಾಡುತ್ತ ಹೋಗುತ್ತಿದ್ದಂತೆ ಗದ್ದಲ ಮಂದವಾಗುವದು)

ಫಕೀರ : ಅಮ್ಮಾ ಅಮ್ಮಾ....... (ಹೆದರಿ ಅಳುವ ದನಿ)

ದೇವಿ : ಮಗೂ ಫಕೀರ ಹೆದರಬ್ಯಾಡ, ಮರಿ ಸುಮ್ಮನಿರು

ಫಕೀರ : ಕೋ ಕೋ ಕೋವಿಗುಂಡು (ಅಳು)

ದೇವಿ : ಮಗು ಅದು ಹುಸಿಗುಂಡು ಬರೀ ಹೆದ್ರುಸಲಿಕ್ಕ ಸುಮ್ಮನಿರು. ಕೀಡೂದು ನೋಡಿದ್ರು ಪೋಲಿಸರು ಹೋಡಿತಾರೆ.

ಫಕೀರ : (ಇನ್ನೂ ಜೋರಾಗಿ ಅಳು) ಯಾಕೆ? ಯಾರ್ಗೆ?

ದೇವಿ : ನಿಂಗಲ್ಲ ಮಗೂ. ನಿಂಗಲ್ಲ. ನೀ ಸುಮ್ಮನಿರು.

ಫಕೀರ : ಯಾರಿಗೆ ಹೋಡಿದ್ರು?

ದೇವಿ : ಈಗ ಮನೆಗೆ ನಡೆ; ಮನೇಲಿ ಹೇಳ್ತೀನೆ, ಇಲ್ಲಿ ಬ್ಯಾಡ

ಜನ (ಬೇರೆ ಬೇರೆ ಕಂಠಗಳು) ನೋಡಿ, ನೋಡಿ ಆ ಮೂರು ಮಹಿಳೆಯರು! ಶೂರ ಮಹಿಳೆಯರು! ಏನು ಚಮತ್ಕಾರ! ಲಾಠೀ ಚಾರ್ಜು ತಂತಾನೇ ಬಂದಾಯ್ತು!ಹೇಗೆ ಮುಂದೆ ಮುಂದೆ ಬರ್‍ತಾ ಇದ್ದಾರೆ ಆ ಹೆಂಗಸರು–ಪೋಲಿಸರು ಕೋವಿ ಕೆಳಗಿಳಿಸಿದ್ರೂ,

೧ ದನಿ : ಮಹಾದೇವಿ ಅಕ್ಕನವರಿಗೆ

ಸಾಮೂಹಿಕ : ಜಯವಾಗಲಿ.

೧ ದನಿ : ಕಾವೇರಮ್ಮನವರಿಗೆ

ಸಾಮೂಹಿಕ : ಜಯವಾಗಲಿ.

೧ ದನಿ : ಲಕ್ಷ್ಮಮ್ಮನವರಿಗೆ-(ಸಾಮೂಹಿಕ) :ಜಯವಾಗಲಿ. (ಜಯಂ ಜಯಕಾರದಲ್ಲಿ ಫಕೀರನ ಕಿರುದನಿ ಎಲ್ಲಕ್ಕೂ ಎತ್ತರ ಕೇಳಿ ಬರುತ್ತದೆ).

ಮಹಾದೇವಮ್ಮ : ಏನೇ ದೇವಿ? ಇಲ್ಲೆಲ್ಲಿ ಬಂದೆ? ಪೋಲೀಸರ ಪೆಟ್ಟು ತಿನ್ನೋಕೆ....

ದೇವಿ : ಕೈ ಮುಗಿದೆ ಮಾದೇವಮ್ಮನೋರೆ. ನಾವ ಸಣ್ಣ ಜನ. ಪೋಲೀಸರ ಕಣ್ಣು ತುಂಬೂವರಲ್ಲ ನಾವು!

ಮಹಾದೇವಮ್ಮ : ಫಕೀರನೂ ಬಂದಾನಾ? ಏ ಪೋರಾ ಏನ ಕೂಗ್ತಿಯೋ?

ದೇವಿ : ಮಗೂ ಅಮ್ಮನೋರಿಗೆ ಕೈ ಮುಗಿ. ಹಬ್ಬದ ಸಂತೆಗೆ ಬಂದ್ವಿ. ಆ ಅಮ್ಮನೋರಿಗೂ ಕೈ ಮುಗಿ.

ಮಹಾದೇವಮ್ಮ : ತಕೋ ದುಡ್ಡು, ಮಿಠಾಯಿ ತಿನ್ನು.

ದೇವಿ : ಆಗ ತೀಡತ್ತಿದ್ದ.

ಫಕೀರಾ : ನಂಗೆ ತೀಡಿದ್ರಿಂದ್ಲೆ ವಿಠಾಯಿ ಸಿಕ್ತು(ಎಲ್ಲರೂ ನಗುವರು ದೂರ ಹೋಗುವರು.)

ದೇವಿ : ಫಕೀರಾ ನೀ ಭಾಳ ಶಾಣ್ಯಾ, ಮನೆಗೆ ಹೋಗು.

ಫಕೀರಾ : ಮತ್ತೆ ನೀನು?

ದೇವಿ : ನಾ ಲಗೂ ಬರ್ತೇನಿ, ಬೆಟ್ಟಕ್ಕೆ ಹೋಗಿ ಬರ್ತೇನಿ.

ಫಕಿರಾ ಅಲ್ಲೇನು ಕೆಲಸ? ನಾನೂ ಬರ್ತೆ.

ದೇವಿ : ಛೇ ಬ್ಯಾಡಾ ಮರಿ. ಅಲ್ಲಿಗೆ ಪೋಲೀಸ್ರು ಬಂದ್ರೂ ಬಂದ್ರು ನೀ ಮನೆಗೆ ಹೋಗಿ ಅಂಬ್ಲಿ ಉಣ್ಣು. ಬೆಟ್ಟದಲ್ಲಿ ಆ ಗಾಂಧೀ ಮಂದಿ ಈವ್ರು. ಅವ್ರಿಗೆ ಸಂತೆ ಗಲಾಟೆ ಸುದ್ದಿ ಹೇಳಿ ಬರ್ತೇನಿ. ಪೋಲೀಸ್ರು ಲಾಠಿ ಸುದ್ದಿ ಅವು ಊರ ಊರಾ ಹಂಚಬೇಕು. ತಿಳೀತಾ.

ಫಕೀರಾ : ಮತ್ತೆ ನಮ್ಮಪ್ಪ ಕೇಳಿದ್ರೆ ಏನ ಹೇಳ್ಲಿ?

ದೇವಿ : ಸೊಪ್ಪಿಗೆ ಹೋದೆಂತ ಹೇಳು.

ಫಕೀರಾ : ಗಾಂಧೀ ಕೆಲಸದಲ್ಲಿ ಯಾಕೆ ಸುಳ್ಳು ಹೇಳೋ?

ದೇವಿ : ಗಾಂಧಿ ಮೊಮ್ಮಗ ನೀನು, (ನಕ್ಕು) ಅಲ್ಲ ಮರಿ, ಬರುವಾಗ ಸೊಪ್ಪಿನ ಹೊರೆ ತರೋದೇ ಉಂಟು.("ಗಾಂಧಿಮೊಮ್ಮಗ ನಾ ಽ ಽ ನು!" ಎಂದು ರಾಗ ಎಳೆಯುತ್ತ ಫಕೀರ ದೂರ ಹೋಗುತ್ತಾನೆ.)

೨

ಯೊಕೂಬ : ಹೋಗೋ ಹೋಗೋ, ಯೇ ಯೇ, ಚಲ್ ಬೇ, ನಾನು ಯಾರು ಎಂತ ಸಮಜಾ? ಏ ಸುಬ್ರಾಯ?

ಸುಬ್ರಾಯ : ನೀವು ಯಾಕೂಬ ಖಾನ ಹವಲದಾರ, ಈಗ ಅಮಲದಾರ

ಯಾಕೂಬ : ಅಲ್ಲ ಬೇಕೂಫ, ನಾ ವೈಸರಾಯ.

ಸುಬ್ರಾಯ : ಮತ್ತೆ ನಾನು?

ಯಾಕೂಬ : ಅರೇ ಯೇ ಕ್ಯಾ ಪೂಛತೇ? ನೀನು ಗವರ್ನರ ಜರ್ನಲ್ ಭಂಡಾರಿ, ಅಲ್ಲಾಯಾ ಅಲ್ಲಾ...

ಸುಬ್ರಾಯ : ಅಂದ್ರೆ ನೀವೇ ನಾನು, ನಾನೇ ನೀವು

ಯಾಕೂಬ : ಹಾಗಲ್ಲ ಹಾಗಲ್ಲ; ನಾವಿಬ್ರೂ ವೈಸರಾಯ, ನಾವಿಬ್ರೂ ಗವರ್ನರ ಜನರಲ್.

ಸುಬ್ರಾಯ : ಅದು ಹೇಗೆ ಹವಲದಾರ್‍ರು?

ಯಾಕೂಬ : ಅರೇ, ಯಾರ ಮೈ ಬೋಲಾ ತುಮ್ ಸುನೋ. ದಿಲ್ಲೀಲಿ ವ್ಹಾಸರಾಯ್ರು ಇದೇ ಜನವರಿ ನಾಲ್ಕಕ್ಕೆ ಏನ್ಮಾಡಿದ್ರೂ?

ಸುಬ್ರಾಯ : ಏನ್ಮಾಡಿದ್ರೊ ಯಾರಿಗೆ ಗೊತ್ತು? ನಾನೆಲ್ಲಿ ದಿಲ್ಲೀಲಿ ಇದ್ದೆ? ನಾನೀ ಹಳ್ಳೀಲಿ!

ಯಾಕೂಬ : ಅದೇ ಬೇಕೂಫ. ಆ ದಿನ ವೈಸರಾಯ್ರು ಆರ್ಡಿನನ್ಸ ಹೊರಡಿಸಿ ನಮಗೆಲ್ಲ ತನ್ನ ಅಧಿಕಾರ ಕೊಟ್ಟೇ ಬಿಟ್ರು.—ಎಲ್ಲ ಕೊಟ್ಟೇ ಬಿಟ್ರು.

ಸುಬ್ರಾಯ : ಅಂದ್ರು ಬಿಟ್ಟು ಕೊಟ್ಟರು?

ಯಾಕೂಬ : ಭಲೆ ಸುಬ್ರಾವ, ಅಚ್ಛಾ ಬೋಲಾ ನಾನೀಗ ವಾರಂಟೆ ಇಲ್ದೆ ಯಾರನ್ನ ಬೇಕೋ ಅವರನ್ನ ಆರೆಸ್ಟ ಮಾಡೂಬೋದು ಖುದ್ ವೈಸರಾಯರನ್ನೇ

ಸುಬ್ರಾಯ : ನೀವೇ ಆಲ್ರಿ ವೈಸರಾಯ್ರು!

ಯಾಕೂಬ : ಸರಿ ಮತ್ತೆ ನಮ್ಮನ್ನೇ. ಯಾರದೇನು ಬಿಸಾತು ಅಂದೆ.

ಸುಬ್ರಾಯ : ಆದರೆ ಸಾಹೇಬ್ರೆ, ಈ ಅಧಿಕಾರ ನಮಗಲ್ಲ.ಮ್ಯಾಜಿಸ್ಟ್ರೇಟ ರಿಗೆ, ಇನಸ್ಪೆಕ್ಟ್ರಿಗೆ!

ಯಾಕೂಬ : ಇಕಾ ಪಾಣಿಳಾ, ಇನ್ನೊಂದು ಗ್ಲಾಸು ಕುಡಿ, ನಿನ್ನ ತಲೆ ಸರಿ ಚಲಾಯಿಸ್ತಾ ಇಲ್ಲಾ. ಹೂಂ ಕುಡಿ.

ಸುಬ್ರಾಯ : ಕುಡ್ದೆ ಹಾಂ. ತಿಳೀತು ಈಗ, ಅವರೇನು ನಾವೇನು? ನಾವ ಅವರ ಕೈ ಕಾಲು, ನಾವೇ ಸರಕಾರ.

ಯಾಕೂಬ : ಸಮಗ್ಯಾರ ದರಕಾರ? ಹೂಂ ಕುಡಿ 'ಹೆಂಡಾ ಊಂಚಾ ರಹೇ ಹಮಾರಾ.'

(ಮದ್ಯಪಾನಪಿಕೆಟಿಂಗಿನ ದೂರದ ಪ್ರಭಾತಫೇರಿ ಸಮೀಪಿಸುತ್ತದೆ)

ಸುಬ್ರಾಯ : ಅರೆರೇ, ಯಾಕೂಬ ಸಾಹೆಬ್ರೆ ಕಾಲು ಕೀಳ್ರಿ, ಗಾಂಧೀ ಮಂದಿ ಬಂದ್ರು. ಅವರ ಕೈಗೆ ಈ ಅವಸ್ಥೇಲಿ ಬಿದ್ದು ಬಿಟ್ರೆ ನಮ್ಮ ಗತಿ ಗಂಗವ್ವಗೇ ಸೇರೋದು.
(ಜನ ಪಾನಪ್ರತಿಬಂಧದ ಪದ್ಯ ಹಾಡುತ್ತ ಬಂದು ಮುತ್ತಿಗೆ ಹಾಕುತ್ತಾರೆ)

ಜನ : ಇದ್ನೋಡಿ ಈ ಪೋಲೀಸರು. ಅರೇ ಯಾಕೂಬ ಹವಾಲ್ದಾರ ಮತ್ತೆ ಈ ಸುಬ್ರಾಯ ಭಂಡಾರಿ ಕುಡಿದು ಲಕ್ಕಾಗಿ ಇದ್ದಾರೆ. ಅದೂ ಯುನಿಫಾರ್ಮಿನಲ್ಲಿ, ಇವರೀಗ ನಿಜವಾದ ಅಮಲದಾರ್ರು!

ಯಾಕೂಬ : ಸರಿ ಸರಿ, ನಾವೇ, ಗವರ್ನರ ಜನರಲ್ (ಸುಬ್ರಾಯನೂ ದನಿ ಗೂಡಿಸುವನು)

ಜನ : ನಾಗಪ್ಪ ಹೆಗಡೆರೇ ಇವರಿಗೇನು ಮಾಡೋದು?

ನಾಗಪ್ಪ ಹೆಗಡೆ : ಎರಡು ಕೊಡ ನೀರು ತಂದು ಅವರ ನೆತ್ತಿಗೆ ಚೆಲ್ಲಿರಿ. ಅವರ ಯುನಿಫಾರ್ಮು ಬೆಲ್ಟು ಟೊಪ್ಪಿಗೆ ಕಿತ್ಕೊಳ್ಳಿ. ಒಳವಸ್ತ್ರದಲ್ಲೆ ಆ ಎರಡು ಮರಕ್ಕೆ ಬಿಗಿದು ಕಟ್ಟಿ ಹಾಕಿ ಬಿಡಿ. ಒಂದು ಮಾರು ಮೇಲೆ

ಸುಬ್ರಾಯ : ಅಯ್ಯೋ ಚಳಿ ಚಳಿ; ಅದೊಂದು ಮಾಡ್ಬೇಡಿ.

ಯಾಕೂಬ : ಯಾ ಅಲ್ಲಾ ಹೆಗಡೆ ಸಾಬ, ಹೊಟ್ಟೆ ಮೇಲೆ ಹೊಡಿಬೇಡಿ. ಬೆನ್ನ ಮೇಲೆ ಹೊಡೀರಿ. ಈ ಸಲ ಹಮಕೊ ಛೋಡದೊ ಮಾಫ ಮಾಡಿ,

ನಾಗಪ್ಪ ಹೆಗಡೆ : ಸುಮ್ಮನಿರಿ ಮುಟ್ಠಾಳರೇ, ಗಲಾಟೆ ಮಾಡಿದರೆ ಬಾಯಿಗೆ ಬೊಂತೆ, ಕಟ್ಟಿ ಅವರನ್ನ. ಹಾಂಗೆ! ಎಷ್ಟು ಮನೆ ಹಾಳು

ಮಾಡಿದ್ರೋ ಪಾಪಿಗಳು. ಅಲ್ಲೇ ನೇತಾಡಿ, ಯಾರಾದರೂ ಪುಣ್ಯಾತ್ಮರು ಬಂದುಬಿಡಿಸೂ ತನಕ.

(ಜೈ ಜೈಕಾರ ಹಾಕುತ್ತ. ಹಾಡುತ್ತ ಹೋಗುವರು)

ಸುಬ್ರಾಯ : ಯಾಕೂಬ ಸಾಬ, ಇನ್ನೇನು ಮಾಡೋದ್ರಿ? ಯೂನಿಫಾರ್ಮಿನ ಮೇಲೆ ಪ್ರೊರ್ಶಿಖಶನ್ ಡ್ಯಾಂ ಆಯ್ತಲ್ರೀ?

ಯಾಕೂಬ : ಯೂನಿಫಾರ್ಮೆ ಹೋಯ್ತುಲ್ಲೋ ಬೇಕೂಫಾ. ಪ್ರೊರ್ಶಿಖಶನ್ ಏನ ಮಣ್ಣು ಬಂತು? ಕ್ಯಾಕರ್ನಾ ಬೇ? ನಾಳೆ ನೌಕರಿ ಗತಿ ಏನು?

ಸುಬ್ರಾಯ : ನಾಳೆ ಗತಿ ನಾಳೆ, ಈಗ ಕೈಕಾಲ ಬಿಡಿಸಿಕೊಳ್ಳೋದು ಹೇಗೆ ಅಂತ–ಅದಾರೊ ಆ ಕಡಿಂದ ಬರ್ತಾ ಇದ್ದಾರೆ. ಮತ್ತೇನು ಬಂತೋ ಪೀಕಲಾಟಪ್ಪಾ, ಇವಾವ ದೆವ್ವಾ?

ಯಾಕೂಬ : ಹೋಯ್ ಪೀಕಲಾಟಪ್ಪ ಅಲ್ಲೋ ಸುಬ್ರಾಯ, ಇವನು ಪಟೇಲ ಮಂಜಪ್ಪ. ನಮ್ಮ ಪಟೇಲ ಸಾಬ. ಎಲ್ಲಾ ಅಲ್ಲಾನ ಖುಷಿ. ಇವನೂ ನಾಗಪ್ಪ ಹೆಗಡೇನ ದಾಯಾದಿ. ಹೋಯ್ ಪಟೇಲ ಸಾಬ ಇತ್ಲಾಗ ಬನ್ನಿ. ಹೆದರಬೇಡಿ. ಡರೋಮತ ಸುಬ್ರಾಯರೇ. ಇವರೂ ದೆವ್ವಾ ಅಲ್ಲ, ನಮುದೂ ನಿಮುದೂ ದೇವ್ರು

ಪಟೇಲ : ಅಯ್ಯೋ, ಇದೇನು ಯಾಕೂಬ ಸಾಬ್ರೆ ಈ ಅವಸ್ಥೆ!

ಯಾಕೂಬ : ಇದು ನಿಮ್ಮ ಆ ದಾಯಾದಿ ಮಾಡಿದ ಕಿತಾಪತಿ. ಎಲಾ ಹೇಳ್ತೆ. ಮೊದಲು ಈ ಬಳ್ಳಿ ಬಿಡ್ಸಿ. ನೀವೇ ನಮ್ಮ ಸರದಾರ ಪಟೇಲ್ರು.

ಪಟೇಲ : ಇರ್ಲಿ ಬಿಡಿ, ಇದಾರು? ಅಯ್ಯೋ ಸುಬ್ರಾಯ ಕಾನಸ್ಟೇಬ್ಲು.

ಸುಬ್ರಾಯ : ಹೌದು ಪಟೇಲ್ರೇ. ನೀವು ದೊಡ್ಡ ದೆವ್ವಾ ಎಂದ್ಕೊಂಡಿದ್ದೆ–ಈ ಮಬ್ಬುಗತ್ತಲಲ್ಲಿ ಆ ಪೊದೆಯಿಂದ ಲಠ್ಯಾಗಿ ಕಪ್ಪಾಗಿ ಎದ್ದು ಬಂದ ಬಿಟ್ರೆ?

ಪಟೇಲ : ಇರ್ಲಿ ಬಿಡಿ. ಇದು ಆ ನಮ್ಮ ನಾಗಪ್ಪ ಹೆಗಡೆ ಉದ್ರಾಟವೋ?

ಯಾಕೂಬ : ದೇಖೋ ಪಟೇಲ ಸಾಬ, ಆ ತೆಗ್ಗಿನ ಮನೆ ದಾಯಾದಿಗೆ ಏನಾದ್ರೂ ಮದ್ದ ಅರೇಲೇ ಬೇಕು, ಏನ್ರಿ ಸುಬ್ರಾಯ?

ಸುಬ್ರಾಯ : ನಮ್ಮ ಪಟೇಲರ್ರೋ, ಹಾರೂ ಹಕ್ಕಿಗೆ ಮಸಾಲೆ ಅರೆಯೋ ಕದೀಮರು–ಹೌದೋ ಅಲ್ಲೊ?

ಪಟೇಲ : ಇರ್ಲಿ ಬಿಡಿ, ಇರ್ಲಿ ಬಿಡಿ. ಅದೇನ ಕೇಳ್ತೀ? ನಮ್ಮ ಬಲೆಗೆ ಬೀಳ್ದ ಇದ್ದ ಹಕ್ಕಿ ಇಲ್ಲ.

ಸುಬ್ರಾಯ : ನಮಗ್ಗೊತ್ತಿಲ್ವೇ? ಆ ಕಾಂಗ್ರೆಸ ಸ್ವಯಂಸೇವಿಕೆ ಮಂಜೀನ ನಮ್ಮ ಫೌಜದಾರ ಸಾಹೇಬ್ರಿಗೆ ಗಂಟ ಹಾಕ್ಸಿದ್ದು ಯಾರೆಂದ್ಕೊಂಡ್ರಿ ಹವಾಲ್ದಾರರೇ? ಈ ನಮ್ಮ ಮಂಜಪ್ಪನೊರೆ!

ಯಾಕೂಬ : ನಮಗೆ ಅವೆಲ್ಲಾ ಮಾಮೂಲ, ಪಟೇಲಭಾಯ್ ನೀವು ರುಸ್ತುಂ ಆದ್ಮಿ. ಮಂಜಿನೋ ಮಚ್ಚಿನೋ ನಮಗೆ ನೀವೇ ಪಾರ ಮಾಡ್ಬೇಕು. ಈ ಚಳವಳಿ ಸಮುಂದರದೊಳಗೇ ನೀವೇ ನಮದು ಕಪ್ತಾನ.

ಪಟೇಲ : ಇರ್ಲಿ ಬಿಡಿ, ಇರ್ಲಿಬಿಡಿ. ಅದೇನ ದೊಡ್ಡ ಮಾತು? ಈ ಪಟೇಲ ಮಂಜಪ್ಪನ ಕೈಯಾದ್ರೂ ನೋಡ್ರಿ. ಎಂಥೆಂಥವರನ್ನು ಮಣು ಮುಕ್ಕಿ ಚಚ್ಚಿದ್ದೇನೆ. ಜೇಲಿಗೆ ಅಟ್ಟಿದ್ದೇನೆ. ಮನೆ ಮಾರು–ದನ ಕರು ಜಪ್ತ ಮಾಡಿಸಿದ್ದೇನೆ, ಇದಂತೂ ನಮ್ಮ ದಾಯಾದಿಗೆ ಮುಚ್ಚುವ ಸವಾಲು. ಆ ತೆಗ್ಗಿನಮನೆ ನಾಗಪ್ಪನ ತಗ್ಗು ತೋಡಿ ಮುಗಿದು ಹಾಕದಿದ್ದರೆ ಹವಾಲ್ದಾರರೇ ನೋಡಿ ನಾ ಉಚ್ಚಿಲೇ ಈ ಮೀಸೆ ಬೋಳ್ಸ್ತೀನಿ!

ಯಾಕೂಬ : ಭೇಷ ಭೇಷ ಹಾಗಾದ್ರೆ ಈ ವರ್ಷ ಜಮಾಬಂದಿಗೆ ಕಲೆಕ್ಟರ ಸಾಬ ಬಂದಾಗ ಆವರ ಕೈಯಿಂದ ನಿಮಗೆ ಶೇಕ ಹ್ಯಾಂಡ ಕೊಡಸ್ತೇ. ಆ ಜವಾಬದಾರಿ ನಮ್ಮದು, ಈ ಯಾಕೂಬ ಖಾನಂದು,

ಪಟೇಲ : ಇರ್ಲಿ ಬಿಡಿ. ಈ ಚರ್ಚೆ ಈ ನಡುಕಾಡಲ್ಲಿ ಬ್ಯಾಡ್ರಾ. ನಮ್ಮನೇಗೆ ಹೋಪ್ಪಾ, ಅಲ್ಲಿ ಯೋಚ್ನೆ ಮಾಡವಾ. ನಾಗಪ್ಪ ಹೆಗಡೆ ನಾಗರ ಪಂಚಮಿದು. ಬನ್ನಿ. (ನಗುತ್ತ ನಿಷ್ಕ್ರಮಣ)

(ನಿವೇದಕ : ನಾಗಪ್ಪ ಹೆಗಡೆಯುವರಲ್ಲಿ ಒಂದು ರಾತ್ರೆ. ಆಪ್ತಾಲೋಚನೆ. ಹೆಗಡೆಯುವರು ಅವರ ಹೆಂಡತಿ ನಾಗವೇಣಿ ತಮ್ಮ ಸುಬ್ಬಣ್ಣ, ಅವನ ಹೊಸ ಹೆಂಡತಿ ಸುಬ್ಬಿ ಎಲ್ಲ ಚರ್ಚೆ ನಡೆಸಿದ್ದಾರೆ, ಜೇಲಿಗೆ ಹೋಗುವ ಮೊದಲು ಏನು ಮಾಡಬೇಕು–ಎಂದು)

ಸುಬ್ಬಣ್ಣ : ನಾಗಪ್ಪಣ್ಣ, ಇನ್ನೂ ಮೀನ ಮೇಷ ಮಾಡ್ತಾ ಕೂತ್ರೆ ಆಗ್ದಾ. ಬೆಳಗುಂಝಾವಕ್ಕೆ ಪೋಲಿಸ್ರು ಬರ‍್ತೊ ಎರೆಸ್ಟ ಮಾಡೂಲಿ. ಜಪ್ತ ಮಾಡೂಲೆ ಅಲ್ವೇನೆ ಸುಬ್ಬಿ?

ಸುಬ್ಬಿ : ಹೌದೇ ಸೈ. ನೀರಿಗೆ ಹೋದಾಗ ದೇವಿ ಸಿಕ್ಕಿದ್ಲು. ಅವಳು ಅಂದ್ಲು ಅವಳಿಗೆ ಇದೆಲ್ಲಾ ಹೇಂಗೆ ಗೊತ್ತಾಗ್ತೊ ಏನೋ?

ನಾಗಪ್ಪ : ಅವಳು ಒಳ್ಳೇ ಮನಸ್ಸಿ, ಹೆಸರಿಗೆ ತಕ್ಕ ದೇವೆ. ಹಸ್ರು ಜಾತೀಲೆ ತಪ್ಪಿ ಹುಟ್ಟಿದ್ದು,

ನಾಗವೇಣಿ : ಹೌದು ಸುಬ್ಬೀ, ದಿನಾ ಸ್ನಾನಾಮಾಡಿ. ತುಳಸೀ ಪೂಜೆ ಮಾಡ್ತು. ಮಾದೇವಿಯೇ ಅಕಿ!

ಸುಬ್ಬಣ್ಣ : ಆದ್ಬಿಡು ಅತ್ತಿಗೆ. ಆ ದೇವಿ ಕಾಂಗ್ರೆಸ ಕರಪತ್ರಾ ಊರ ಊರು ಹಂಚೂಲೆ ಹೋಗ್ತಂತೆ.

ಸುಬ್ಬಿ : ಆದ್ಹೇಂಗೆ ಸಿಕ್ ಬೀಳ್ತಿಲ್ಲೆ?

ಸುಬ್ಬಣ್ಣ : ಹೆಪ್ ಹೆಣ್ಣೆ, ದೇವಿ ನಿನಗಿಂತ ಜಾಣೆ. ಪಾಲೆ ಕೊಡೇಲಿ ಗರಿ ಒಳಾಗೆ ಸಿಕ್ಸಿಕೊಂಡು ಕರಪತ್ರ ತಕ್ಕೊಂಡು ಹೊಗ್ತು. ನಾ ಪ್ರತ್ಯಕ್ಷ್ಯ ಕಂಡಿದ್ನೇ.

ನಾಗಪ್ಪ : ಅದಿರ್ಲಿ ತಮ್ಮಾ, ಈ ದೇವೀ ಮಹಾತ್ಮೆ ಈಗ ಬೇಡ,

ಸುಬ್ಬಣ್ಣ : ಅಣ್ಣೂ, ಆ ಪಟೇಲ ಮಂಜಪ್ಪ ಹೊಲೆಯು...

ನಾಗಪ್ಪ : ಹಾಂಗೆಲ್ಲ ಬಯ್ಯ್ಯಾಲೆ ಆಗ, ಸುಬ್ಬಣ್ಣ, ಅವನ ಡ್ಯೂಟಿ ಅಂವ ಮಾಡ್ತಾ. ಪಾಪ ಮಕ್ಕಳೊಂದಿಗ. ಸರಕಾರ್ದ ಮರ್ಜಿ ಸಂಭಾಳಿಸಿ ನಾಕ್ಕಾಸು ಸಂಪಾದ್ಸಲಿಕ್ಕೆ ಇದೇ ವೇಳೆ, ಅಲ್ದೇನೇ ನಾಗವೇಣಿ?

ನಾಗವೇಣಿ : ಹೌದು ಮತ್ತೇ ಮೂರು ಮಂದಿ ಹೆಣ್ಣು ಮಕ್ಕಳು ಬ್ಯಾರೆ ಲಗ್ನಕ್ಕ ಬೆಳೆದು ನಿಂತೊ: ಅಂದ ಮ್ಯಾಲೆ ಮತ್ತೇನ ಮಾಡ್ತಾನ ಪಾಪ !

ಸುಬ್ಬಣ್ಣ : ಸರಿ ಸೆಗಣೇನೇ ತಿಂತ್ನಾ ತಿನ್ಕೊಳ್ಳಿ ಪಾಪ.

ಸುಬ್ಬಿ : ಇದೇನೂ ಅಂದೆ, ಮಾಡ್ದೋರ ಪಾಪ ಆಡ್ದೋರ ಬಾಯಲ್ಲಂತೆ. ನಮಗೇಕೆ ಬೇಕು. ಆವರವರ ಪಾಪಕ್ಕೆ ಅವರವರೇ ಗುರಿ ಅಲ್ದೆ. ಪಟೇಲ್ರಿಗೇ ಹೊಲೆಯ ಅಂದ್ರೆ ಆ ಬಡ ಹೊಲೆಯರ್ಗೆ ಅಸಮಾಧಾನ.

ಸುಬ್ಬಣ್ಣ : ಭಪ್ಪರೆ ಹೆಣ್ಣೆ, ಮುತ್ತಿನಂಥ ಮಾತಾಡ್ದೆ, ನನ್ನ ಸುಬ್ಬಿ. ಆದಿರಲಿ ಮುಂದೇನು ಅಣ್ಣಾ?

ನಾಗಪ್ಪ : ಮುಂದೇನೂ ಇಲ್ಲ. ಆ ಪಟೇಲ ನಾವೇ ತೀರ್ವೆ ಕೊಡ್ಲಿಲ್ಲ ಎಂದು ಜಪ್ತಿ ವಾರಂಟ ತರೂಲೆ ಹೋಜ್ಯಾ ಅಂದಾಯ್ತು, ನಮಗೂ ಹಾಕೋ ತಜವೀಜು ಅವಂದು, ಅದಕ್ಕೂ ಮುಂಚೆ ನಮ್ಮ ಚಿನ್ನ ಬೆಳ್ಳಿ ನಗ ನಾಣ್ಯ ಎಲ್ಲ ಈ ಚರಿಗೇಲಿ ತುಂಬಿಟ್ಟಿದ್ದೇನೆ. ಅದನ್ನು ಎಲ್ಲಾದ್ರೂ ಭದ್ರವಾಗಿ ಇಡೋ!

ಸುಬ್ಬಿ : ಅದನ್ನು ಯಾರು ಕಾಯೋಕೆ? ಅತ್ತಿಗೆ ನಾವಿಲ್ಲ ಜೇಲಿಗೆ ಹೋಪ್ಪೋರು.

ನಾಗಪ್ಪ : ನಾವೆಲ್ಲ ಹೋಪ್ಪೂದಲ್ಲ. ಈ ನಿನ್ನ ಗಂಡ ಹೊರಗೆ ಉಳಿಯೋಂವಾ

ಸುಬ್ಬಣ್ಣ : ಊಹೂಂ, ನಾನೂ ಜೇಲಿಗೇ ಬರೋವನೇ.

ನಾಗಪ್ಪ : ಹಾಗಲ್ಲ ತಮ್ಮಾ, ನೀನು ಬರೋ, ಆದರೆ ಸದ್ಯ ಹೊರಗೇ ಇರೋ ಆ ಚಿನ್ನದ ಚರಿಗೇನ ಕಾಪಾಡೋ, ಇದೆಲ್ಲ ಚಿನ್ನ ನಮದೇ ಅಲ್ಲ. ಆಚೆ ಈಚೆ ಮನೆಯವರೂ ನಮ್ಮಲ್ಲಿ ಇಟ್ಟದ್ದುಂಟು. ಅವರೆಲ್ಲ ಜೇಲಲ್ಲಿ ಇದ್ದಾರೆ. ಅವರು ಬಂದ ಮೇಲೆ ಅವರ ಚಿನ್ನ ಅವರಿಗೆ ಒಪ್ಪಿಸೋ ಇಲ್ವೆ? ಆ ಕರ್ತವ್ಯ ದೊಡ್ಡದು.

ನಾಗವೇಣಿ : ಅಣ್ಣ ಹೇಳಿದ್ದು ಕೇಳು ಸುಬ್ಬ. ಈ ಬಂಗಾರ ಕಾಯೋದೂ ಜೇಲಿಗೆ ಹೋದಷ್ಟೇ ದೊಡ್ಡ ಕೆಲಸ, ದೊಡ್ಡ ಸೇವೆ.

ಸುಬ್ಬಣ್ಣ : ಸರಿ ಒಪ್ದೆ. ನಿಮ್ಮಂತೆ ಒಪ್ದೆ. ಆದರೆ ನಾನೊಬ್ಬನೇ ಹೊರಗೆ ಇರೋದು ಹೇಗೆ?

ನಾಗಪ್ಪ : ಹಾಗೆಂದ್ರೆನೋ ಸುಬ್ಬು?

ಸುಬ್ಬಿ : ಹಾಗಂದ್ರೆ ನಂಗೊತ್ತು. ನಾನೂ ಅವ್ರ ಸಂಗ್ದ ಹೊರಗೆ ಇರೋ ಎಂತ. ಆದ್ರೆ ಅದೇನೂ ಸಾಧ್ಯ ಇಲ್ಲೇ. ಅತ್ತಿಗೆ ಇದ್ದಲ್ಲಿ ನಾನು. ಈ ಚಿನ್ನ ಕಾಯೋ ಕೆಲಸ ಗಂಡ್ಸಿಂದು. ನಾ ಹೊರಗಿದ್ದರೆ ನೀಂವ ಹೆಣ್ತೀನ ಕಾಯೋರೋ ಈ ಚಿನ್ನ ಕಾಯೋರೋ?

ನಾಗಪ್ಪ : ಶಾಭಾಸ ಸುಬ್ಬಿ. ಚಿನ್ನದಂಥ ಮಾತ ಆಡ್ದಿಯಲೆ ಸುಬ್ಬಣ್ಣ ನಿನ್ನ ಹೆಂಡತಿ ಹೇಳಿದ್ದು ಹೌದೆನ್ನು. ಕೆಲಸಕ್ಕೆ ಬೇಕಾದಷ್ಟೇ ಜನ ಹೊರಗಿರೋದು. ಅದು ಕೆಲಸ ಮುಗ್ಯೂತನಕ. ಇದು ಮಹಾತ್ಮರ ಆಜ್ಞೆ. ನಿನ್ನ ಕೆಲ್ಸ ಆ ನಿಧಿ ಕಾಯೋದು. ಎಂಥ ಪ್ರಸಂಗ ಬಂದ್ರೂ ಇದನ್ನು ಕಾಪಾಡೋದು ನಾವು ತಿರುಗಿ ಬರೊತನಕ ತಿರುಗಿ ಬಂದಲೆ.

ಸುಬ್ಬಣ್ಣ : ಅಣ್ಣಾ, (ಗದ್ಗದ) ಹಾಗನ್ನಬೇಡ, ಹಾಂ ಹಾಂಗ. ಅನ-ಅನ- ಬ್ಯಾಡಾ. ನೋಡ ಅತ್ತಿಗೆ....

ನಾಗವೇಣಿ : ಛೇ ಛೇ ಕಣ್ಣ ಒರಸ್ಕೋ. ಕಣ್ಣೀರ ಬಿಡೂ ಕಾಲ ಅಲ್ಲಿದು. ಅಲ್ಲಾಂದ್ರೆ ಸುಬ್ಬಣ್ಣಂಗೆ ತುಸು ಧೈರ್ಯ ಕೊಡಿ.

ನಾಗಪ್ಪ : ಅಂವ ನನ್ನ ತಮ್ಮ. ನನಗಿಂತ ಅವನೆದೆ ಗಟ್ಟಿ. ಸುಬ್ಬು ಮಧ್ಯ ರಾತ್ರಿ ಮೀರ್ತದ. ಈ ಚರ್ಗೆ ಎತ್ಕೊಂಡು. ಹಿತ್ತಲದಣಪೆ ದಾಟಿ ಬೆಟ್ಟದ ಹಾದಿ ಹಿಡಿ. ಮೈಸೂರ ಗಡಿಸೇರು. ತಡಗಣೀಲಿ ನಮ್ಮ ಸತ್ಯಾಗ್ರಹ ಶಿಬಿರ ಇದ್ದು. ಅಲ್ಲಿಗೆ ಹೋಗಂ. ಹಾಂ ಹೊರಡು ತಮ್ಮ.

ಸುಬ್ಬಣ್ಣ : ಅಣ್ಣ ಅತ್ತಿಗೆ ನಮಸ್ಕಾರ

ನಾಗಪ್ಪ, ನಾಗವೇಣಿ : ದೇವರು ನಿನ್ನ ಕಾಪಾಡಲಿ.

ಸುಬ್ಬಿ : ನಿಲ್ಲಿ ನಂಗೂ ಆಶೀರ್ವಾದ ಕೊಡಿ....ಆರೋಗ್ಯ, ನೋಡಿಕೊಳ್ಳಿ. (ಹೋಗುವನು, ಕ್ಷಣ ಸ್ತಬ್ಧ, ಕದ ತಟ್ಟುವ ಸದ್ದು)

ನಾಗವೇಣಿ : ಅದೊ ಫೌಜದಾರರು ಬಂದ್ರುಕ್ಕ.

ನಾಗಪ್ಪ : ಹೋಗು ಸುಬ್ಬಿ, ಕದ ತೆರಿ.

ನಾಗವೇಣಿ : ಬೇಡ್ಧ, ನಾನೇ ತೆಗೆತೆ (ಕದ ತೆರೆದ ಸದ್ದು, ಫೌಜದಾರ ಪೋಲೀಸರ ಬರುವ ಬೂಟಿನ ಸದ್ದು)

ಫೌಜದಾರ ; ಸಲಾಂ ನಾಗಪ್ಪ ಹೆಗಡೇರೆ.

ನಾಗಪ್ಪ : ಯಾರು? ಎಲಾ ದಾವೂದ ಸಾಬ್ರೇ? ತಾವಿಲ್ಲಿ!

ದಾವೂದ : ನಂಗೇ ತಾವು ನೀವು ಅನ್ನ ಬ್ಯಾಡಿ. ಎಲ್ಲ ತಮ್ಮಂಥರು ಉಪ್ಪುಂಡ ಜವಾನ ನಾನು. ಆದರೆ ಈಗ ಉಂಡ ಮನೆಗಳ ಎಣಿಸಲಿಕ್ಕೆ ಬಂದಿದೀನಿ. ಹನ್ನೆರಡು ವರುಷಗಳ ಹಿಂದೆ ನೀವು ಮಾಡಿದ ಸಹಾಯ....

ನಾಗಪ್ಪ : (ನಕ್ಕು) ಹೌದೌದು. ನಾಗಪುರ ಸತ್ಯಾಗ್ರಹದ ಕಾಲ ಅದು. ಆಗ ನಮ್ಮ ವಿರುದ್ಧ ನಿಮ್ಮ ರಿಪೋರ್ಟ ನಾನೇ ಬರಕೊಡ್ತಿದ್ದೆ.

ದಾವೂದ : ಆ ನಿಮ್ಮ ಮೆಹರ್ಬಾನಿಯಿಂದೇ ಈಗ ನನ್ನ ನಸೀಬ ಖುಲಾಯಿಸ್ತು. ಫೌಜದಾರ ಆಗಿದ್ದೇನೆ. ಆದರೆ ಈಗಲೂ ನಾ ಹೆಬ್ಬೊಟ್ಟಿನ ಗುರ್ತಿನ ಹೈದನೇ. ಯಾಕೂಬ ನಿಂತೆ ಏನು ಮಿಕಿಮಿಕಿ ನೋಡ್ತಾ? ಹೊಡಿ ಸಲಾಂ ಹೆಗಡೇರಿಗೆ, ಹೆಗಡ್ತೀರಿಗೆ.

ನಾಗಪ್ಪ : ಅದಿರಲಿ ನಮ್ಮನ್ನು ಆರೆಸ್ಟ ಮಾಡ್ಕೊಂಡು ಹೋಗ್ರಿ.

ದಾವೂದ : ಮಾಫ ಮಾಡ್ರಿ ನಾಗಪ್ಪ ಹೆಗಹೆಯುವರೆ–

ನಾಗಪ್ಪ : ನಿಮ್ಮ ಡ್ಯೂಟಿ ಅದು ನೀವು ಮಾಡ್ರಿ. ವಾರಂಟ ಇದೆಯೋ? ಆದ್ರೆ ಅದೆಲ್ಲಾ ನಿಮಗೆ ಬ್ಯಾಡಾ ಅನ್ನಿ.

ದಾವೂದ : ಯಾಕೂಬ, ಹೆಗಡೇರಿಗೆ ವಾರಂಟತೋರ್ಸು.

ಯಾಕೂಬ : ಫೌಜದಾರ ಸಾಬ, ಒಬ್ಬ ಇಸಮು ಗೈರ ಹಾಜರ. ಸುಬ್ಬಣ್ಣ ಹೆಗಡೆ ಇಲ್ಲ.

ದಾವೂದ : ಇಲ್ಲಾದ್ರೆ ಬಿಡು. ಏ ಇವರನ್ನೆಲ್ಲ ಮರ್ಯಾದೆಯಿಂದ ಹೊರಗೆ ಗಾಡೀಲಿ ಒಯ್ದು ಕೂಡ್ರಿಸು. ಮನೆ ಜಪ್ತಿಗೆ ಆಳು ಒಳಗೆ ಕಳಿಸು

ಸರಿ ಬಂದೋಬಸ್ತ ಮಾಡು. ತಿಳೀತೇನು? ಸುಬ್ಬಣ್ಣ ಹೆಗಡೆ ಫರಾರಿ ಎಂದು ರಿಪೋರ್ಟು ಮಾಡುತ್ತೇನೆ.

ನಾಗಪ್ಪ : ಅಂದ್ರೆ ನಾನೇ ಬರಕೊಡಬೇಕೋ ಮತ್ತೆ?

ಫೌಜುದಾರ : ಅದಂತೂ ತಪ್ಪಿದ್ದೇ ಅಲ್ಲ ಹೆಗಡೇರೆ. (ನಗು)

ನಿವೇದಕ : (ನಾಗಪ್ಪ ಹೆಗಡೆಯವರಿಗೂ ಅವರ ಮನೆಯವರಿಗೂ ಎರಡು ಎರಡುವರೆ ವರ್ಷ ಶಿಕ್ಷೆ ಆಯಿತು. ಈ ನಡುವೆ ತಮ್ಮ ಸುಬ್ಬಣ್ಣನೂ ಸ್ವಯಂಸೇವಕನಾಗಿ ಕೆಲಸ ಮಾಡುತ್ತಿದ್ದಾಗ ಪೋಲೀಸರ ಕೈಗೆ ಸಿಕ್ಕು ಜೇಲಿಗೆ ಹೋದನು. ಆದರೆ ಈ ಮೊದಲೇ ಕುಟುಂಬದ ಚಿನ್ನದ ಚರಿಗೆಯನ್ನು ಭದ್ರವಾಗಿ ಹೂಳಿಟ್ಟಿದ್ದನು. ಅಣ್ಣ ತಮ್ಮಂದಿರು ವಿಸಾಪುರ ಜೇಲಿನಲ್ಲಿ ಭೆಟ್ಟಿಯಾದರು)

ನಾಗಪ್ಪ : ಅರೇ ಸುಬ್ಬಣ್ಣ, ನೀ ಇಲ್ಲೆಲ್ಲಿ ಬಂದೆ? ನಿಂಗೆ ಹೇಳಿದ್ದೇನು? ನೀ ಮಾಡಿದ್ದೇನು?

ಸುಬ್ಬಣ್ಣ : ಹೇಳಿದ್ದೆಲ್ಲ ಮಾಡೇ ಬಂದೆ ನಾಗಪ್ಪಣ್ಣಾ, ಆ ಚಿನ್ನದ ಚರಿಗೆ ಬೆಟ್ಟದಲ್ಲಿ ಅಬ್ಬಿ ನೀರು ಬೀಳ್ವಲ್ಲಿ ಆಳ ತೆಗೆದು ಹುಗಿದಿಕ್ಕಿ ಬಂದೆ,

ನಾಗಪ್ಪ ; ಆದ್ರೂ ನೀ ಬರಬಾರದಾಗಿತ್ತೋ.

ಸುಬ್ಬಣ್ಣ : ಎಲಾ ಇವನಾ. ನಾನಾಗಿ ಬಂದ್ನಾ? ಪೋಲೀಸ್ರು ಹಿಡಕೊಂಡು ತಂದ್ರು. ನಾ ಕಾಂಗ್ರೆಸ ಕೆಲಸ ಮಾಡ್ತಿದ್ದೆ. ನನ್ನ ಪುಣ್ಯ ಅನ್ನೊ, ನಿನ್ನನ್ನೂ ಕಂಡೆ.

ನಾಗಪ್ಪ : ನಾವು ನಾಕು ಜೇಲು ನೀರು ಕುಡಿದಾಯ್ತು, ನಾ ಒಂದು ಕಡೆಗೆ ನಿನ್ನ ಅತ್ತಿಗೆ, ಸುಬ್ಬಿ ಒಂದ್ಕಡೆ, ಕಾರ್ವಾರ ಆತು. ಹಿಂಡಲ್ಗಿ ಆತು ರತ್ನಾಗಿರಿ ಆತು, ಯರೊಡೆ ಆತು ಈಗ ವಿಸಾಪುರಕ್ಕೆ ಬಂಜ್ಯೋ

ಸುಬ್ಬಣ್ಣ : ಅವರೆಲ್ಲಿ?

ನಾಗಪ್ಪ : (ನಕ್ಕು) ಶಿಪ್ರು ಲಿಂದರೆ ಅವಳು ಅನ್ನು. ನಿನ್ನ ಸುಬ್ಬಿ ಅಕೋ ಅಚೆ ಬರಾಕಿನಲ್ಲಿ ಇದ್ದು. ನಿನ್ನ ಅತ್ತಿಗೆನೂ ಅಲ್ಲೇ. ಇಲ್ಲಿ ಗಂಡ್ಸರ ಕೋಣೆ ಬೇರೇ. ಹೆಂಗ್ಸರದು ಬೇರೆ.

ಸುಬ್ಬಣ್ಣ : (ನಿಟ್ಟುಸಿರೆಳೆದು) ಹೀಗೋ ಸರಿ.

ನಾಗಪ್ಪ : (ನಕ್ಕು) ಹಾಗಾದ್ರೆ ನೀ ತಿರುಗಿ ಹೋಪುಲೆ ಅಡ್ಡಿ ಇಲ್ಲಾ ಅನ್ನು. ನಿನ್ನ ಶಿಕ್ಷೆ ಎಷ್ಟು? ನಂದು–ನಮದು ಎರಡುವರೆ ವರ್ಷ.

ಸುಬ್ಬಣ್ಣ : ನಂದು ಆರು ತಿಂಗಳು ಮಾತ್ರ. ಈಗಲೆ ಮೂರು ತಿಂಗಳ ಮುಗೀತಾ ಬಂತು.

ನಾಗಪ್ಪ : ಆಗಲಪ್ಪಾ ಆಗೋದೆಲ್ಲಾ ಒಳ್ಳೇದೇ. ಬೇಗ ಬಿಟ್ಟು ಹೋಗಿ ನಮ್ಮ ನಿಧಿ ನೋಡ್ಕೊ.

ಸುಬ್ಬಣ್ಣ : ಅದ್ರ ಚಿಂತೆ ಬಿಡು. ಆ ಚರಿಗೆ ಇಷ್ಟು ಭದ್ರವಾಗಿ ಹೂಳಿಟ್ಟಿದ್ದೆ, ನಾಳೆ ನಂಗೇ ಅದೆಲ್ಲುಂಟೆಂದು ಪತ್ತೆ ಹತ್ತೂದೆ ಕಷ್ಟ!

ನಾಗಪ್ಪ : ಹಾಗೆನ್ನಬೇಡೋ ಮೂರ್ಖಾ. ಅದಕ್ಕೇ ಮಾರಾಯಾ ನಿಂಗೆ ಹೇಳಿದ್ದೆ. ತಡಗಣೇಲಿ ಒಯ್ದಿಡು ಎಂದು. ನೀ ಕೇಳಲೇ ಇಲ್ಲ.

೪

ನಿವೇದಕ : ನಡುರಾತ್ರಿ ಕಳೆದಿದೆ. ಬಿರುಗಾಳಿ ಮಳೆ ಗುಡುಗು ಮಿಂಚಿನ ಸದ್ದು ಕಡಿಮೆಯಾಗುತ್ತಾ ಬರುತ್ತದೆ. ಕೋಳಿ ಕೂಗುತ್ತದೆ. ದೇವಿ ಮನೆಯಲ್ಲಿ ಫಕೀರ ಎದ್ದು ಅಳುತ್ತಾನೆ.

ದೇವಿ : ಯಾಕೋ ಫಕೀರಾ, ಯಾಕೆ ಮರಿ ಅಳ್ತೀ?

ಫಕೀರಾ : ತಿಂ-ಬೂ-ಲೆ! ಹೊಟ್ಟೆ ಹಚಿವೆ.

ದೇವಿ : ಅಯ್ಯೋ ಈಗೆಲ್ಲಿಂದ ಕೊಡ್ಲ್ಯೋ? ಬೆಳಗಾಗ್ಲಿ ಬಿರೀನೆ ತಂದು ಕೊಡ್ತೀ.

ಫಕೀರಾ : ಏ–ನು?

ದೇವಿ : ಏನು ಬೇಕು ನಿನಗೆ?

ಫಕೀರಾ : ಮರಕೆಸೂ ಪತ್ರೊಡೆ.

ದೇವಿ : ಹೂಂ. ಆತು. ಅದನ್ನ ಮಾಡಿಕೊಡ್ತೆ.

ಫಕೀರಾ : ಕೆಸು ಹ್ಯಾಂಗೆ ತರ್ತೆ?

ದೇವಿ : ಮರ ಹತ್ತಿ ತರ್ತೆ.

ಫಕೀರಾ : ನಿಂಗೆಲ್ಲಿ ಮರ ಹತ್ತೂತಿ ಬತ್ತು?

ದೇವಿ : ಬರ್ದೆ ಏನು?

ಫಕೀರಾ : ಹಾಗಾದ್ರೆ ಈಗ ಮನೆ ಕೋಳ ಹತ್ತಿ ಕಾಣ್ಸು.

ದೇವಿ : ಹೋಗ ಮಂಗ್ಯಾ, ಸುಮ್ಮಕೆ ಮಕ್ಕೊ. ಅಂಥ ಹೊತ್ತು ಬಂದ್ರೆ ಮರಾನೂ ಹತ್ತತೆ. ಕೋಳಾನೂ ಹತ್ತತೆ.

ಫಕೀರಾ : (ಮತ್ತೆ ಅಳು)

ದೇವಿ : ಚ ಚ ಚ ಮಕ್ಕೊಳೊ ಸುಮ್ಮಗೆ ಮಕ್ಕೊ.

ಫಕೀರಾ : ಹೊಟ್ಟೇಲಿ ಸಂಕ್ಟ. ಅವ್ವಾ ಹಶೂ ಬ್ಯಾಳಾ.

ದೇವಿ : ಅಲ್ಲೋ ನೀ ಗಂಡು ಹುಡುಗ. ಆ ಲಕ್ಷಪ್ಪ ನೋಡು.

ಫಕೀರಾ : ಯಾರು?

ದೇವಿ : ಆ ದಿನ ಶಿವರಾತ್ರಿ ಹಬ್ಬದ ಸಂತೇಲಿ ಮಿಠಾಯಿ ಕೊಟ್ರಲ್ಲ ಅವ್ರು.

ಫಕೀರಾ : ಹಾಂ, ಅವರೇನು?

ದೇವಿ : ಅವರು ಮೂವತ್ತು ದಿನಾ ಹಗಲು ರಾತ್ರಿ ಉಪಾಸಾ ಮಾಡ್ದ್ರು.

ಫಕೀರಾ : ಮೂವತ್ತು ದಿನ?

ದೇವಿ : ಹೂಂ ಮೂವತ್ತು ದಿನ. ಒಂದು ಅಗಳ ಅನ್ನಾ ಮುಟ್ಟಿಲ್ಲಾ. ಆ ಗಾಂಧಿ ಅಜ್ಜ ಅವರು ಇನ್ನೂ ಮುದುಕ್ರು. ಎಷ್ಟು ಸಾರೆ ಉಪಾಸಾ ಮಾಡಿದ್ರು ಗೊತ್ತೇ?

ಫಕೀರಾ : ಯಾಕೆ? ಹೊಟ್ಟೆಗಿಲ್ದೆ?

ದೇವಿ : ಹೋಗೋ ಮಳ್ಳಾ, ನಮ್ಮ ಸಲುವಾಗಿ. ಮೇಲಿನ ಜಾತಿ ಮಂದಿ ನಮ್ಮನ್ನ ತಮ್ಮವರಂತ ತಿಳಕೋಬೇಕಂತ, ಮುಟ್ಕೊಳ್ಳ ಬೇಕೂ ಅಂತ. ನೀ ಎಳೆ ಹುಡುಗ. ಮೂರುಗಳಿಗೆ ತಡಕೊಳ್ಳಿಕ್ಕೆ ಆಗ್ದಾ? ತುಸು ತಾಳ್ಕೊ.

ಫಕೀರಾ : ಹೂಂ ಅವ್ವಾ, ನನ್ನ ಅಪಕೊಂಡು ಮಲಗು. ನಿನ್ನ ಎದೆ ಕಾವಿಗೆ ನಿದ್ದೆ ಬತ್ತೀದಂ.

(ಕ್ಷಣ ಮೌನ, ಆಕಳು ಕೂಗುತ್ತದೆ)

ಫಕೀರಾ : ಯಾಕೆ ಎದ್ದೆ?

ದೇವಿ : ಆ ದನಕ್ಕೆ ಹುಲ್ಲಿಲ್ಲ. ಹೋಗಿ ಹುಲ್ಲು ಕೊಯ್ಕೊಂಡು ಬರ್ತೇ.

ಫಕೀರಾ : ನಂಗೆ ಮಾತ್ರ ತಾಳ್ಕೋ ಹೇಳ್ತಿ.

ದೇವಿ : ನೀ ಬುದ್ಧಿ ಇದ್ದಾವಾ. ಅದು ಹಸು. ಮೂಕ ಪ್ರಾಣಿ.

ಫಕೀರಾ : ಆದಾಗಾ. ನನ್ನೊಟ್ಟಿಗೆ ಮಲಗು. ನಂಗೆ ಕಥೆ ಹೇಳು.

ದೇವಿ : ನೋಡು, ಮೊನ್ನೆ ತಿಗಣಿ ಊರಾಗ ಗದ್ದಲೋ ಗದ್ದಲ. ಹೆಂಗಸ್ರೆಲ್ಲಾ ಉಪವಾಸ ಕೂಂತಿದ್ರು. ಸತ್ಯಾಗ್ರಹಾ. ಆಗ ಹೊಲೇರಿಗೆ ಹೆಂಡ ಕುಡಿಸಿ ಅವರ ಭೂ ಬಿಟ್ಟರು. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. (ಕರು ಕೂಗುತ್ತದೆ)

ಫಕೀರಾ : ಅಮ್ಮಾ ಏಳು, ನನ್ನ ಕೆಂಪಿ ಕೂಗ್ತು. ಪಾಪ ಅದಕ್ಕೆ ಹಶೂ ಆಯ್ತೋ ಏನೋ ಹೋಗು ಹುಲ್ಲುತಾ.

ದೇವಿ : ಅಲ್ಲೋ ಆಗ ಗೌರಿ ಕೂಗದ್ಯಾಗ ಬ್ಯಾಡಾ ಅಂದಿ.

ಫಕೀರಾ : ಗೌರಿ ದೊಡ್ಡೋಳು. ನಿನ್ನಾಂಗೆ ಗಟ್ಟಿ. ಕೆಂಪಿ ಪಾಪ ಕರು. ಬೇಗ ಹೋಗಿ ಹುಲ್ಲು ತಂದ್ಹಾಕು. ಹಾಂ ಅಮ್ಮಾ ಮತ್ತೆ ನಂಗೆ ಮರಕೆಸೂ! (ಆಕೆ ನಗುತ್ತ ಹೋಗುವಳು)

೫

(ನೀರು ಕೊಚ್ಚಿ ಹೋಗುವ ಅಬ್ಬರ. ಕ್ರಮೇಣ ನಸುಕು ಹರಿಯುವ ಸದ್ದು. ಹಕ್ಕಿಗಳ ಸಾವಿರಾರು ಚಿಲಿಪಿಲಿ ಬೆಟ್ಟ ತುಂಬ. ದೂರದ ಗುಡಿಯಲ್ಲಿ ನಾಗಸ್ವರ. ಮಳೆರಭಸ ಕಡಿಮೆ. ಚಿಲಿಪಿಲಿ ಹೆಚ್ಚು)

ದೇವಿ : ಇನ್ನು ಹುಲ್ಲು ಹೊರಿ ಹೊತ್ಕೊಂಡು ಮನೆಗೆ ಹೋಗೂದು. ಕೆಸೂನೂ ಕಿತ್ಕೊಂಡಾತು. ಪಾಪ ಪೋರ ಹಶೂ ಹಶೂ ಎಂತ ಬಾಯ್ಬಿಡತಾನೆ. (ಕೈಕಾಲು ತೊಳಕೊಂಡು)–ಅರೇ ಎಂಥ ಜೋರು ನೀರು! ದೊಡ್ಡ ಹೊಂಡಾನೆ ಆಗಿದೆ. ಆಂ ಇದೇನು? ಲಕಲಕ ಹೊಳೀತದೆ. ಚರಿಗೆ ತಾಮ್ರದ್ದು. ಭಾಳ ಬಾದಿ. ಓಹೋ ಓಹೋ! ಇದೇ ತೆಗ್ಗಿನ ಮನೆಯರ ಚಿನ್ನದ ಚರಿಗೇನೇ

ಇರಬೇಕು! ಇಲ್ಲೆಲ್ಲೋ ಹುಗಿದಿಟ್ಟಿದ್ರು ಅಂತ ಕಾಣತೈತಿ. ಹಳ್ಳಕ್ಕೆ ಬಳ್ದು ಬಂತು. ಏನ್ಮಾಡ್ಲಿ? (ಪೋಲೀಸರ ಹುಸಿಗುಂಡು) ಅಯ್ಯಪ್ಪಾ ಪೋಲೀಸ್ರು ಗುಂಡು. ಇತ್ಲಾಗೇ ಹಾರಸ್ತಾ ಬರ್ತಾರೆ. ಅವರು ಇದೆಲ್ಲ ನೋಡಿದ್ರೆ ಮುಗಿದೇ ಹೋಯ್ತು. ಅವರು ಬರೂ ಮುಂಚೆ ಮುಚ್ಚಿಡಬೇಕು. ಜೋಳಿಲಿ ಹಾಕಿ ಮನೆಗೆ ತಕ್ಕೊಂಡಿ ಹೋಗ್ತೆ.

(ದೇವಿ ಹಾಗೆ ಮಾಡಲು ಹೊರಟಾಗ ಯಾಕೂಬ ಸುಬ್ರಾಯ ಬರುತ್ತಾರೆ)

ಯಾಕೂಬ : (ಆಕಳಿಕೆ) ಏ ಮುದ್ಕಿ, ಯಾರಬೇ ನೀನ

ದೇವಿ : ನಾ ...ನಾನ್ರೀ....ಹಸಲ್ರ ದೇವಿ.

ಸುಬ್ರಾಯ : ದೇವೀನಾ. ಈ ನಸಕಿಗೆ ಇಲ್ಯಾಕೆ ಬಂದೇ ಸಾಯಲಿಕ್ಕೆ?

ದೇವಿ : ಹುಲ್ಲು ಕೊಯ್ಯಾಲೆ ಧಣೇರದ ಹುಲ್ಲ ಜೋಳಿ ಹಾಕ ಬೇಕ್ರಿ.

ಯಾಕೂಬ : ಕ್ಯಾ ಬೇ. ಆ ಬುಡ್ಡಿ ಹತ್ರ ಏನ ಬಡಬಡಿಸ್ತಿಯೋ ಸುಬ್ರಾಯಾ?

ಸುಬ್ರಾಯ : ಹೌದು ಹವಾಲ್ದಾರ್ರೆ, ಈಕೆಟ್ಟ ನಸುಕಿಗೆ ಮುದುಕೀ ಮುಸುಡ ನೋಡೋದು ಹಣೇಲಿ ಬರೀ ಬೇಕೇ ನಮಗೆ?

ಯಾಕೂಬ : ಚಲೋ ಗರಮಾ ಗರಮ್ ಚಾ ಕುಡಿವಾ. ಊರಲ್ಲಿ ಹೋಗಿ. (ಹೋಗುವರು)

ದೇವಿ : ಹುಶ್, ಬೆಟ್ಟದಮ್ಮಾ, ಬೀಳಿಗಿ ಮಾರಮ್ಮಾ ನೀನೇ ಪಾರ ಮಾಡ್ದಿ. ಹುಶ್-! ಬೀಳಗಿ ಮಾರೆಮ್ಮಾ ನೀನೇ ಉಳಿಸಿದಿ ಈ ಬಡಜೀವಾ!

ನಿವೇದಕ : ಇತ್ತ ಸುಬ್ಬಣ್ಣ ಬಿಡುಗಡೆ ಆಗಿ ಬಂದ. ಬಂದವನೇ ನೇರವಾಗಿ ನಿಧಿ ಇಟ್ಟ ಜಾಗಕ್ಕ ಹೋದ. ಅಲ್ಲಿ ಕಂಡದ್ದೇನು? ದೊಡ್ಡ ಹೊಂಡ. ಸುಬ್ಬಣ್ಣ ಹೌಹಾರಿ ಭ್ರಮಿಷ್ಟನಂತೆ ಆದರೆ ಆಶ್ಚರ್ಯವೇನಂ?

ಸುಬ್ಬಣ್ಣ : ಚರಿಗೆ! ನನ್ನ ಚರಿಗೆ! ನಮ್ಮ ಚಿನ್ನ ಹೋಯ್ತು! ಕದ್ಹೋಯ್ತು ಮನೆಹಾಳಾಯ್ತು! ಅಯ್ಯೋ ಅಣ್ಣಾ! ಅಯ್ಯೋ ಅತ್ತಿಗೆ! ಅಯ್ಯೋ

ಅಯ್ಯೋ ನನ್ನ ಸುಬ್ಬೀss ನಿವಃಗೆ ಈ ಸುಟ್ಟ ಮೋರೆ) ಹೇಗೆ ತೋರಿಸಲಿ? ಚಿನ್ನಾ ಕಾಯೂಲೆ ನಂಗೆ ಇಟ್ಟಿದ್ರಿನಾಮಾಡಿದ್ದೇನು ಅಯ್ಯಯ್ಯೋ!

೬

ದಾವೂದ : ಅರೇ ಯಾಕೂಬ, ಇದರ ಆ ಇಲ್ನೋಡು ಈ ಪತ್ರ ವಿಸಾಪ್ಪುರ ಜೇಲಿನಿಂದ ತಿರುಗಿಬಂತು. ನಾಗಪ್ಪ ಹೆಗಡೇರಿಗೆ ಸುಬ್ಬಣ್ಣ ಲಿಖಾಥಾ,

ಯಯಕೂಬ : ಕ್ಯಾ? ಕ್ಯಾಲಿಖಾ?

ದಾವೂದ : ಅರೇ ಸುನೋತೋ. ಸುಬ್ಬಣ್ಣ ಹುಡುಕ್ದಾ ಹುಡುಕ್ದಾ ಬಂಗಾರ ಸಿಗಲಿಲ್ಲ, ಯಾರೋ ಲಪ್ಟಾಯಿಸಿ ಬಿಟ್ಟಿದ್ದಾರೆ!

ಯಾಕಬ : ಯಾರವರು? (ಸುಬ್ರಾಯ ಪೇದೆ ಬರುತ್ತಾನೆ),

ಸುಬ್ರಾಯ : ನಂಗೊತ್ತು ಯಾರೂಂತ.

ದಾವೂದ : ಸರಿಯಾಗಿ ಬಂದೆ ಸುಬ್ರಾಯೂ ನಿಂಗೊತ್ತೇ? ಆ ಚಿನ್ನ ಯಾರು ಹೊತ್ತರೋ?

ಸುಬ್ರಾಯ : ಮತ್ತಾರು? ಸುಬ್ಬಣ್ಣನೇ ತಾನೇ ಕಳುವಾಯಿತೆಂದು ಬಯಾನ ಮಾಡಿದ್ದಾನೆ. ಬಡ್ಡೀ ಮಗ.

ದಾವೂದ : ವೋ ಕಿಧರ ರಖಾ? ನಾವಲ್ಲ ಹುಡುಕಬೇಕು?

ಸುಬ್ರಾಯ : ಹಸಲರ ಕೇರಿಲಿ.

ಯಾಕೂಬ : ಬರಾಬರಿ ಅವರನ್ನೆಲ್ಲ ಅಡಿವಿಗೆ ಅಟ್ಟಿ, ಬೆತ್ತ ಬೀಸಿ, ಬೆದರಿಕೆ ಹಾಕಿ ಗುಂಡು ಹಾರ್ಸಿ ಬೇವರ್ಶಿಗಳ ಮನೆ ಮಾಡು ಕಿತ್ತು ಬುಡ ಮೇಲ್ಮಾಡಬೇಕು!

ದಾವೂದ : ನಡೀರಿ ಕಾರವಾರದಿಂದ ಜ್ಯಾದಾ ಪೋಲೀಸ ಪಾರ್ಟಿ ತರ್ಸತೇನೆ. ಒಂದು ಕೈ ನೋಡೇ ಬಿಡ್ವಾ. ಹಂ ಕರೆಸೊ ಕಾಯದಾ!
(ಹಸಲರ ಕೇರಿಯ ಕೋಲಾಹಲ :– "ಕೈ ಮುಗಿತೇ ಒಡೆಯಾ

ಕಾಲಿಗೆ ಬಿದ್ದೆ ಒಡೆಯಾ", 'ನಂಗೊತ್ತಿಲ್ಲ ಒಡೆಯಾ', 'ಯಾವ ಬೆಳ್ಳಿನೋ ಯಾವ ಬಂಗಾರನೋ'. 'ಅಯ್ಯಯ್ಯೋ ದೇವರೇ ಸತ್ತೆವೋ', ಅಯ್ಯೋ ದೇವ್ರೆ' - ಸಡುಸಡುವೆ ಪೋಲೀಸರ ಗದರಿಕೆ 'ಥೂ ಮುಂಡೇ ಮಕ್ಕಳೇ, ಖರೇ ಹೇಳ್ರಿ' 'ಬದ್ಮಾಷ ಹುಗಿದೇ ಹಾಕ್ತೇವೆ', 'ಕೇರಿಗೆ ಕೇರಿ ಸುಟ್ಟು ಬೂದಿ ಮಾಡಿ ಬಿಡ್ತೇವೆ',-ಇತ್ಯಾದಿ ಹುಸಿಗುಂಡು ಹಾರಿಸುತ್ತಾರೆ. ಅಡವಿಯ ಕೋತಿಗಳೆಲ್ಲ ಹಲ್ಲು ಕಿರಿದು ಕಚಪಚ ಮಾಡುತ್ತವೆ. ಆನೆಗಳು ಘೀಳಿಡುತ್ತವೆ. ಚಿರತೆ ಗರ್ಜಿಸುತ್ತದೆ. ಬಳ್ಳು ಕೂಗುತ್ತಿವೆ, ಕೋವಿಯ ಸದ್ದುಗಳಿಗೆ ಹೆದರಿ ಹೆಬ್ಬಾವು ಹರಿದಾಡ ಹತ್ತುತ್ತವೆ. 'ಅರೇ ಸಾಂಪ! ಹೆಬ್ಬಾವು ಬಂತು! ಓಡಿ ಅಬ್ಬಬ್ಬಾ, ಕಾಳಿಂಗ! ಓಡಿ ಓಡಿ' ಎಂದು ಪೋಲಿಸರು ಬೆಟ್ಟದಿಂದ ಓಡುವಾಗ ಹಸಲರು ಚಪ್ಪಾಳೆ ತಟ್ಟಿ ಸಿಳ್ಳು ಕೇಕೆ ಹಾಕುತ್ತಾರೆ, ಹಲಗೆ ಬಾರಿಸುತ್ತಾರೆ. "ಓಡಿ ಓಡಿ! ಜೀವ ಹಿಡಿದು ಓಡಿ ನಮ್ಮ ಬೀಳಗಿ ಮಾರೆಮ್ಮ ಕಾಪಾಡ್ತು!" ಎಂದು ಕೂಗಾಡುತ್ತಾರೆ)

ಫಕೀರಾ : ಅಮ್ಮಾ ನಿನ್ನ ಮೊಕಾ ಹಿಗ್ಗಿ ಹಿರೇಕಾಯಿ ಆಗಿದೆ.

ದೇವಿ : ಹೋಗೋ ಮಳು. ಹಿರೇಕಾಯೋ!, ಸೊರೇ ಕಾಯೋ! ನಮ್ಮ ಮಂದಿಗೆ ಬಂದ ಸಂಕಟ ಕಳೀತು. ಅದೇ ಒಂದು ಸಂತೋಷ. ಬೀಳಗಿ ಮಾರೆಮ್ಮ ನಮ್ಮ ಕೇರಿ ಕಾಪಾಡಿದ್ಲು.

ಫಕೀರ : ಅಲ್ಲ ಆಗ ನಾ ಒಳಗಿ ಬತ್ತಾ ಅಮ್ಮಾನೀ ಕೋಳ ಹತ್ತಿ ಇಳಿತಾ ಇದ್ದೀ ಕಳ್ಳ ಮೋಳನಾಂಗೆ ಅಲ್ಯಾಕ ಹತ್ತಿವೆ?

ದೇವಿ : ಏಲಾ ತುಂಟ ನಾ ಮೋಳಾ ನೀ ಬೆಕ್ಕು ನೋಡಪ್ಪಾ ನೋಡು. ಆ ಹೊತ್ತು ಹೇಳಿದ್ದೇ ಮರ್ತು ಹೋದೆಯಾ? ನಾ ಮರಾನೂ ಹತ್ತತೆ, ಕೋಳಾನೂ ಹತ್ತತೆ ಎಂತ ನಿನ್ನ ಗಾಳಿಗೆ ಮಾಡಿನಲ್ಲಿ ದೊಡ್ಡ ಕಂಡಿ ಬಿದ್ದಿತ್ತು. ಅದು ಸರಿ ಮಾಡೊಕೆ ಮ್ಯಾಲೆ ಹತ್ತಿದೆ

ಫಕಿರಾ : ಅಪ್ಪಂಗೆ ಹೇಳಿದ್ರೆ ಅಂವ ಹತ್ತಿದ್ದ.

ದೇವಿ : (ಖಿನ್ನದನಿ) ಅಪ್ಪನಿಂದ ಅದೆಲ್ಲಾ ಆಗ್ತಾ? ಮರಿ ನಿನ್ನ ಕಾಯಿಲೆ,

ಒಂದಿನಾ ಹೀಂಗೆ ಒಂದಿನಾಹಾಗೆ. ಅಂವ ಹೊರಗೆ ಹೋದಾಗ್ಲೇ ನಾ ಕೋಳ ಹತ್ತಿ ಇಳ್ದೆ. ಅವಂಗ ಮತ್ತ ಹೇಳಬ್ಯಾಡ, ಗನಾಮರಿ ಬೆಲ್ಲಾ ಕೊಬ್ರಿ ಕೊಡ್ತಿ.

ಫಕೀರಾ : ಹಾಂಗಾದ್ರೆ ಮೊದಲು ಕೊಡು.

ದೇವಿ : ಹೂಂ ಲಗೂ ತಿನ್ನು. ಆಮೇಲೆ ನೆಲಎಲ್ಲಾ ಸಮಾ ಮಾಡ್ಬೇಕು. ಆ ಪ್ರೋಲೀಸ್ರು ಇಡೀ ಮನೆ ಆಗ್ದಗ್ದು ಹಾಕಿ ಹೋದ್ರು,

* * *

೭

(ಲುಸಿಂಗ್ಬನ ತಡಸಲು ಸದ್ದು)

ಗೋಪಾಲ : ಶಂಕರಪ್ಪನೋರೆ ಕಾಲು ಜಾರೀತು. ನಿದಾನ ಬನ್ನಿ

ಶಂಕರ : ಕೈ ಹಿಡಿ ಗೋಪಾಲ. ಈಗ ನಿದಾನ ಮಾಡಿದ್ರೆ ನಡೆವ್ಹಾಂಗೇ ಇಲ್ಲ ಆ ಹುಚ್ಚ ಸುಬ್ಬಣ್ಣ ಈ ಲುಸಿಂಗ್ಬನ ಫಾಲ್ಸದ ಕಡೆಗೆ ಓಡಿ ಬಂದಾನೆಂದು ಕೇಳಿ ಓಡಿ ಬಂದ್ವಿ. ಅವನ್ನು ಇಲ್ಲಿ ಹುಡ್ಕಬೇಕು.

ಗೋಪಾಲ : ಇಲ್ಲಿ ಯಾರೂ ಕಾಣುದಿಲ್ಲ.

ಶಂಕರ : ಸ್ವಲ್ಪ ಕೂಗಿ ನೋಡು.

ಗೋಪಾಲ ; ಸುಬ್ಬಣ್ಣ ಹೆಗಡೆರೇ, ಓ ಸುಬ್ಬಣ್ಣ ಹೆಗಡೇರೇ (ಪ್ರತಿಧ್ವನಿ)

ಇಬ್ಬರೂ : ಓ ಸುಬ್ಬಣ್ಣ ಹೆಗಡೆರೇ (ಪ್ರತಿಧ್ವನಿ)

ಶಂಕರ : ಎಲಾ ಗುಂಡಿಗೆ ಹಾರಿ-ಗೀರಿ ಜೀವಕಳಕೊಂಡನೋ ಏನು? ಅದೊ ಅದಾರು ಕೆಳಗೆ?

ಗೋಪಾಲ : (ಮೆಲ್ಲಗೆ) ಶಂಕರಪ್ಪನೋರೇ ದೊಡ್ಡಕ್ಕೆ ಮಾತಾಡಬೇಡಿ, ಅವ ಸುಬ್ಬಣ್ಣನೇ.ನೀರಿಗೆ ಹಾರೂಲೆ ಅನುಮಾನ ಮಾಡ್ತಾ ಇದ್ದಾನೆ. ನಾವು ಹಿಂದಿಂದ ಹೋಗಿ ಅವನ್ನ ಹಿಡೀವಾ.

ಸುಬ್ಬಣ್ಣ : ಹರ ಹರ ಹರ ಮ....

ಗೋಪಾಲ-ಶಂಕರ : (ಇಬ್ಬರೂ)...ಮಹಾದೇವ.

ಸುಬ್ಬಣ್ಣ : ಯಾರದು? ಬಿಡಿ. ನನ್ನ ಕೈ ಬಿಡಿ.

ಗೋಪಾಲ : ಸುಬ್ಬಣ್ಣ ಹೆಗಡೆರೆ,

ಸುಬ್ಬಣ್ಣ : ಯಾರದು? ಬಿಡ್ರಿ, ನನ್ನ ಸಾಯಲಿಕ್ಕೆ ಬಿಡಿ, ಜೀವಂತ ಇಟ್ಟು ಕೊಲ್ಲಬೇಡ್ರಿ.

ಶಂಕರ : ಸುಬ್ಬಣ್ಣಾ ಇದೇನು ಹುಚ್ಚಾಟ? ನೀನು ಸ್ವಯಂಸೇವಕ ಸತ್ಯಾಗ್ರಹಿ. ಹತ್ಯಾಗ್ರಹಿ ಅಲ್ಲ.

ಸುಬ್ಬಣ್ಣ : ಅದಾರು? ಶಂ...ಕರ...ಪ್ಪನೋರೆ ಕಾಲಿಗೆ ಬಿದ್ದೆ. ತಪ್ಪಾಯ್ತು ಪ್ರಾಣ ಉಳಿಸಿದ್ರಿ. ಆದರೆ ಮಾನ? (ಅಳುತ್ತ) ಮಾನಾ ಹೋಯಿತ್ರಿ. ಮಾನಾ ಹೋಯ್ತು ನನ್ನ ಮೇಲೆ ಘೋರ ಅಪವಾದ ಬಂದಿದೆರೀ.

ಶಂಕರ : ನಮಗೆ ಅದೆಲ್ಲಾ ಗೊತ್ತು. ಹೆಗಡೆರೇ ಅಪವಾದ ಶಾಮುನಿಗೂ ತಪ್ಪಲಿಲ್ಲ. ಆದರೆ ನಾವು ಅದನ್ನು ನಂಬುದಿಲ್ಲ.

ಸುಬ್ಬಣ್ಣ : ಮೊನ್ನೆ ನನ್ನ ಮಾಂವಾ ನನಗೆ ಮನೆ ಮೆಟ್ಟಲು ಹತ್ತೊಕೆ ಕೊಡಲಿಲ್ಲ. ನಾ ಕುಟುಂಬದ ಬಂಗಾರಾ ಎತ್ತಿ ಹಾಕಿ ಮಾವನ ಮನೇಲಿ ಇಟ್ಟಿದ್ದೆ ಎಂದು–ಆ ಪಟೇಲ ಮಂಜಪ್ಪ ಊರ ತುಂಬ ಗುಲ್ಲು ಹಾಕಿದ್ದಾನೆ. ಸರಕಾರಕ್ಕೂ ರಿಪೋರ್ಟ ಮಾಡಿದ್ದಾನಂತೆ. ಏನ ಮಾಡ್ಲಿ ಗೋಪಾಳ ಭಟ್ಟರೇ?

ಗೋಪಾಳ : ಏನಿಲ್ಲ ಸುಳ್ಳ ಸುಳ್ಳೇ, ಖರೇ ಖರೇನೇ. ಬನ್ನಿ ನಮ್ಮ ಸಂಗಡ.

ಸುಬ್ಬಣ್ಣ : ನಾ ಒಲ್ಲೆ. ಊರಿಗೆ ಮೊರೆ ಹೇಗೆ ತೋರಿಸ್ಲೀ? ಮಾನ ಹೊಯ್ತು ಪ್ರಾಣಯಾಕೆ ಇಟ್ಟುಕೊಳ್ಳೊದು?

ಶಂಕರ : ಸುಬ್ಬಣ್ಣಾ ಹುಚ್ಚಾಪಟ್ಟೆ ಮಾತಾಡಬೇಡ, ನಿನ್ನ ಪ್ರಾಣಾ ಮಾನ ನಿನ್ನ ಅಣ್ಣನ ಕೈಲಿ. ಅದು ನಿನ್ನ ಕೈಯಲ್ಲಿ ಇಲ್ಲ. ನಾಗಪ್ಪಹೆಗಡೇರು ಇನ್ನೂ ಒಂದು ವಾರದೊಳಗೆ ಬಿಡುಗಡೆ ಆಗಿ ಬರ್ತಾರೆ. ಅವರು ಬರೊತನಕ ನೀನು ನಮ್ಮ ಸಂಗಡ ಇದ್ದುಬಿಡು.

ಸುಬ್ಬಣ್ಣ : ಎಲ್ಲಿ?

ಗೋಪಾಳ : ಇನ್ನೆಲ್ಲಿ? ತಡಗಣಿ ಶಿಬಿರದಲ್ಲಿ. ಮೈಸೂರ ಗಡಿಯೊಳಗೆ ಅಲ್ಲಿ ಈ ಊರ ಉಸಾಬರಿ ಏನೇನೂ ಇಲ್ಲ.

ಸುಬ್ಬಣ್ಣ : ಆಯ್ತು ದೇವರ ಇಚ್ಛೆ ಇದ್ದಂತೆ ಆಗಲಿ. ಅಣ್ಣನೂ ಅದೇ ಅಂದಿದ್ದ ಹಿಂದೆ. ನಿಮ್ಮ ಆ ಶಿಬಿರದಲ್ಲೇ ಆಶ್ರಯ ಪಡೆ ಎಂತ. ನಂಗೆ ಸೊಕ್ಕು ಹೆಚ್ಚಾಯ್ತು.

೮

ನಿವೇದಕ: (ಊರಿನ ವೀರ ಸತ್ಯಾಗ್ರಹಿಗಳ, ಕರನಿರಾಕರಣೆಯ ಯೋಧರ ಬಿಡುಗಡೆಯ ದಿನ, ವಾದ್ಯ ವಿಜೃಂಭಣೆಯಿಂದ ನಾಗಪ್ಪ ಹೆಗಡೆ ಯವರ ಪರಿವಾರವನ್ನು ಮನೆಯವರೆಗೆ ಮಟ್ಟಿಸಿದ್ದಾರೆ, ಜೈ ಜೈ ಕಾರಗಳ ಗರ್ಜನೆಯಲ್ಲಿ. "ನಾಗಪ್ಪ ಹೆಗಡೆಯವರಿಗೆ ಜಯ ವಾಗಲಿ," "ನಾಗವೇಣಿಬಾಯವರಿಗೆ ಜಯವಾಗಲಿ!'' ಪುನಃ ಪುನ: ಗರ್ಜನೆ ಸ್ತಬ್ಧ)

ನಾಗಪ್ಪ : ಬಂಧುಗಳೇ ನಿಮಗೆಲ್ಲ ನಮಸ್ಕಾರ. ಬಾಯಿಂದ ಮಾತು ಹೊರ ಡೂದಿಲ್ಲ. ದೊಡ್ಡದೇಶಭಕ್ತರಿಗೆ ಮಾಡೋ ಸ್ವಾಗತ ಮಾಡಿದ್ರಿ. ಇದಕ್ಕೆಲ್ಲ ನಾನು ಯೋಗ್ಯನಲ್ಲ, ಪೋಲೀಸರು ಹಿಡಕೊಂಡು ಹೋದ್ರು. ಜೇಲಕಂಡೆ. ಬಿಡುಗಡೆ ಮಾಡ್ದ್ರು. ತಿರುಗಿ ಬಂದೆ. ಪೋಲೀಸರಿಂದಲೇ ನಾವು ದೊಡ್ಡ ಪುಢಾರಿಗಳಾದಾಂಗೆ ಆಯ್ತು ಈ ದೊಡ್ಡಸ್ತಿಕೆ. ನಮ್ಮ ಮೇಲೆ ಹೇರಿದ್ದು, ಹಿಂದೆ ರಾಮ ನಾಮದ ಬಲದಿಂದ ಕಲ್ಲ ಬಂಡೆ ತೇಲ್ತಂತೆ. ಇಂದು ಗಾಂಧೀಜಿ ಹೆಸರಿನಿಂದ ನಾವು ಮೇಲೆ ಬರ್ತೇವೆ. ಬಿರುಗಾಳಿಗೆ ಸಿಕ್ಕ ತರಗೆಲೆ ಗರುಡನ್ಹಾಂಗೆ ಹಾರಾಡ್ತದೆ. ಆದರೆ ಬಿರುಗಾಳಿ ಹೋದ್ಮೇಲೆ ಗರುಡ ಗರುಡನೇ ತರಗೆಲೆ ತರಗೆಲೆನೇ. (ಮತ್ತೆ ಮತ್ತೆ ಜೈ ಜೈ ಕಾರ ಚಪ್ಪಾಳೆ) ನಮ್ಮದುಃ ಸರ್ವಸ್ವ ಹೋತು (ಗದ್ಗದ) ತಮ್ಮ ಸುಬ್ಬಣ್ಣ... ("ದಾರಿಬಿಡಿ ಸುಬ್ಬಣ್ಣಂಗೆ ದಾರಿ ಬಿಡಿ,"....ಕೂಗು,

ಸುಬ್ಬಣ್ಣ : ಅಣ್ಣಾ ಇಲ್ಲಿದ್ದೇನೆ. ನಿನ್ನ ಪಾಪಿ ತಮ್ಮ. ಕಾಲಿಗೆ ಬಿದ್ದೆ, ಹೊಟ್ಟೇಲಿ ಹಾಕ್ಕೋ. ನಮ್ಮ ಸರ್ವಸ್ವ ನನ್ನಿಂದ ಹೋಯ್ತು (ಅಳುವನು ಬಿಕ್ಕಿ ಬಿಕ್ಕಿ)

ನಾಗಪ್ಪ : ಛೇ, ಛೇ ಹಾಗೆನ್ನಬೇಡ ತಮ್ಮ ಅದೊಂದು ದೊಡ್ಡ ಯಜ್ಞ. ಇದರಲ್ಲಿ ಯಾರು ಎಷ್ಟು ಆಹುತಿ ಹಾಕಿದ್ರೋ ಲೆಕ್ಕವೇ ಇಲ್ಲ. ನಮ್ಮದೇನು ಮಹಾ? ನಡೆ ಒಳಗೇ. ಬಂಧುಗಳೇ ರಾತ್ರಿ ವಿಪರೀತ ಆಯ್ತು. ಈಗ ಮನೇಗೆ ನಡೀರಿ ನಮಸ್ಕಾರ. (ಜನಕೋಲಾಹಲ. ಚೆದರುತ್ತದೆ. ಬಾಗಿಲ ಕದ ಇಕ್ಕುವ ಸದ್ದು)

ಸುಬ್ಬಣ್ಣ : ಅತ್ತಿಗೆ, ಅಣ್ಣಾ ನಿಮ್ಮ ಪಾದದಾಣೆ, ನಾ ಚಿನ್ನದ ಜರಿಗೆ ಎತ್ತಿ ಹಾಕಿಲ್ಲಾ (ಬಿಕ್ಕುತ್ತಾನೆ)

ಅತ್ತಿಗೆ : ಅದೋ ಮತ್ತೆ ಹಾಗೆ ಯಾರಂದ್ರೋ ಹುಚ್ಚಾ? ಅಳಬೇಡ.

ಸುಬ್ಬಣ್ಣ : ಊರ ತುಂಬ ಆಡ್ಕೊಳ್ತಾರೆ–ಆ ಪಟೇಲ ಮಂಜಪ್ಪ....

ನಾಗಪ್ಪ : ಓ ಆ ಪಟೇಲನೋ? ಅಂವ ಹಾಗೆ ಹೇಳೋದೇ? ಅಂವ ನಮಗೆ ಮಹಾ ಉಪಕಾರಿ ನೋಡು. ಅದೆಲ್ಲ ಈಗ ಬೇಡ. ಹೋಗಿ ಮಲಗು. ಅಕೋ ಅಲ್ಲಿ ಸುಬ್ಬಿ ಕಾಯ್ತಾ ಇದ್ದಾಳೆ. ಪಾಪಾ. ನಿನ್ನ ನೋಡದೆ ವರ್ಷಕಾಲ ಆಯ್ತು. ನಾಳೆ ಎಲ್ಲ ಬಾಕಿ ಪಂಚಾಯ್ತಿ. ಈಗ ಹೋಗಿ ಮಕ್ಕೋ. (ಕದ ತಟ್ಟಿದ ಸದ್ದು) ಅದ್ಯಾರೋ ನೋಡೆ ನಾಗವೇಣಿ ಈ ಹೊತ್ತಿಗೆ?

ನಾಗವೇಣಿ : ಮತ್ತೆ ಬಂದ್ರೋ ಏನೋ ಪೋಲಿಸ್ರು?

ನಾಗಪ್ಪ : ಇರಲಾರ್ದು ಇದು ಪೋಲಿಸರ ಗಟ್ಟಿ ಕೈ ಅಲ್ಲ. (ನಾಗವೇಣಿ ಹೋಗಿ ಕದ ತೆರೆಯುವಳು).

ನಾಗವೇಣಿ : ಯಾರು ದೇವೀನೆ? ಇದೇನೆ ಇಷ್ಟು ರಾತ್ರಿಗೆ ಬಂದ್ಬಿಟ್ಟೆ? ಬಾ ಒಳಗೆ ಬಾ, ಹಸಲ್ರ ಶಿವಪ್ಪನ ಹೆಂಡ್ತಿ ದೇವಿ ಬಂದಾಳೆ, ಏನೋ ತಂದಾಳೆ.

ನಾಗಪ್ಪ : ಇಲ್ಲಿ ಬಾ ದೇವೀ. ಇಲ್ಲಿ ಮುಂದೆ ಬಾ ಈ ಅಪರಾತ್ರೆಗೆ ಯಾಕೆ ಬಂದೆ?

ದೇವಿ : ಈಗೇ ಬರ್ರೇಕು ನನ್ನೊಡೆಯಾ.

ನಾಗಪ್ಪ : ಇದೇನು ತಂದೆ?

ದೇವಿ : ಇದಕ್ಕೇ ಬಂದೆ ಒಡೆಯಾ.

ಅತ್ತಿಗೆ : ಏನದು?

ದೇವಿ : ನಿಮ್ಮ ಬದುಕು. ನಿಮ್ಮ ಚಿನ್ನದ ಚರಿಗೆ. ಇಷ್ಟು ವರ್ಷಾ ಕಾಪಾಡ್ದೆ ಜೀವ ಹಣ್ಣಾಗಿ ಹೋಯ್ತು ಧನಿ. ಇಂದು ನೀ ಬಂದೆ,ನಿನ್ನ ಚಿನ್ನ ನಿನ್ನ ಪಾದಕ್ಕೆ ಇಟ್ಟೇನಿ. ನಾ ಈಗ ಪಾರಾದೆ.

ನಾಗಪ್ಪ : ಅರೇ ಇದು ನಮ್ಮ ಕಾಣೆ ಆದ ಚರಿಗೆ. ಸುಬ್ಬಣ್ಣ ಸುಬ್ಬೀ (ಅವರು ಓಡಿ ಬರುವರು).

ಇಬ್ಬರೂ : ಏನಣ್ಣ, ಏನತ್ತಿಗೆ? ಕರೆದ್ರಿ?

ನಾಗಪ್ಪ : ಇದು ನೋಡು ನಮ್ಮ ಸೊತ್ತು ಈ ದೇವಿ ಕಾದಿಟ್ಟದ್ದು. ನಮ್ಮ ನಿಧೀನ ಈಗ ತಂದೊಪ್ಪಿಸಿದ್ದಾಳೆ.

ಸುಬ್ಬಣ್ಣ : ಅವಳಿಗೆಲ್ಲಿ ಸಿಗ್ತು? ನಾ ಅಬ್ಬಿ ನೀರು ಬೀಳ್ವಲ್ಲಿ ಹೂಳಿಟ್ಟಿದ್ದೆ.

ದೇವಿ : ಹೌದಪ್ಪಾ ನೀನಿಟ್ಟೆ. ಆದರೆ ಹಳ್ಳ ಕೊರ್‍ಕೊಂಡು ಹೋಗತಿತ್ತು. ನಾ ಕಂಡೆ, ಮನೆಗೆ ತಂದೆ.

ಸುಬ್ಬಣ್ಣ : ದೇವಿ ಆ ನಿಮ್ಮ ಕೊಂಪೇಲಿ ಎಲ್ಲಿಟ್ಟೆ?

ದೇವಿ : (ನಕ್ಕು) ಸುಬ್ಬಣ್ಣ, ಕೋಳ ಏರಿ ಮಾಡಿನ ಸಂದೀಲಿ ಹುಗಿಸಿಟ್ಟೆ ಈಗ ತಗೊಂಡು ಬಂದೆ.

ನಾಗಪ್ಪ : ದೇವಿ, ದೇವಿ ನೀನೆಷ್ಟು ಒಳ್ಳೆಯವಳು! ನಮ್ಮ ಮನೇನೇ ಉಳಿಸ್ದೆ (ಗದ್ಗದ ದನಿ)

ನಾಗವೇಣಿ : ದೇವಿ, ಇಕೋ ಈ ರಾಶೀಲಿ ನಿಂಗ ಬೇಕಾದ್ದು ಹೆಕ್ಕಿಕೋ, ಬಳೇನೋ ಸರಾನೋ ಬೆಂಡವಾಲೇನೋ, ಅಕ್ಕೀನೋ....

ದೇವಿ : ಬೇಡ ತಾಯಿ. ಮತ್ತೆ ನನ್ನ ಮದ್ವಿ ಮಾಡಸ್ತೀರ್‍ಯಾ? ಇದೆಲ್ಲಾ ಏನೇನೂ ಬ್ಯಾಡ್ರಿ, ದೇವ್ರು ಮೆಚ್ಚ್ಯಾನಾs?

ಸುಬ್ಬಣ್ಣ : ಎಂಥ ಹಿರಿತ್ಯಾಗಿ ನೀನು. ಹುಟ್ಟ ಆತ್ಮಜ್ಞಾನಿ.

ನಾಗಪ್ಪ : ಇಲ್ಲ ದೇವಿ, ಇದೆಲ್ಲ ನಿಂದು, ನಿಜವಾಗಿಯೂ ನಿಂದು. ನಿನ್ನ ಜಾಗದಲ್ಲಿ ಇನ್ನಾರಾದ್ರೂ ಇದ್ರೆ ಇದನ್ನು ದಕ್ಕಿಸುತಿದ್ದರು. ಯಾರ ಪಾಲೋ ಆಗ್ತಿತ್ತು.

ದೇವಿ : ಹಾಗೆಲ್ಲ ಅನ್ನಬ್ಯಾಡ್ರಿ, ನನ್ನೊಡೆಯಾ. ನಾ ಜೀತದಾಳು. ಒಡೇರ ಬದುಕೇ ನಮ್ಮ ಬದುಕು. ಕಾಯೋದು ನನ್ನ ಕೆಲ್ಸ ಹ್ಯs ಅದೀಗ

ಮುಗೀತು. ರಾತ್ರೆ ಭಾಳಾಯ್ತು ಮಕ್ಕೊಳ್ಳಿ ದಣಿದು ಬಂದೀರಿ. ನಾ ಬರ್ತೇನೆ ಕೈ ಮುಗಿದೆ (ಹೋಗ ಹತ್ತುವಳು).

ನಾಗಪ್ಪ : ದೇವಿ ತಡೆ ನೀ. ನಮಗೆ ತಾಯಿ. ದೊಡ್ಡಮ್ಮ ಈ ಒಂದು ಉಡುಗೊರೆ ತಕೋ ಹುಂ ಹಿಡೀ ಈ ಪವನ ಸರ.

ದೇವಿ : ಅಯ್ಯಪ್ಪಾ. ನಂನ ತಲೆ ಕೆಡಸಬ್ಯಾಡ್ರಿ. ಒಡೆಯಾ! ನಾವು ಗೈದು ತಿನ್ನೊ ಮಂದಿ. ನನಗ್ಯಾಕ ಒಡೆಯಾ ಬಂಗಾರ ಸರ?

ಸುಬ್ಬಣ್ಣ : ನಿಂಗಲ್ಲದಿದ್ದರೆ ನಿನ್ನ ಫಕೀರಂಗೆ.

ದೇವಿ : ಅವನೂ ನನ್ನಾಂಗೇ ದುಡ್ದು ಹೊಟ್ಟೀ ಪೊರಕಂಬಾ. ಅವನ ಮೈ ಕೈ ಬೆಳೆದು ಗಟ್ಟಿಯಾಗ್ಲಿ–ಎಂದು ದ್ಯಾವ್ರಿಗೆ ಹೇಳ್ಕೊಳ್ರಿ ಒಡೆಯಾ, ನಾಳೆ ಬರ್ತೆ. ಅಮ್ಮನೋರೇ ಒಳಗಿದ್ರೆ ಒಂದು ಕೊರ್ಸ್ಕಾಯಿ ಕೊಡ್ರಿ (ಹೋಗುವಳು)

ನಾಗವೇಣಿ : ಹಃ ಪವನ ಸರ ಬೇಡ, ಕೊರ್ಸ್ಕಾಯಿಬೇಕು!

ನಾಗಪ್ಪ : ನಾಗವೇಣಿ, ಇವಳು ಮನಸ್ಸಿ ಅಲ್ಲ, ನಮ್ಮ ಕುಲದೇವಿ, ನಮ್ಮ ಮನೆ ಪುಣ್ಯದ ಪುತ್ಥಳಿ,

೯

ಯಾಕೂಬ : ಪಟೇಲ ಸಾಬ, ಕೇಳಿದ್ರಾ? ದೇವಿ ಕತೆ. ನೀವು ಬರಿದೆ ಆ ಸುಬ್ಬಣ್ಣನ ಹೆಸರು ಖರಾಬ ಮಾಡ್ರೋ ಪ್ರಯತ್ನ ಮಾಡಿದ್ದೇ ಬಂತು. ಆ ದೇವಿ ನಮಗೆಲ್ಲ ಪಂಗನಾಮ ಎಳೆದ್ಳು.

ಸುಬ್ರಾಯ : ನಾ ಅವಳ ಗುಡಿಸಲ ಮೂಲೆ ಮೂಲೆ ಅಗ್ದು ನೋಡಿದ್ದೆ. ಹಸಲ್ರ ಕೇರಿಲಂತೂ ಒಂದು ಮನೆ ಬಿಡ್ಲಿಲ್ಲ.

ಯಾಕೂಬ : ಏ ಬೇಕೂಫಾ, ಆ ಮುದುಕಿ ಕೋಳ ಹತ್ತಿ ಇದ್ದಾಳಂತ ಯಾರಿಗೆ ಮಾಲೂಮ್? ಹೋಗಲಿ ಬಿಡು.

ಪಟೇಲ : ಏನು ಮಾಡೋದು? ಏನು ಹೋಗಲಿ? ಅವಳ ಮೇಲೆ ಕೇಸು ಹಾಕುವಾ. ಹುಗಿದಿಟ್ಟ ಹಣ ಸರಕಾರದ್ದು. ಅವಳೆಂಗೇ ಬಚ್ಚಿಟ್ಟಳು? ಮುದುಕೀನ ಕೊರ್ಟಿಗೆ ಎಳಿದೇ ಹೊದ್ರೊ...

ಯಾಕೂಬ ; ಸಾಕು ಬಿಡ್ರೀ. ಆ ಮೀಸೆ ಬೋಳ್ಸೋ ಕಸಂ. ಇರ್ಲಿ ಏನಾದರೂ ಮಾಡಬೇಕು ಇದು ನಮಗೆ ಇನಸರ್ಟ.

ಸುಬ್ರಾಯ : ಪಟೇಲ್ರೆ, ನಿಮ್ಮ ಮನೆ ದಪ್ಪ ಕಾಫೀ ಕುಡ್ದು ಈ ಕೇಸಿನ ಪಾಯಾ ಹಾಕ್ವಾ. (ಹೋಗುವರು)

೧೦

ದೇವಿ : ಫಕೀರಾ, ಫಕೀರಾss ಇತ್ಲಾಗೆ ಬಾಪ್ಪಾ. ಆ ತೆಂಗಿನ ಸಸಿ ಹಿಡಕೊ, ಹಾಂ ಈ ಹೊಂಡದಲ್ಲಿಡು,

ಫಕೀರಾ : ಯಾಕಮ್ಮಾ?

ದೇವಿ : ಇವು ನಿನ್ನ ಅಪ್ಪನ ನೆಪ್ಪಿಗೆ, ಅಲ್ದೆ ಆ ಚಿನ್ನದ ಚರಿಗೇನೂ ಇಲ್ಲೆ ಇತ್ತು ಅದರ್ದೂ ನೆಪ್ಪಿಗೆ.

ಫಕೀರಾ : ಸರಿ, ಆದರೆ....

ದೇವಿ : ಈ ಸಸಿ ಬೆಳ್ದಾಗ ಫಲಕೊಟ್ಟಾಗ ಎರಡೂ ನೆಪ್ಪು ಆಗ್ತಾವೆ.

ಫಕೀರಾ ; ಆದರೆ ಆ ಫಲಾ ನಿಂಗೆಲ್ಲಿ ಸಿಗ್ತದೆ?

ದೇವಿ : ನಿನಗೆ. ನಿನ್ನ ಮಕ್ಕಳಿಗೆ ಸಿಕ್ಕರೆ ಸಾಕು. ಅದೇ ನನಗೆ ಸುಕಾ.

ಫಕೀರಾ : ಯಾರೋ ನೆಟ್ರೆ ಯಾರಿಗೋ ಫಲ.

ದೇವಿ : ಪರಪಂಚ ನಡೆದದ್ದೇ ಹಾಗೆ ಮಗಾ. ಈ ತೋಟ ಯಾರು ನೆಟ್ಟರು? ಆ ಬೆಟ್ಟ ಯಾರು ಮಾಡ್ದರು? ಬೆಟ್ಟದಲ್ಲಿ ಮರ ಕಡಿದ್ರೆ ಅಲ್ಲಿ ಹೊಸ ಮರ ನಡಬೇಕು. ಬೆಟ್ಟದರಿಣಾss ತೋಟದ ರಿಣಾss.

ಫಕೀರಾ : ತಿಳೀತು ಬಿಡು. ದೇವರರಿಣಾ ಹೀಗೆ ತೀರ್ಸಬೇಕೂಂತ ನೀ ಹೇಳ್ತಿ

ದೇವಿ : ಹಾಂ, ಶಾಣಾ ನನ್ನ ಫಕೀರಾ, ಈಗ ಹೇಳು. ಈ ತೆಂಗಿನ ಸಸಿ ಕಾಯಿ ಯಾರಿಗೆ?

ಫಕೀರಾ : (ನಗು ತಡೆಯಲಾರದೆ) ನನ್ನ ಮಕ್ಕಳಿಗೆ.

(ಯಾಕೂಬ ಸುಬ್ರಾಯ ವಗೈರೆ ಬರುತ್ತಾರೆ)

ಯಾಕೂಬ : ಏ ಮುಂಚ್ಚಬಾಯ್, ನಮಗೆ ಹಲ್ಲ ಕಿರೀತಿ ಏನಂ? ಸುಬ್ರಾಯ

ಅರೆಸ್ಟ ಮಾಡು ದೇವಿಗೆ–ದೇವಿಕೊಂ ಶಿವಪ್ಪಾ ಹಸಲ್ರು ಇವಳ ಮೇಲೆ ವಾರಂಟಐತಿ.

ದೇವಿ : ವಾರಂಟು? ಅದು ಯಾಕೋ?

ಸುಬ್ರಾಯು : ದೇವಿ, ಒಣ ರಗಳೆ ಮಾಡಬ್ಯಾಡ. ನಮ್ಮ ಸಂಗಡ ಬಾ, ಇಲ್ಲಾಂದರೆ ಕೈಗೆ ಬೇಡಿ ಕಬ್ಬಿಣದ ಬಳೆ, ತೆಗ್ಗಿನಮನೆ ಚಿನ್ನದ್ದಲ್ಲ ಹಃ ಹಃ ಹಃ

ದೇವಿ : ಆದರೆ ಯಾಕೆ ಇದೆಲ್ಲ....

ಯಾಕೂಬ : ಯಾಕೆಂದು ಈ ಯಾಕೂಬಖಾನರಿಗೆ ಏನು ಗೊತ್ತು? ಕೋರ್ಟು ಹೇಳ್ತದೆ ನಿನ್ನ ಮೇಲೆ ಖಟ್ಲೆ ಅದೆ.

ದೇವಿ : (ಚಕಿತ) ಆಃ ಖಟ್ಲೆ?

ಯಾಕೂಬ : ಸರಕಾರಿ ಬೊಕ್ಕಸ ಎತ್ತಿ ಹಾಕಿದ್ದಕ್ಕಾಗಿ. ನಡೆ–ಏ ಫಕೀರಾ ಬಿಡೋ ಅವ್ವನ್ನ

ಫಕೀರಾ : ಅವ್ವಾ, ಅವ್ವಾ, ಅವ್ವಾ (ಅಳುತ್ತ ಕೂಗುತ್ತ ಹಿಂದೆ ಓಡುತ್ತಾನೆ),

೧೧

ನಿವೇದಕ : ದೇವಿಯು ವಿಚಾರಣೆ ಕೊನೆಗೆ ನ್ಯಾಯಮೂರ್ತಿಗಳ ತೀರ್ಪು

ನ್ಯಾಯಮೂರ್ತಿ : ದೇವಿ ಕೊಂ ಶಿವಪ್ಪ ಇವಳ ವಿರುದ್ಧ ಪೋಲಿಸರು ಹಾಕಿದ ಕೇಸನ್ನು ಕಿತ್ತು ಹಾಕಲಾಗಿದೆ. ದೇವಿಯು ಹುಗಿದಿಟ್ಟ ಧನವನ್ನೇ ಎತ್ತಿ ಹಾಕಿದ್ದು ಪುರಾವೆ ಆಗಲಿಲ್ಲ. ಆ ಧನವನ್ನು ಮುದ್ದೆಮಾಲನ್ನು ಕೊರ್ಟಿನಲ್ಲಿ ಹಾಜರ ಮಾಡಿಲ್ಲ. ಸದರ ದೇವಿ ಅದನ್ನು ಒಯ್ದದ್ದು ಬೇರೆ ಕಡೆಗೆ ಹಸ್ತಾಂತರ ಮಾಡಿದ್ದು ಯಾವುದಕ್ಕೂ ಸಾಕ್ಷಿ ಪುರಾವೆಗಳನ್ನು ಪೋಲಿಸರು ಹಾಜರು ಪಡಿಸಿಲ್ಲ. ಇವೆಲ್ಲ. ನೋಡಿದರೆ ದೇವಿಯಂಥ ಸ್ವಾತಿಕ ಬಡ ಹೆಂಗಸನ್ನು ಪೀಡಿಸಲಿಕ್ಕೆ ದುರುದ್ದೇಶ ಪೂರ್ವಕವಾಗಿ ಪೋಲೀಸ ಪಾಟೀಲರು ಈ ಖಟ್ಲೆ ಯನ್ನು ಹಾಕಿರಬೇಕೆಂದು ಕೋರ್ಟಿಗೆ ಬಲವಾದ ಸಂಶಯು

ಬರುತ್ತದೆ. ಆದ್ದರಿಂದ ದೇವಿಯು ಪೂರ್ಣ ನಿರ್ದೋಷಿ ಎಂದು ಸಾರಿ ಈ ಖಟ್ಲೆಯನ್ನೂ ಕೋರ್ಟು ಕಿತ್ತು ಹಾಕುತ್ತದೆ.

(ಕೋರ್ಟಿನಲ್ಲಿ ಗದ್ದಲ–'ಸದ್ದು ಸದ್ದು'–ಕೂಗು)

ನಿವೇದಕ : ಮೈಸೂರ ಸರಕಾರದ ಪರವಾಗಿ ಗೌರವಧನವಿತ್ತು ಸತ್ಕರಿಸಲು ಸಿದ್ಧಾಪುರದಲ್ಲಿ ಸಭೆ ನಡೆಯಿತು. ನಗರದ ಗಣ್ಯ ಮಾನ್ಯ ಧುರೀಣರ ಗೌರವಪರ ಭಾಷಣಗಳಿಗೆ ಉತ್ತರ ಕೊಡುತ್ತ ದೇವಿ ಅಂದಳು.

ದೇವಿ : ನಂಗೆ ಇದೆಲ್ಲಾ ಏನೇನೂ ಬ್ಯಾಡ. ನಾನು ಬಡವ. ಉಡಲಿಕ್ಕೆ ಇಡೀ ಸೀರೆ ಕಂಡಿಲ್ಲ. ಈ ಸೀರೆಯೂ ಯಾರೋ ಉಡಿಸಿ ಕಳಿಸಿದ್ದು, ಆದರೂ ನಾನು ಯಾರಿಂದಲೂ ಏನೂ ಕೇಳೋದಿಲ್ಲ. ಬೇಡೋದಿಲ್ಲ. ದೇವರು ಇಟ್ಟಂಗೆ ಇರ್ತೇನೆ. (ಹಿನ್ನೆಲೆಯಲ್ಲಿ ಈಶಾವಾಸ್ಯೋಪನಿಷತ ವಾಕ್ಯಗಳು "ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿತ್ ಧನಂ..." ನಾಗಪ್ಪ ಹೆಗಡೇರು ಹೊನ್ನು ಕೊಟ್ರು, ಹಣ ಕೊಟ್ರು ನಾ ತಗೋಳ್ಳಿಲ್ಲ. ಈಗ ಸರಕಾರ ಹಣ ಕೊಡ್ತದಂತೆ. ಅದೂ ನನಗೆ ಬ್ಯಾಡಾ ನನ್ನ ಫಕೀರಪ್ಪಂಗೂ ಬ್ಯಾಡಾ. ನಮ್ಮದು ದುಡಕೊಂಡು ತಿನ್ನೋ ಜಾತಿ. ನಮ್ಮ ಜೀತದ ಜೀವ ಈ ಹಣ ಮುಟ್ದ್ರೆ ನನ್ನ ಆತ್ಮ ಮೆಚ್ಚಾ. (ದೀರ್ಘ ಚಪ್ಪಾಳೆ. "ಹಸಲ್ರ ದೇವಿಗೆ ಜಯವಾಗಲಿ" ಕೂಗು)

ನಿವೇದಕ : ಇಂದು ದೇವಿಯು ಅಮರಳಾದಳು. ದೇವತ್ವಕ್ಕೆ ನಿಜವಾಗಿಯೂ ಏರಿದಳು. ಅವಳು ಬಾಳಿಡೀ ನೆಚ್ಚಿದ ಬೆಟ್ಟ ಬಾನು ಬಯಲುಗಳಲ್ಲಿ ಐಕ್ಯ ಹೊಂದಿದಳು. ಚಿತೆಯ ಮೇಲೆ ಅವಳ ಜರಾಜರ್ಜರ ದೇಹ ಸಮಿಧೆಯಂತೆ ಬಿದ್ದಿದೆ. ಜ್ವಾಲೆಗಳು ಅದನ್ನ ನೆಕ್ಕುತ್ತಿವೆ. ಇದಾರು? ತೆಗ್ಗಿನ ಮನೆ ಹೆಗಡೆಯವರ ಸಕಲ ಪರಿವಾರ ಧರ್ಮ ಕಾಷ್ಠ ಹಾಕಲಿಕ್ಕೆ ಸುತ್ತಲೂ ನೆರೆದಿದ್ದಾರೆ. ಕಣ್ಣೀರ ಕೋಡಿ ಚಿತೆಯಲ್ಲಿ ತರ್ಪಣ ಕೊಡುತ್ತಿದೆ. ದೇವಿಯ ಆತ್ಮದೊಂದಿಗೆ ಆವಿಯಾಗಿ ಆಕಾಶಕ್ಕೆ ಏರುತ್ತಿದೆ.

ನಾಗಪ್ಪ : (ಗದ್ಗದ) ಬಾರೋ ತಮ್ಮಾ, ಬಾ ನಾಗವೇಣೀ, ಧರ್ಮಕಾಷ್ಠ ಹಾಕೋಣ.

ಸುಬ್ಬಣ್ಣ : ಅಯ್ಯಯ್ಯೋ ದೇವಿ, ನಮ್ಮಮ್ಮಾ! ನಮ್ಮ ಬಿಟ್ಟು ಹೋದೆಯಾ? ನಮ್ಮ ತಾಯಿ ಸತ್ತಾಗಲೂ ನನಗಿಷ್ಟು ಕಣ್ಣೀರು ಬಂದಿದ್ದಿಲ್ಲ. ದೇವೀ, ದೇ....ವೀ...(ಕುಸಿಯುತ್ತಾನೆ)

ನಾಗವೇಣಿ : ನಮ್ಮ ಮನೆ ಭಾಗ್ಯ ಲಕ್ಷ್ಮಿ ಹೋದಳು.
ಎಂಥ ತ್ಯಾಗಿ ಏನು ತಪಸ್ಸು
ಅವಳೊಬ್ಬ ಯೋಗಿನಿ.

ಪಟೇಲ : ನಾ ಪಟೇಲ ಪಾಪಿ ದೇವೀ, ಯೋಗ್ಯತೆ ತಿಳೀದೇ ಹೋದೆ. ೧೯೩೭ರಲ್ಲಿ ಮಹಾತ್ಮರು ದೇವಿನ ಕಂಡು ಕಣ್ಣೀರಗರದ್ರು.

(ಬಾಪೂಜಿ ದನಿ) : ಇಂಥ ಪುಣ್ಯಾತ್ಮರಿರುವದರಿಂದಲೇ ಜಗತ್ತು ನಡೆದಿದೆ ಅಂದರು ಗಾಂಧೀಜಿ. ಆಪುಣ್ಯ ಈ ಹೊತ್ತು ಹೊರಟೆದ್ದು ಹೋಯಿತು.

-ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪಾವಟಿಗೆ ಏರಿ ಹೋಗಿ ದೇವಿ ದರ್ಶನ ಪಡೆದ್ರು ಕುಮಟೆಗೆ ಬಂದಾಗ;

–ಪೂಜ್ಯ ವಿನೋಬಾ ಕೈ ಹಿಡಿದು ಗೋಕರ್ಣ ಮಹಾಬಲೇಶ್ವರನ ಪೂಜೆಗೆ ಒಯ್ದುದ್ದರು ಎಂಥ ಭಾಗ್ಯ.

–ಆಚಾರ್ಯ ಕಾಲೇಲಕರರು ದೇವೀಯ ಗುಡಿಸಲಿಗೆ ಹೋಗಿ ಅವಳ ಕ್ಷೇಮ ಸಮಾಚಾರ ಕೇಳಿದ್ರು.

ನಾಗಪ್ಪ : ಫಕೀರಾ ಅಮ್ಮಂಗೆ ಕೈ ಮುಗಿ ಇನ್ನು ನೀನು ಜೀತದಾಳು ಅಲ್ಲ ಇಮ್ಮ ಹೆಗಡೇರು ನಿನ್ನ ಬಿಡುಗಡೆ ಮಾಡಿದಾರೆ.

ಫಕೀರ : (ಬಿಕ್ಕುತ್ತ) ಆದ್ರೂ ನಿಮ್ಮ ಆಳಾಗೇ ದುಡೀತೀ. ಅಮ್ಮ ಅದನ್ನೇ ಕಲಿಸಿದ್ದು.ರಟ್ಟೆಗಟ್ಟಿ ಇರೋತನಕ ಗೈಯು ಎಂದಿದ್ದಳು. ಅವಳು, ಗೈದು ಸತ್ತಳು. ನಾ ಗೈದು ಬಾಳ್ತೇನೆ.

ಶಿವಯೋಗ ಸಿದ್ಧಿ.

(೧೯೭೮)

ಪಾತ್ರಗಳು :

ಶಂಕರಪ್ಪ (ಯಜಮಾನ)
ಪಾರ್ವತಮ್ಮ (ಯಜಮಾನಿ)
ಬಸವಣ್ಣ (ಮನೆ ಆಳು)
ಅಜ್ಜ (ಹಳ್ಳಿಯ ಮುದುಕ)
ತಂಗಿ (ಅಜ್ಜನ ಸೊಸೆ)
ಇಬ್ಬರು ಮೊಮ್ಮಕ್ಕಳು.

ಪುರಾಣಿಕ, ಡ್ರೈವ್ಹರ, ಕಂಡಕ್ಟರ, ಪ್ರವಾಸಿಗಳು,
ಬಸ್ ನಿಲ್ದಾಣ, ಸಮುದ್ರ ಸ್ನಾನ, ಗೋಕರ್ಣ ದೇವಸ್ಥಾನ
ರಥೋತ್ಸವ ಜಾತ್ರೆ–ಮುಂತಾದ ದನಿ, ಸದ್ದು ಗದ್ದಲ.

(ಶಿವಯೋಗ ಶಿವರಾತ್ರಿ ಒಂದು ಹೊಸ ಯುಗಧರ್ಮದ ಆಚರಣೆಯ
ರೂಪಕ)

೧

ಹಿನ್ನೆಲೆ : (ಊರ ಮಠದ ಪೌಳಿಯಲ್ಲಿ ಶಿವಪುರಾಣ ನಡೆದಿದೆ. ಶಿವರಾತ್ರಿಯ ಮಹಾತ್ಮೆ ಕೊನೆಯ ಶ್ಲೋಕ ಕೇಳಿ ಬರುತ್ತವೆ.)

"ಮಾಘಾಸಿತ ಚತುರ್ದಶ್ಯಾಂ ಮಹಾಬಲ ಸಮರ್ಚನಂ
ವಿಮುಕ್ತಿದಂ ವಿಶೇಷಣ ಸರ್ವೇಷಾಂ ಪಾಪಿನಾಮಪಿ
ಅಸ್ಯಾಂ ಶಿವತಿಥೌ ಸರ್ವೆ ಮಹೋತ್ಸವ ದಿದೃಕ್ಷವಃ
ಆಯಾಂತಿ ಸರ್ವ ದೇಶೇಭ್ಯಶ್ಚತುರ್ವಣ್ಯ ಮಹಾಜನಃ
ಸ್ತ್ರೀಯಾಃ ವೃದ್ಧಾಶ್ಚ ಬಾಲಾಶತಿ ಚತುರಾಶ್ರಮವಾಸಿನಃ
ದೃಷ್ಟ್ವಾತತ್ರೇತ್ಯ ದೇವೇಶಂ ಲೇಭಿರೇ ಕೃತ ಕತ್ಯತಾಂ
ಏವಂ ವ್ರತಂ ಕೃತಂ ಯೇನ ನ್ಯೂನಂತಸ್ಯಸ್ಯ ವಿದ್ಯತೇ
ಮನೋಭಿಷ್ಟಾಂ ತಥಾ ಸಿದ್ಧಿಂ ಲಭತೇ ನಾತ್ರ ಸಂಶಯ..."

(ಪುರಾಣ ಮುಗಿಯುವಾಗ ಗಂಟೆ ಜಾಗಟೆ ಶಂಖಗಳ ಸದ್ದು. 'ಹೂಂ ಮಂಗಳಾರತಿ ಮಾಡ್ರಿ' 'ಪ್ರಸಾದ ಬರಲಿ'–ಇತ್ಯಾದಿ ಸದ್ದು ಹಿಂದೆ ಸರಿಯುತ್ತಿದ್ದಂತೆ ಹಸುವಿನ ನರಳಿಕೆಯ 'ಅಂಬಾs' ದನಿ–)

ಶಂಕ್ರಪ್ಪ : ಯಾರು ಬಸವಣ್ಣೀ ಏನೋ? ಯಾವಾಗ ಬಂದು ಕೂತಿ? ಹಸು ಬೇರೆ ಹೊತ್ಕೊಂಡು... ಬಂದಿದ್ದಿ, ಹಾಂ ಕೇಳಿದಿಯಲ್ಲೋ ಶಿವರಾತ್ರಿ ಮಹಾತ್ಮ್ಯನ?

ಬಸವಣ್ಣೆಪ್ಪ : ಹೌದು ರಾಯರೇ, ಅನಾಯಸವಾಗಿ ಪುರಾಣಾ ಕಿವಿಗೆ ಬಿತ್ತು ನೋಡಿ–ಪಾಪ, ಈ ಹಸೂನ ಪುಣ್ಯ; ಎಲ್ಲೋ ಕೊರಕಲಾಗ ಕಾಲ್ಮುರ್‍ಕೊಂಡು ಬಿದ್ದಿತ್ತು, ಹಗಲೆಲ್ಲ ಗುಡ್ಡ ಸುತ್ತಾಡಿ ಎತ್ಕೊಂಡು ಬಂದೆ ಈ ಮಠದ ದಾರೀಲೇ.

ಶಂಕ್ರಪ್ಪ : ಅದೇ ನಿನ್ನ ಪುಣ್ಯಾ. ಪೌಳೀಲೆ ಕೂತು ಪುರಾಣ ಕೇಳ್ತಿದ್ವಿ ನೀನೂ ಹಾಯಂತೆ ಬಂದು ಕೂತೆ. ಶಿವಪುರಾಣ ಕಿವಿಗೆ ಬಿತ್ತು. ಶಿವ ಯೋಗದ ಮಹಿಮಾನೂ ಕೇಳ್ದಿ.

ಪಾರ್ವತಮ್ಮ : ಏ ಬಸವಣ್ಣಿ ತೀರ್ಥ ಪ್ರಸಾದಾ ತಗೊಂಡ್ಯೋ ಇಲ್ಲೊ?

ಬಸವಣ್ಣೆಪ್ಪ : ತಕೊಂಡೆ ತಾಯಿ, ಯಜಮಾನ್ರು ಪಾರ್ವತಮ್ಮನೋರನ್ನು ಸಂಗಾತ ತಂದಿದ್ದೀರಾ?

ಶಂಕ್ರಪ್ಪ : ಅಲ್ದೆ. ಮತ್ತೆ ಅವಳೇ ನನ್ನ ಬಾಳ ಸಂಗಾತಿ. ಪುರಾಣಕ್ಕೂ ಬಂದಳು. ಒಳಗೆ ಕೂತುಕೊಂಡ್ಳು. ತೀರ್ಥ ಪ್ರಸಾದಾ?

ಬಸವಣ್ಣೆಪ್ಪ : ಆತು ಬಿಡ್ರಿ, ತೀರ್ಥಾನೂ ಕುಡ್ದೆ ಪ್ರಸಾದಾ ಪಾಪಾ ಆ ಹಸುಗೆ ತಿನ್ಸಿದೆ.

ಪಾರ್ವತಮ್ಮ : (ನಕ್ಕು) ಸರಿ ಹೋತು ಬಿಡು ಬಸವಗಿಷ್ಟು, ಆಕಳಿಗಿಷ್ಟು.

ಬಸವಣ್ಣೆಪ್ಪ : (ನಕ್ಕು) ಹೋ; ನಾ ಬಸವಣ್ಣ-ನಂದೂ ದನದ್ದೇ ಜಾತಿ. ಇನ್ನು ನಾ ಮುಂದಾಗಿ ಈ ಹಸೂನ ಕೊಟ್ಟಿಗೆಗೆ ಹಾಕಿ ಮೇವೂ ಮದ್ದೂ ಮಾಡಬೇಕು, ನಾ ಹೊರಟೆ.

ಶಂಕ್ರಪ್ಪ : ಅದ ಮಾಡೋದೆ ಐತಿ. ಆದರೆ ತಡೆ, ನಾವೂ ಜತೆಗೆ ಬಂದ್ವಿ. ಇಲ್ನೋಡು ಬಸವಣ್ಣಿ. ಶಿವರಾತ್ರಿ ಬಂತು, ಈ ಸಲಾ ಆದ್ರೂ ನಮ್ಮ ಜತೆ ಗೋಕರ್ಣ ಯಾತ್ರೆಗೆ ಬಂದ್ಬಿಡು.

ಬಸವಣ್ಣೆಪ್ಪ : ಬರ್ದೇ ಮತ್ತೆ, ನೀವು ಗಂಡ ಹೆಣ್ತಿ ಪ್ರತಿವರ್ಷ ಶಿವರಾತ್ರಿಗೆ ಗೋಕರ್ಣಕ್ಕೆ ಹೋಗ್ತೀರಿ. ನನಗೂ ಮಹಾಬಲೇಶ್ವರನ ಪ್ರಸಾದ ವಿಭೂತಿ ತರ್ತೀರಿ. ಹೋಗುವಾಗ ಪ್ರತಿಸಲ 'ಬಾ' ಅಂತೀರಿ.

ಪಾರ್ವತಮ್ಮ : ಆದ್ರೆ ನೀ ಮಾತ್ರ ಒಂದು ವರ್ಷಾನೂ ಬರವೊಲ್ಲೆ, ಹುಚ್ಚ ಖೋಡಿ.

ಶಂಕ್ರಪ್ಪ : ಖೋಡಿ ಅಲ್ಲ, ಬರೆ-ಹುಚ್ಚ, ಬುದ್ದಿಗೇಡಿ. ನೋಡು ಬಸವಣ್ಣಿ, ಒಂದಾದರೂ ಮಹಾಶಿವರಾತ್ರಿ ನಿನ್ನ ಈ ಯಜಮಾನಿ ತಪ್ಪಿದ್ದುಂಟೇ?

ಪಾರ್ವತಮ್ಮ : ಅಲ್ಲೋ ಬಸವಣ್ಣಿ, ನೀ ಒಂದು ಸಲವಾದರೂ ಬಂದದ್ದೈತೇನು?

ಬಸವಣ್ಣೆಪ್ಪ : ಅವರವರ ನಸೀಬ ಬಾಯವ್ರ, ನನಗೇನ ಶಿವರಾತ್ರಿ, ಕ್ಷೇತ್ರ ಯಾತ್ರೆ, ಮಹಾಬಲೇಶ್ವರ ಪೂಜಾ ಬೇಡಾಗಿದೆಯೇ?

ಪಾರ್ವತಮ್ಮ : ಎಂದಾದರೂ ಶಿವರಾತ್ರಿ-ಜಾತ್ರೆ ಕಂಡಿಯೇನು?

ಶಂಕ್ರಪ್ಪ : ಅವ ನೋಡ್ಯಾನ "ಭೂ ಕೈಲಾಸ" ಸಿನೇಮಾದಲ್ಲಿ, ಅಲ್ಲೇನೋ ಬಸವಣ್ಣೀ

ಬಸವಣ್ಣೆಪ್ಪ : (ನಕ್ಕು) ನೋಡೆನ್ರಿ, ಆದರೆ ಸಿನೇಮಾ ಅಲ್ಲ; ನಾ ಐದು ವರ್ಷದ ಹುಡುಗ ಇದ್ದಾಗ ಹೋಗಿದ್ದೆ ನಿಮ್ಮಜ್ಜೀ ಜತೆ.

ಶಂಕ್ರಪ್ಪ : ಹಾಂಗಿದ್ರೇನು ಮಣ್ಣು ನೆನಪೈತಿ?

ಬಸವಣ್ಣೆಪ್ಪ : ಇಲ್ಲ ಧಣೇರೆ, ಎಲ್ಲ ಎಲ್ಲಾನೂ ಎದೇಲೆ ಕೊರದಿಟ್ಟಾಂಗ ಐತಿ ಸಮುಂದ್ರದ ಉಪ್ಪು ನೀರು ಕುಡಿದು ಉಸಿರುಗಟ್ಟಿದ್ದು, ಗುಡಿ ಗದ್ದಲದಾಗ ಉಡದಾರ ಕಳಚಿ ಬಿದ್ದದ್ದು, ದೇವರ ರಥಕ್ಕೆ ಹೊಡೆವ ಬಾಳೆಹಣ್ಣು ಹೆಕ್ಕಿ ಹೆಕ್ಕಿ ತಿಂದದ್ದು....

(ಇದೆಲ್ಲ ಹೇಳುವಾಗ ಶಂಕ್ರಪ್ಪ-ಪಾರ್ವತಮ್ಮ ನಗುತ್ತಿರುತ್ತಾರೆ)

ಶಂಕ್ರಪ್ಪ : ಮತ್ತೆ ಪೋಲೀಸರು ಲಾಕಪ್ಪಿಗೆ ಹಿಡಕೊಂಡು ಹೋದದ್ದು?

ಬಸವಣ್ಣೆಪ್ಪ : ಅದೊಂದು ತಪ್ಪಿತ್ತು ನೋಡ್ರಿ.

ಪಾರ್ವತಮ್ಮ : ಸಾಕು ಬಿಡ್ರಿ ಪಾಪ. ಏನಾದರೂ ಕೆಟ್ಟಮಾತು ಆಡಬೇಡ್ರಿ- ಅದೇನಿಲ್ಲ ಬಸವಣ್ಣೀ ಈ ಸಲ ನಮ್ಮ ಸಂಗಡ ನೀ ಬರಾವನೋ ಇಲ್ಲೋ?

ಶಂಕ್ರಪ್ಪ : ಅವನ್ನ ಏನ ಕೇಳ್ತೀ? ಎಮ್ಮೆ ದನಾ ಹೊಲ ತೋಟ ಎಂದ ಕೋತ ತಪ್ಪಿಸಿಕೋತ ಬಂದಾನ ಪ್ರತಿವರ್ಷ. ಈ ಸಲ ಬರಲೇ ಬೇಕು ಬಸವಣ್ಣೀ, ಇದು ನನ್ನ ತಾಕೀತು, ನಿನ್ನ ಧಣೇರ ಅಪ್ಪಣೆ.

ಪಾರ್ವತಮ್ಮ : ಹೂಂ ಅನ್ನೋ ಮೂಳಾ, ಮತ್ತ ಬ್ಯಾರ ದಗದಗಿಗದ ಅಂತ ತೆಗೀಬ್ಯಾಡ.

ಬಸವಣ್ಣೆಪ್ಪ : ಬರೋದೆ ಮತ್ತೆ, ನಿಮ್ಮ ಮನೇ ದಗದ ಮುಗಿಯೋಣವೇ ಇಲ್ಲ. ಅವ ಇದ್ದದ್ದೇ ಯಾವಾಗಲೂ.

ಶಂಕ್ರಪ್ಪ : ಹೌದಲ್ಲ ಮತ್ತೆ? ಪ್ರತಿಸಲಾನೂ ನೀ ಹೀಗೆ ಅಂದಕೋತ ಬಂದಾಂವಾ.

ಪಾರ್ವತಮ್ಮ : ನೋಡು ಬಸವಣ್ಣೀ. ನಮ್ಮ ಮನೀ ಕೆಲಸ ಕಂಬಳಾ,

ಯಾವಾಗಲೂ ಇದ್ದದ್ದs. ಹೀಂಗ ನಿನ್ನ ಜೀವಮಾನಾಸೆಲ್ಲ ನಮ್ಮ ಸಂಸಾರಕ್ಕs ಸವೆಸಿ ಸುಣ್ಣಾ ಆಗಿ ಬಿಟ್ಟೆ, ನಿನ್ನ ಸ್ವಂತಕ್ಕ ಏನು ಪುಣ್ಯಕಟ್ಟಿಕೊಂಡ್ಹಾಂಗ ಆತು? ಅಲ್ಲೇನ್ರೀ ಬಸವಣ್ಣಿಗೆ ತುಸು ಬುದ್ಧಿ ಹೇಳಬಾರ್ದ?

ಬಸವಣ್ಣೆಪ್ಪ : ಅಲ್ಲ ಬಾಯವ್ವೇ, ನೀವೂ ಒಳ್ಳೇ ಹೇಳ್ತೀರಿ. ನನಗೇನ ಹೆಂಡ್ತಿನಾ, ಮಕ್ಕಳಾ, ನನ್ನಜೀವಮಾನವೆಲ್ಲ ನಿಮ್ಮ ಸಂಸಾರ ಕ್ಕಾಗೇ ಅದ. ನಿಮಗೆಲ್ಲಾ ಗೊತ್ತು. ಪ್ರತಿ ಮಾಘಮಾಸದಾಗ ನಿಮ್ಮಲ್ಲಿ ಏನಾದರೂ ಕಾಯಿಲೆ, ಕಸರಾ. ಸೊಸೆ ಬಾಳಂತಿ. ಮಕ್ಕಳು ಅಜಾರಿ,ದನಕರು, ಹೊಲ ಏನಾದರೂ ಒಗವ ಇದ್ದದ್ದೇ. ಇದೇ ನೋಡಿ ನಾಳೆ ನೀವು ಗೋಕರ್ಣ ಶಿವರಾತ್ರೆಗೆ ಹೊರಡಿ. ನಿನ್ನೆ ರಾತ್ರಿಯಿಂದ ಈ ಬೆಳ್ಳಿ ಹಸು ಬೇಪತ್ತೆ. ದೂರ ಕೊರ ಕಲಾಗ ಕಾಲ ಮುರಕೊಂಡು ಬಿದ್ದೇತಿ. ಹೊತ್ಕೊಂಡು ಬಂದೆ. ಯಜಮಾನ್ರೆ, ನಿಮ್ಮ ಮಕ್ಕಳ ಮೈತಿಕ್ಕಿ ದಿನಾಲೂ ಮೀಸ್ತೇನಲ್ಲಾ ಅದೇ ನನ್ನ ಪಾಲಿಗೆ ರುದ್ರಾಭಿಷೇಕ.

ಪಾರ್ವತಮ್ಮ : ಸಾಕು ಬಿಡೋ ನಿನ್ನ ಶಾಣೇತನ: ಈ ಸರ್ತೆಮಾತ್ರ ನಮ್ಮ. ಸಂಗತಿ ಗೋಕರ್ಣ ಶಿವರಾತ್ರೆಗೆ ಬರೋದೇ ನೋಡು ನೀನು.

ಶಂಕ್ರಪ್ಪ : ನೋಡ್ದೇ. ಅವನ ಖೋಡಿ ನೋಡೆ; ಮೀಸೆ ಹಣ್ಣಾದರೂ ಹಟಮಾರಿತನ ಬಿಡೋದಿಲ್ಲ.

ಬಸವಣ್ಣೆಪ್ಪ : ಹಟ ಏನು ಬಂತು ಬುದ್ಧೀ, ಇಲ್ಲೆ ಕೆಲಸದ ಹೊರೆ ಬಿದ್ದಿದೆ· ಮೀಸೆ ಹಣ್ಣಾಯ್ತೆಂದು. ಅದೇನು ಕಡಿಮೇ ಆಗ್ತೈತ್ಯೋ? ಈ ಹೊರೆ ಹೊರೋರು ಯಾರು? ಇದೇ ನನ್ನ ಕಾಯಕ

ಪಾರ್ವತಮ್ಮ : ಸರಿ ಹೋತು ಬಿಡು; ಇದ್ದಲ್ಲೇ ನಿನಗೆ ಕೈಲಾಸ.

ಶಂಕ್ರಪ್ಪ : ಅದೆಲ್ಲ ರಗಳೆ ಸಾಕು. ನೀ ನಾಳೇ ನಮ್ಮೊಟ್ಟಿಗೆ ಗೋಕರ್ಣಕ್ಕೆ ಹೊರಡಲೇ ಬೇಕು. (ಮೃದುದನಿಯಲ್ಲಿ) ನೋಡು ಬಸವಣ್ಣಿ ನಮಗೂ ಪ್ರಾಯ ಸರಿತು. ಊರು ದೂರ ಕಾಡು ಹತ್ರ ಆಗ್ತಾ ಇದೆ. ಇದೇ ನಮ್ಮ ಕೊನೆ ಗೋರ್ಕಣ ಯಾತ್ರೆಯೇನೋ. ಕೊನೆ ಶಿವರಾತ್ರಿ.

ಪಾರ್ವತಮ್ಮ : ಇದೇನು ಅಂತೀರಿ (ಗದ್ಗದ) ಶಿವಶಿವಾ ಹಂಗೆಲ್ಲ ಅನ್ನಬೇಡ್ರಿ ನಿಮಗ ಶಿವನಾಣೆ – ನೋಡೋ ಬಸವಣ್ಣೆಪ್ಪ ಹ್ಯಾಂಗ ಮಾತಾಡ್ತಾರ!

ಬಸವಣ್ಣೆಪ್ಪ : ಬುದ್ಧಿ ಬುದ್ಧಿ ಬುದ್ಧಿ ಇದೇನು ಬುದ್ಧಿ. ಅಲ್ಲಾ ನಿಮಗೂ ಮೀಸೆ ಹಣ್ಣಾತು, ಮೈ ಲಡ್ಡಾಯ್ತು. ಬುದ್ಧಿನೂ ಸೊರಗಿ ಹೋತೋ ಏನು ಮತ್ತೆ? ನಿಮಗೆ ನನ್ನ ಕೊರಳಾಣೆ, ಈ ಹಸೂ ಆಣೆ ಇದೆ, ಹಂಗೆಲ್ಲ ಅಭದ್ರ ಆಡಬ್ಯಾಡಿ.

ಶಂಕ್ರಪ್ಪ : ಹಾಂಗಿದ್ರೆ ನಮ್ಮ ಒಟ್ಟಿಗೆ ಬರ್ತಿಯೋ ಇಲ್ಲೊ....

ಬಸವಣ್ಣೆಪ್ಪ : ಬರ್ತೇನ್ರಪ್ಪಾ ಬರ್ತೇನಿ. ನಿಮ್ಮ ಪಾದದಾಣೆ ಬರ್ತೇನಿ.ಆಯ್ತಾ? ನೀವು ಶಂಕರ–ಪಾರ್ವತಿ ನನ್ನ ಪಾಲಿಗೆ, ನೀವಿದ್ದಲ್ಲೇ ಶಿವರಾತ್ರೆ

ಶಂಕ್ರಪ್ಪ : ನಡಿ ಹಾಗಾದ್ರೆ. ಈ ಹಸೂನ ದನದ ಆಸ್ಪತ್ರೆಗೆ ಸಾಗಿಸೋಣ ದಾರೀಲೇ ಇದೆ.

ಪಾರ್ವತಮ್ಮ : (ನಕ್ಕು) ಅಂತೂ ಈ ಸಲನಾದ್ರೂ ನಿನಗೆ ಶಿವಯೋಗ ಫಲಿಸಿತು ಬಿಡು. ಮನಿಗೆ ಬಾ, ಎರಡು ರೊಟ್ಟಿ ಚಟ್ನಿ, ಮೊಸರು ನುಚ್ಚು ಕೊಡ್ತೀನಂತ.

ಬಸವಣ್ಣೆಪ್ಪ : (ನಗು) ಹಾಂ ಇನು ಬೇಕಾದ್ರೆ, ಈಗಲೇ ಫಲಿಸ್ತು ನನ ಶಿವಯೋಗ. ಎಲ್ಲಾ ಶಿವನಾಟ. ಅಮ್ಮನೋರೆ, ಯಾರಿಗೆ ಯಾವ ಯೋಗ ಎಲ್ಲಿ ಹೇಗೆ ಫಲಿಸ್ತೈತೊ ಆ ಶಿವನೇ ಬಲ್ಲ. (ಸಂವಾದದ ಉದ್ದಕ್ಕೂ ಆಗಾಗ ಹಸು ನರಳಿಕೆ, 'ಅಂಬಾ' ದನಿ, ಈಗ ತೇಲಿ ದೂರ ಹೋಗುವದು.)

೨

(ದೃಶ್ಯ ಪಲ್ಲಟ ಸೂಚಕ ಸ್ವರಜತಿ)

ಹಿನ್ನೆಲೆ : (ಬಸ್ ಅಪಘಾತದ ಗಲಾಟೆ ಗದ್ದಲ ಗೊಂದಲ...)

ಶಂಕ್ರಪ್ಪ : ಇದೇನು ಮತ್ತೆ?

ಪಾರ್ವತಮ್ಮ : ಅಬ್ಬಬ್ಬ! ಭಾರಿ ಗದ್ದಲ ಅಯ್ಯೋ ಅಲ್ಲಿ ನೋಡ್ರಿ ಅಲ್ಲಿ (ಗಾಬರಿ) ಏನೋ ಎಕ್ಸಿಡೆಂಟು ಆದ್ಹಾಂಗ ಕಾಣಸ್ತದ, ನಮ್ಮ ಬಸ್ಸೂ ನಿಂತಿತಲ್ಲ!

(ಬಸ್ ನಿಂತ ಸದ್ದು ಗದ್ದಲ ಅಡ್ಡತಿಡ್ಡ ಮಾತುಕತೆಗಳ ದನಿಗಳು ತೀವ್ರವಾಗುವವು, ಸದ್ದುಗಳ ಸುರಿಮಳೆ; "ಬಸ್ ನಿಂದಿರಿಸಿ, ಗೂಡ್ಸ ಎಕ್ಸಿಡೆಂಟ ಆಗೇದ" ಓ ಕಂಡೆಕ್ಟರ ಸಾಬ್ರೇ ನಾವೂ ಬರ್ತೀವಿ"; ''ನಮ್ಮನ್ನೂ ಒಯ್ಯಿರಿ;" "ಹಾ ಗೋಕರ್ಣಕ್ಕೆ": "ನಾವು ಹಳಿಯಾಳಕ್ಕೆ", "ಹೆಣ್ಣು ಮಕ್ಕಳು ಇದ್ದಾರ್ರೀ, ಡ್ರೈವರ ಸಾಬ ಹೇಳ್ರೀ"; "ಎಲಾ ಡ್ರೈವರ ಕಂಡಕ್ಟರ ಇಬ್ರೂ ಇಳಿದು ಬಿಟ್ರಿಲ್ಲಾ"

ಪಾರ್ವತಮ್ಮ : ಅಲ್ರೀ ಇಷ್ಟೆಲ್ಲಾ ಮಂದಿ ನುಗ್ಗ್ಯಾರ, ನಮ್ಮ ಗಾಡೀ ಒಳಗೆ ಜಗಾ ಎಲ್ಲಿ ಐತಿ?

ಬಸವಣ್ಣೆಪ್ಪ : ಇರ್ಲಿ ಬಿಡಿ ಪಾಪ. ಅವರನ್ನ ನಡುರಸ್ತೇಲಿ ಬಿಟ್ರೆ ಹ್ಯಾಂಗೆ? ಬನ್ನಿ ಇತ್ತ ಬನ್ನಿ ನಾನೆದ್ದೆ. ಇಲ್ಲೆ ಜಾಗಾ ಐತಿ ತುಸು. ಪಾಪ, ಅವರಾದ್ರೂ ಏನ ಮಾಡ್ತಾರ?

ಶಂಕ್ರಪ್ಪ : ನೀನೇಕೆ ಎದ್ದಿ? ಹಿಂದಾಗಡೆ ನಿನ್ನ ಜಾಗ ಹೋಗ್ತದ ಕೂಡ್ರು ಕುಂತಲ್ಲೇ, ಹುಚ್ಚ ಮೂಳಾ.

ಬಸವಣ್ಣೆಪ್ಪ : ಪರ್ವಾ ಇಲ್ಲ ಯಜಮಾನ್ರೆ, ನೀವು ಕುಂತೇ ಇರಿ. ನಾನು ಒಂದೀಟು ಕೆಳಗಡೆ ಇಳಿದು ನೋಡಿ ಬರ್ತೇನೆ. ಆ ಕೂಗಾಟ ಗೋಳಾಟ ಏನೆಂತಲ್ಲಾ. ಬಂದೆ–ಬೇಗ ಬಂದೇ ಬಿಟ್ಟೆ; (ಬಸ್ಸು ಇಳಿದು ದೂರ ಹೋಗುವ ಮಾತಿನ ದನಿ)

(ಅತ್ತ ಕೂಗಾಟ ಗೋಳಾಟ ತೀವ್ರ. ನಡುವೆ ಹೆಣ್ಣು ದನಿ. ಮಕ್ಕಳ ದನಿ ಕೇಳ್ತಾ ಇದೆ).

ಪಾರ್ವತಮ್ಮ : ಬಸವಣ್ಣ, ಏ ಬಸವಣ್ಣೆ, ಲಗೂನೆ ಬಾ. ಎಲ್ಲಾ ನೋಡಿ ಕೊಂಡು ಬಂದ್ಬಿಡು. ಇದ್ದ ಜಾಗ ಹೋದ್ರೆ ಬ್ಯಾರೆ ಸೀಟು ಎಲ್ಲಿ ಸಿಗ್ತದ ನಿನಗ? ಗಾಡಿನೂ ಬಿಟ್ಟು ಹೋಗ್ತದ–ಲಗೂನ ಬಾ.

ಬಸವಣ್ಣೆಪ್ಪ : (ಬಸ್ ಹೊರಗಿನಿಂದ) ಹೆದರಬೇಡಿ ಅಮ್ಮನೋರೆ. ಜಾಗ ಎಲ್ಲಿ ಹೋಗ್ತದ. ಇಳಿದವರು ಇಳಿತಾರೆ. ಹತ್ತವರು ಹತ್ತಾರೆ. ಅವರವರ ಜಾಗ ಅವರಿಗೆ–ಕಾಯ್ತಾ ಇರ್ತದೆ. ನಾ ಹೋಗಿ ನೋಡಿ ಬಿಡ್ತೇನೆ.

ಶಂಕ್ರಪ್ಪ : ನೋಡ್ದೇನೇ ಈ ಗೊಡ್ಡು ವೇದಾಂತೀ ಅಧಿಕ ಪ್ರಸಂಗ. ಮನೆ ಏನು ಮಾರ್ಗ ಏನು? ಇವನಿಗೆ ಪರರ ಉಸಾಬರಿ ಉಸ್ತ ವಾರಿನೇ ಹಚ್ಚಿಕೊಳ್ಳೋ ಹುಚ್ಚು.

ಪಾರ್ವತಮ್ಮ : ಅರೇ ಡ್ರೈವರ–ಕಂಡಕ್ಟರ ಬಂದೇ ಬಿಟ್ರು ತಿರುಗಿ, ನಮ್ಮ ದೀಡಶಾಣ್ಯಾ....ಇನ್ನೂ....

ಶಂಕ್ರಪ್ಪ : ಆಕಾ ಅವನೂ ಬಂದ, ಹಾಂ ಗಡಾನೆ ಗಾಡಿ ಹತ್ತು.

ಬಸವಣ್ಣೆಪ್ಪ : (ಹೊರಗಿನಿಂದ) ಇಲ್ಲ ರಾಯ್ರು. ನನ್ನ ಆ ಗಂಟು ಇತ್ತಕೊಡಿ ನಾ ಈಗಲೇ ಬರೋ ಹಾಂಗಿಲ್ಲ.

ಪಾರ್ವತಮ್ಮ : ಯಾಕೋ ಏನಾತು?

ಬಸವಣ್ಣೆಪ್ಪ : ಅಲ್ಲ, ಆ ಮುದುಕ ಕುರುಡ ಮೈ ಜಜ್ಜಿ ಹೋಗಿದೆ. ಓ ಆ ಕಡೆ ಅವಳು ಅವನ ಸೊಸೆ ಕಾಲು ಮುರಕೊಂಡು ಕೂಗ್ತಾವಳೆ. ಇಬ್ಬರು ಮಕ್ಕಳು ಗೋಳ ಹೋಯ್‌ಕೊಳ್ತಾವ್ರೆ.

ಶಂಕ್ರಪ್ಪ : ಅಲ್ಲೆ ಮತ್ತೆ ಆ ಊರ ಮಂದಿ ಇದ್ದಾರೆ?

ಬಸವಣ್ಣೆಪ್ಪ : ಇಲ್ರೀ ಶಂಕರಪ್ಪನೋರೆ. ಇಲ್ಲೆ ಹಂತಾಗೆ ಊರೇ ಇಲ್ಲ. ಒಳಗೆ ಮೂರು ಫರ್ಲಾಂಗು ದೂರ ಐತಿ. ಈ ಕುಟುಂಬ ಅಲ್ಲದೆ ಉಳಿದ ಜನ ಆಚೆ–ಈಚೆ ಹಳ್ಳಿಗಳಿಗೆ ಹೆದರಿ ಹೋದ್ರು ಇನ್ನು ಉಳಿದವ್ರು ನಮ್ಮ ಬಸ್ಸು ಹತ್ತಿದ್ರು.

ಪಾರ್ವತಮ್ಮ : ಅಲ್ಲೋ ಬಸವಣ್ಣೋ, ನೀನೂ ಹತ್ತು ಮತ್ತೆ. ಅವರೆಲ್ಲ ಬಿಟ್ಟು ಬಂದ್ರು ನೀ ಮಾತ್ರ...

ಬಸವಣ್ಣೆಪ್ಪ : ಅಂತ ನಾ ಬಿಡಾಕಿಲ್ರೀ, ಆ ಕಾಲ್ಮುರಕೊಂಡ ಹೆಣ್ಣುಮಗಳ ಕಂಡೇನಂಗೆ ನಮ್ಮ ಬೆಳ್ಳಿ ಹಸೂ ನೆನಪಾಯ್ತ್ರೀ. ಕಂಡೂ ಕಂಡೂ ನಾ ಅವರ್ನ ಬಿಟ್ಟು ಬರೋದು ಹ್ಯಾಂಗ?

(ಡ್ರೈವರ ದನಿ : ಎಲ್ಲಾ ಪ್ಯಾಸಂಜರ್ಸ ಬಂದ್ರೇನೋ, ದೇಖೋಜಿ. ಕಂಡಕ್ಟರ; ಗಡಗಡಾನೆ ಬರ್ರಿ. ಭಾರಿ ಲೇಟಾತಂ!)

ಶಂಕ್ರಪ್ಪ : ಥೂ ನಿನ್ನ, ಅವರು ಬೇವರ್ಶಿ...

ಬಸವಣ್ಣೆಪ್ಪ : ನಾನೂ ಬೇವರ್ಶಿನೇ ಇದ್ದೆ, ಐವತ್ತು ವರ್ಷ ಹಿಂದೆ ನಿಮ್ಮ ತಂದೆ ದೊಡ್ಡ ದಣಿಗಳೇ ತಂದು ಸಾಕಿ ನನ್ನ ಒಬ್ಬ ಮನಶ್ಯಾನಾಗಿ ಮಾಡಿದ್ರಲ್ಲ. ಛೇ ಛೇ ನಾ ಬಲ್ಲೆ. ನೀವು ಮುಂದಾಗಿ, ನಾ ಮುದುಕ ಸೊಸೆ ಮಕ್ಕಳ ತಾವಿಗೆ ಹೋಗಿ ನೋಡ್ಕೊಳ್ತೀನಿ.

ಪಾರ್ವತಮ್ಮ : ಮತ್ತೆ ನಮ್ಮ ಜತೆ ಶಿವರಾತ್ರಿ ಯಾತ್ರೆ ಮಾಡೋದು ಹ್ಯಾಂಗೊ?

ಬಸವಣ್ಣೆಪ್ಪ : ಅದೆಲ್ಲಿ ತಪ್ತದ್ರಿ? ನಾ ಅವರನ್ನ ಅವರ ಆ ಊರ್ಗೆ ಮುಟ್ಟಿಸಿ ಹಿಂದಾಗಡೆ ಬಂದ ಬಿಡ್ತೀನಿ, ಈಗ ಬಸ್ಸಿಗೇನು ಬರಗಾಲ; ತಾಸಿಗೊಂದು ಬರ್ತೈತಿ. ಪಾಪ ಅವರದಾದ್ರೂ ಏನ...

ಶಂಕ್ರಪ್ಪ : ಕರ್ಮವೊ...

ಬಸವಣ್ಣೆಪ್ಪ : ಅವರ ಕರ್ಮ ನಮ್ಮ ಧರ್ಮ, ಇರ್ಲಿ ಬಿಡಿ.

(ಕಂಡಕ್ಟರನ ಗಂಟೆ, 'ಹಾಂ ಗಾಡಿ ಹತ್ರಿ, ಲೇಟಾತು ಹತ್ರಿ, ಹತ್ರಿ,')

ಬಸವಣ್ಣೆಪ್ಪ : (ಕೆಳಗಿನಿಂದ) ನೀವು ಹೋಗಿ ಮುಂದೆ. ಯಜಮಾನ್ರೆ, ಅಮ್ಮಾವ್ರೆ ಮುಂದಾಗಿ. ನಾ ನಿಮ್ಮ ಬೆನ್ನಿಗೇ ಇದ್ದೇನೆ. ಈ ಸಲ ಶಿವರಾತ್ರಿ ತಪ್ಪಿಸೋದಿಲ್ಲ, ನೋಡಿ ನಿಮ್ಮ ಹುಡುಕಿಕೊಂಡು ಬರ್ತೆನೆ–ನೀವು ಇರೋ ಭಟ್ರ ಮನೇ ತಟ್ಟಿಕೋಣೆಗೆ, (ದನಿ ದೂರ ಆಗುತ್ತಿದ್ದಂತೆ ಬಸ್ ಹೊರಡುವ ಸದ್ದು. ಅವನ ಮಾತಿಗೆ ಗಂಡ ಹೆಂಡತಿ ನಗುತ್ತಿದ್ದಂತೆ ಸದ್ದು ತೇಲಿ ಹೋಗುತ್ತದೆ.)

೩

(ದೃಶ್ಯ ಪಲ್ಲಟ ಸೂಚಕ ಸ್ವರಜತಿ)

(ರಸ್ತೆ ಪಕ್ಕದ ಊರಿನಲ್ಲಿ ಅಪಘಾತಕ್ಕೆ ಬಲಿಯಾದ ಕುಟುಂಬದೊಡನೆ).

ಬಸವಣ್ಣೆಪ್ಪ : ನಾ ಬಂದೆ ಅಜ್ಜಾ, ತಡಿ. ನಿಮಗ ಹೊತ್ತು ತಂದ ಆಳಿಗೆ ಈಟ ರೊಕ್ಕ ಕೊಟ್ಟು ಬರ್‍ತೇನೆ. ಆ ತನಕ ಸಿಧಾನಿಸು, ತಂಗೀ, ಇಕೋ ಬಂದೇ ಬಿಟ್ಟೆ, ಇನ್ನು ಹೆದರಬೇಡ್ರಿ. ನಾನಿದ್ದೇನೆ.

ಅಜ್ಜ : ಎಂಥಾ ಪುಣ್ಯ ಕಟ್ಟಿಕೊಂಡೆಯಪ್ಪಾ. ಆ ಬಸ್ ತುಂಬ ಜನ, ಆದರೆ ಎಲ್ಲಾ ಹೊರಟೇಹೋದ್ರು. (ನರಳುತ್ತ ಮರುಗುತ್ತ ಮಾತಾಡ್ತಾನೆ. ಜತೆಗೆ ಸೊಸೆ ಮಕ್ಕಳ ನರಳಿಕೆ ಅಳು) ನೀನೂ ಹೋಗಿದ್ರೆ ನಮ್ಮ ಗತಿ ಗಂಗವ್ವನ ಕಾಣೋದೆ ಆಗಿತ್ತು...ನೀ ಒಬ್ಬ ಉಳಿದಿ. ಕಂಬಳೀಲಿ ಹೊರಸಿ ಇಲ್ಲೆ ಮನೆಗೆ ತಂದು ಬಿಟ್ಟಿ ಅಪ್ಪಾ.

ಬಸವಣ್ಣೆಪ್ಪ : ಬಿಡೋದಿಲ್ಲ ಅಜ್ಜಾ, ಇನ್ನು ನಿಮ್ಮ ಒಟ್ಟೇ ಇದ್ದು ಬಿಡ್ತೇನಿ, ಆಯ್ತೋ.

ಸೊಸೆ : ಅಬ್ಬಬ್ಬಾ ಹಾಯ್ (ಅಳುವಳು)

ಬಸವಣ್ಣೆಪ್ಪ : ತಂಗೀ, ತಡೆ ಆಳಬ್ಯಾಡ ನಾನೇ ಎತ್ತಿ ಗೋಡೆ ಹಂತಾಗ ಕೂಡಿಸ್ತೇನೆ. ಹಾಂ ಈಗ ಹೇಗೆ? ಆರಾಮಾತಲ್ಲಾ?

ಸೊಸೆ : ಅಯ್ಯೋ ಅಪ್ಪಾ, ಬಾಯಿ ಕೊರಟಾಗ್ಯೆತೆ. ನೀರು....ನೀರು ಆಂ...ನನ್ನ ಮಕ್ಕಳು,

ಬಸವಣ್ಣೆಪ್ಪ : ಎಲ್ಲೇ ಅವ್ರೆ ಪಾಪ! ಅತ್ಲಾ ಅತ್ಲಾ ಸುಸ್ತಾಗಿ ಬಿದ್ದವ್ರೆ ದಾರಿ ಉದ್ದಕ್ಕೂ ನಿಮ್ಮ ಎಳೆಮಗಳು ನನ್ನ ಹೆಗಲ ಮೇಲೆಯೇ ನಿದ್ದೆ ಮಾಡಿದಳು. ಈಗ ಎದ್ದು ಅಳಲಿಕ್ಕೆ ಹತ್ಯಾಳ. ತಡೀರಿ. ಗಡಾನೆ ನೀರು ತಂದು ಕೊಡ್ತೇನೆ. ಅಜ್ಜಾ, ಒಂದಿಷ್ಟು ಗಂಜಿ ಬೇಯಿಸ್ತೇನೆ,

ಅಜ್ಜಾ : ಅಯ್ಯೋಪ್ಪಾ.

ಬಸವಣ್ಣೆಪ್ಪ : ನಾ ಬಸವಣ್ಣೆಪ್ಪ, ಅಯ್ಯಪ್ಪಾಲ್ಲ ಅಜ್ಜಾ. (ನಗುತ್ತಾನೆ)

ಅಜ್ಜಾ : ಯಾರೇ ಇರವಲ್ಲದೇಕೆ. ನಮ್ಮ ಪಾಲಿಗೆ ನೀನೇ ದೇವರಪ್ಪಾ, ನೀನೇ ನನ್ನ ಮಗಾ (ಒಮ್ಮೆಲೆ ಬಿಕ್ಕುತ್ತ) ನನ್ನ ಮಗಾ ಅವಂದೂ

ನಿನ್ನದೇ ಹೆಸರು ಬಸಪ್ಪಾ. ಪಾಕಿಸ್ತಾನ ಯುದ್ಧಕ್ಕ ಹೋದಾವ, (ಅಳು ಒತ್ತರಿಸುತ್ತದೆ).

ಸೊಸೆ : ಮಾಂವಾ, ಅದೆಲ್ಲಾ ಏನು ಹಳೇ ನೆನಪು ಮಾಡಿಕೊಳ್ಳಿ. ಸುಮ್ಮನೆ ಬಿದ್ದುಕೊಂಡಿರು. ಆಗಿ ಹೋದದ್ದಕ್ಕೆ.... (ಅವಳಿಗೂ ಅಃಂ ಒತ್ತರಿಸುತ್ತದೆ).

ಬಸವಣ್ಣೆಪ್ಪ : ಎಲಾ, ಎಲಾ, ಎಲಾ....ನೀನೂ ಶುರು ಮಾಡಿದೆಯಾ? ಮುದಿ ಮಾವಂಗೆ ಸಮಾಧಾನ ಮಾಡೊದು ಬಿಟ್ಟು, ನೀನೂ ಗೋಳೋನೆ ಅತ್ತರೆ ನಾನಾರ ಏನು ಮಾಡಲಿ? ಛೇ, ಛೇ ಸುಮ್ಮನಿರಿ ದುಃಖ ಮನುಷ್ಯಾಗೆ ಅಲ್ಲದೆ ಮತ್ತೆ ಮರಕ್ಕ ಮೊರಡಿಗೆ ಬರ್ತಾವೇನು? ನಾನಿದ್ದೇನೆ ಬಿಡು. ಆಳಬ್ಯಾಡ ತಂಗೀ ಅಜ್ಜಾ ನೀನೂ ತುಸಾ ನಿದ್ದೆಮಾಡಿ. ನಾ ಒಳಗ ಹೋಗಿ ಗಂಜಿ ಬೇಯಿಸ್ತೀನಿ. ಮೊದಲ ಹೊಟ್ಟೆ ಚಿಂತೆ, ಆಮೇಲೆ ಮದ್ದುಗಿದ್ದು ಏನಂತಿ ಬಡೂರಿಗೆ ಬಡವರೆ ಗತಿ, ತಂಗಿ ಬೆಂಕಿ ಪೊಟ್ಣ ಎಲ್ಲೆ ಐತಿ?

ಸೊಸೆ : ಮಾಂವಾ ನೋಡಿದಿಯಾ? ಇಂವಾ ದೇವತಾ ಮನುಶ್ಯಾ. ಎಲ್ಲೆಗೆ ಹೊರಟ, ಎಲ್ಲಿಗೆ ಬಂದ? ಈಗ ನಮ್ಮ ಬಗ್ಗೆ ದುಡೀತಾನೆ ಗೋಕರ್ಣ ಶಿವರಾತ್ರಿಗೆ–

ಅಜ್ಜಾ : ಅವನ ಗೋಕರ್ಣ ಶಿವರಾತ್ರೆ ಇನ್ನು ಇಲ್ಲೇ ಆತು ಬಿಡು ಪಾಪ

೪

(ದೃಶ್ಯ ಪಲ್ಲಟ ಸೂಚಕ ಸ್ವರಜತಿ)

(ಹಿನ್ನೆಲೆ : ಗೋಕರ್ಣ ಮಹಾಬಲೇಶ್ವರ ದೇವಸ್ಥಾನ, ಜನ ಸಂದಣಿ, ಪೂಜಾರ್ಥಿಗಳ ಗಲಭೆ; ಶಿವಯೋಗದ ಪುಣ್ಯದಿನ, "ಹಾಂ ಹಾಂ ಬಾಜೂ ಸರೀರಿ".... "ಹೋಯ್ ಪುಥಾಣಿಕರೇ, ಎಲ್ಲಿ ಹೋದ್ರಿ.," "ಮೊದಲಂ ತಲೆ ಆಣೆ ಪಾಸು... ಪ್ರವೇಶ ತಿಕೀಟು ಪಡೀರಿ ಆ ಅಲ್ಲಿ....ಅಲ್ಲೇ" "ಕ್ಯೂ ಕ್ಯೂ ಸಾಲಾಗಿ

ನಿಲ್ಲಿರಿ" "ಏನಪ್ಪಾ ಮುಂದೆಸಾಗು, ಅಚೆಈಚೆ ಏನು ಕಣ್ಬುಡ್ತಿ?" ಇತ್ಯಾದಿ ಕೂಗುಗಳ ಗದ್ದಲದ ಹಿನ್ನೆಲೆ.)

ಪಾರ್ವತಮ್ಮ : ಅಲ್ರೀ, ನಮ್ಮ ಬಸವಣ್ಣೆ ಬರಲೇ ಇಲ್ಲ-ಅಲ್ಲ ನಿನ್ನೆ ಸಂಜೆ. ರಾತ್ರಿತನಕ ಕಾದೇ ಕಾದಿದ್ವಿ.

ಶಂಕ್ರಪ್ಪ : ಅವಂದೇನು ಪಾರ್ವತಿ ಬಿಡು. ಅಂವ ಮನಸುಖರಾಯ. ಭಾರಿ ಜಿದ್ದಿನ ಆಸಾಮಿ. ಆ ಹಸು ಬಿದ್ದ ಹಳ್ಳಾಗೇ ಬಿದ್ದಿರಬೇಕು. ನೀ ನಿಂದಿರಬ್ಯಾಡ, ನೂಕಂ ನುಗ್ಗಲು ನನ್ನ ಹಿಂದೇ ಬಾ.

ಪಾರ್ವತಮ್ಮ : ಬರಾಕ ಹತ್ತೇನಲ್ಲ, ಅಂವ ಹಾಂಗ ಹ್ಯಾಂಗೆ ಮಾಡ್ತಾನ? ಬಂದೇ ಬರ್ತಾನ–ಮಾತಂ ಕೊಟ್ಟಾನ ಮತ್ತೆ! ಭಟ್ರೇ ನಮ್ಮ ಆಳ್ರೀ...

ಭಟ್ಟ : ಹಾಂ, ಅವನಿಗೇನು ಧಾಡಿ; ನಿನ್ನೆನೇ ಬಂದು ಬೇರೆ ಭಟ್ರಲ್ಲಿ ಇಳಿದಿರಬೇಕು. ಯಾರೋ ಅವನನ್ನು ತಮ್ಮಲ್ಲಿಗೆ ತಕ್ಕೊಂಡು ಹೋದ್ರು ಹಾಂ! ಇಲ್ಲೆ ಗುಡೀಲಿ ಸಿಗ್ತಾನ ನೋಡಿ. ಇದ್ನೋಡಿ ಗುಡಿಯೊಳಗೆ ಬಂದಂ ಹಾಂ, ಅದೋ ಅಲ್ಲೇ ಆತ್ಮಲಿಂಗ ಅದೆ. ನೀರೂ ಬಿಲ್ಪತ್ರೆ ಹಾಕಿ. ನಾ ಹೋಗಿ ಮತ್ತೊಂದು ಪಾರ್ಟಿ ತರ್ತೇನೆ. ಹಾಂ ಪೂಜೆ ಮುಗಿಸಿ ಸೀದಾ ಬಿಡಾರಕ್ಕೆ ತಿರುಗಿ ಹೋಗಿ. ಚಂಬು, ಹರಿವಾಣ ಶಾಬೀತು ಇರಲಿ ಮತ್ತೆ ಹಾಂ,

ಪಾರ್ವತಮ್ಮ : ಅಯ್ಯಪ್ಪಾ ಏನು ಸೆಕೆರೀ ಇಲ್ಲಿ ಈ ಗರ್ಭಗುಡೀ ಒಳಗ? ಒಂದು ಬಟಾಟೆ ಇಟ್ರ ಇಷ್ಟೊತ್ತಿನಾಗ ಬೆಂದು ಹೋಗ್ತಿತ್ತು ನೋಡ್ರಿ.

ಶಂಕ್ರಪ್ಪ : ಕೋಳಿ ತತ್ತಿ ಇಟ್ರೆ ಅದಂ ಈ ಕಾವಿಗೆ ಮರಿಹಾಕಿ ಆ ಮರಿನೂ ಸತ್ತು ಹೋಗ್ತಿತ್ತು.

ಪಾರ್ವತಮ್ಮ : (ಗಾಬರಿ) ಸಾಕು ಬಾಯ್ಮುಚ್ರಿ. ದೇವರ ಗುಡೀ ಒಳಗ ಕೋಳಿ ತತ್ತಿಯು ನೆನಪಾಯ್ತೇ? ಭಸ್ಮದುಂಡೆ ಮಾತಾಡ್ರಿ... ಅಭದ್ರ, ಅಮಂಗಲ ಶಿವ ಶಿವ....

ಶಂಕ್ರಪ್ಪ : ಅಮಂಗಲಾ ಅಂದಿ. ಅಲ್ನೋಡು ಆ ಜುಟ್ಟದ ತಲೆಗಳಾಚೆ– ಅಂವ ನಮ್ಮ ಬಸವಣ್ಣೆ ಅಲ್ವೇನೇ?

ಪಾರ್ವತಮ್ಮ : ಹೌದು. ಹೌದು; ಅಂವನ್ಸ–ಇಕಾ ನಮಕಿಂತ ಮುಂದೇ ಯಾವಾಗ ಬಂದ್ನೋ ಏನೋ;

ಶಂಕ್ರಪ್ಪ : ಬಸವಣ್ಣೆಪ್ಪಾ; ಏ ಬಸವಣ್ಣೆ.

ಪಾರ್ವತಮ್ಮ : ಏನ ಒದರತೀರಿ ಸುಮ್ಮನೆ? ಗದ್ದಲದಾಗ ಏನೂ ಯಾರಿಗೂ ಕೇಳಿಸೋದಿಲ್ಲ. ಹೋಗಲಿ ಬಿಡ್ರಿ, ಗುಡಿ ಹೊರಗಡೆ ಹೋದಾಗ ಸಿಕ್ಕೇ ಸಿಕ್ತಾನ ಮತ್ತೆ!

ಶಂಕ್ರಪ್ಪ : ಪಕ್ಕಾ ಆಸಾಮಿ. ಬಂದೇ ಬಿಟ್ಟ ಕೊನೆಗೆ. ಎಲ್ಲಿ ಇಳಿದಾನೋ? ಬಾ, ಲಗೂ ಮುಗಿಸಿ ಹೋಗೋಣ–ಹೊರಗಡೆ-ಉಶ್ಸ್!

ಪಾರ್ವತಮ್ಮ : ನೀವೇ ಅಂದೀರಿ ಜಿದ್ದಿನ ಮನುಷ್ಯ ಆಂತ. (ಹಿಂದಿನಿಂದ ಜನ ಒತ್ತಿ ಬರುತ್ತಾರೆ) ಆಯ್ಯಪ್ಪಾ, ಇದೇನು ಯಮದಾಟ ಅಂತೀನಿ, ಹೋಗ್ರಿ, ಮುದಾಗ್ರೀ

(ಹಿನ್ನೆಲೆ : ಭಜನೆ ಮಂಡಳಿ : "ಶಿವಾಯ ನಮ ಓಂ, ಶಿವಾಯ ನಮ ಓಂ, ನಮಃ ಶಿವಾಯ ...")

ಶಂಕ್ರಪ್ಪ : ನೀ ಬಾ ನನ್ನ ಬೆನ್ನಿಗೇ. ಓಂ ನಮಃ ಶಿವಾಯ,

ಪಾರ್ವತಮ್ಮ : 'ಸಾಂಬ ಶಿವಾರ್ಪಣ ಮಸ್ತು.

ಶಂಕ್ರಪ್ಪ : (ನಕ್ಕು) ಮಸ್ತಾಯ್ತು ಬಿಡು. ಆ ಪೋಲೀಸನ ತಲೆ ಮ್ಯಾಲ ನೀರ ಎರೆದಿ.

ಪಾರ್ವತಮ್ಮ : ಇರ್ಲಿ ಬಿಡ್ರಿ...ನಮ್ಮ ಶ್ರದ್ಧಾಮುಖ್ಯ–ಶಿವ ಅಲ್ಲೇ ತಲೆ ಒಡ್ತಾನ. ನಡೀರಿ ಒಮ್ಮೆ, ಗುಡಿ ಹೊರಗೆ ಬಿಳೋಣಂತ.

೫

(ದೃಶ್ಯ ಪಲ್ಲಟ ಸೂಚಕ ಸ್ವರಜತಿ)

(ಹಿನ್ನೆಲೆ : **ನಿವೇದಕ** : ಮಾಘ ಬಹುಳ ಚತುರ್ದಶೀ ಮರುದಿನ ಅಮವಾಸ್ಯೆ ಸಮುದ್ರ ತೀರದಲ್ಲೇ ಸಾವಿರ ಗಟ್ಟಲೇ ಜನ ಸ್ತೋಮ. ಸಮುದ್ರ ಸ್ನಾನ ಸಾಗರೇಶ್ವರ ಪೂಜೆ, ಪಿತೃತರ್ಪಣಾದಿ ಪುಣ್ಯ ಕರ್ಮ

ಗಳಿಗಾಗಿ ಜನರ ನೂಗ್ಗಾಟ, ನಡುವೆ ದಾರಿಯುದ್ದಕ್ಕೂ ಬೈರಾಗಿ ಭಿಕ್ಷುಕರ–ಕೂಗಾಟ ವಿವಿಧ ಧ್ವನಿಗಳು;

"ಸಂಕಲ್ಪದ ನೀರು ಬಿಡಿ....ಹಾಂ .. ಗೋಕರ್ಣಮಂಡಲೇ, ಗೋರಾಷ್ಟ್ರ ದೇಶೇ ಶತಶೃಂಗ ಪರ್ವತೋಪಾಂತೆ" (ನಡುವೆ ಗದ್ದಲ) ಸ್ನಾನಾ ನಂತರ ತರ್ಪಣ ಕರ್ಮ ಮಹಂ ಕರಿಷ್ಯೇsss "ಭೂದೇವಾನ್ ತರ್ಪಯಾಮಿ, ಭುವರ್ದೇವಾಂಸ್ತರ್ಪಯಾಮಿ "ಹಾಂ ಈಗ ಹೋಯಿಗೆ ಲಿಂಗ ಮಾಡಿ. ಸಾಗರೇಶ್ವರ ಪೂಜಾಂ ಅಹಂ ಕರಿಷ್ಯೇs ಹೂ ಅಕ್ಷತೆ ಏರಿಸಿ"

ಸುವರ್ಣ ಪುಷ್ಪಂ ದಕ್ಷಿಣಾಂ ಸಮರ್ಪಯಾಮಿ, ಇಲ್ಲೇ ಕೊಡಿ ದಕ್ಷಿಣೆ ದುಡ್ಡು."

"ಸರ್ವದುರಿತೋಪಶಮನಂ ಶಂಭೋ ಪಾದೋದಕಂ ಶುಭಂ–ತೀರ್ಥಕುಡೀರಿ"–ಇವೆಲ್ಲ ಧ್ವನಿಗಳು ಬೇರೆ ಬೇರೆ ತೀವ್ರ ಮಂದ್ರ ಕಂಠಗಳಿಂದ ಬೇರೆ ಬೇರೆ ಅಂತರದಲ್ಲಿ, ಹಿನ್ನೆಲೆಗೆ ಕಡಲ ಭೋರ್ಗರೆತ, ತೆರೆಗಳ ಮೊರೆತ)

ಭಟ್ರು : ಬನ್ನಿ, ಬನ್ನಿ ಅವರು ಬಿಕ್ಕೆ ಬೇಡೋ ಪರದೇಶಿಗಳು. ಅವರಿಗೆ ಹಾಕ್ತಾ ನಿಂತ್ರೆ ದಣಿ ಸಾಲ್ದು, ಹಗಲೂ ಸಾಲ್ದು. ಬನ್ನಿ ಲಗೂನೆ ಕಮಾನ್ (ತಿರುಕರ ಪಿಡುಗು)

ಪಾರ್ವತಮ್ಮ : ಇಲ್ಲಿ ನೋಡ್ರೀ ಪಾಪ; ಎಂಥೆಂಥ ಅವಸ್ಥೆ ಈ ಭಿಕಾರಿಗಳದು.

ಶಂಕ್ರಪ್ಪ : ಹೂಂ, ನಮ್ಮ ಬಸವಣ್ಣ ಇದ್ರೆ ಇಲ್ಲಿ ನಿಂತೇ ಬಿಡಾಂವಾ, ಇವರಿಗೆ ಬಿಕ್ಕೆ ಹಾಕ್ತಾ.

ಪಾರ್ವತಮ್ಮ : ಅಂದ್ಹಾಂಗ ಆ ಪುಣ್ಯಾತ್ಮ ಎಲ್ಲಿ ಹೋದ ಅಂತೀನಿ ನಿನ್ನೆ ಇಡೀ ದಿನ ಭೆಟ್ಟಿ ಇಲ್ಲ ಅವಂದು.

ಶಂಕ್ರಪ್ಪ : ಇಕಾ ನಮ್ಮ ಭಟ್ರು ಬಂದ್ರು. ನನ್ನ ಹುಡುಕೋತ, ನಾವು ರೆಡಿ ಭಟ್ರೇ;

ಭಟ್ರು : ರೆಡೀನಾ? ಆಲ್‌ರೈಟ, ಬನ್ನಿ, ಕಮಾನ್! ಹಾಂ!

ಪಾರ್ವತಮ್ಮ : ಇದೇನು ಭಟ್ರೇ, ಮಡೀಲೆ ಇದ್ದೀರಿ ಪುಣ್ಯ ಪರ್ವದ ಕಾಲ ಮತ್ತೆ ಇಂಗ್ಲೀಷ ಪಿಸಿ ಪಿಸಿ ಮಾತಾಡ್ತೀರಿ.

ಭಟ್ರು : ಈಗ ಶಿವರಾತ್ರಿಲಿ ಮಡಿ–ಮೈಲಿಗೆ ಏನೂ ಇಲ್ಲ. ಹಾಂ, ದೇವಸ್ಥಾನದ ಮುಂದೆ ಧ್ವಜಗಂಬಕ್ಕೆ ಗರುಡ ಕಟ್ಟಿದ ದಿವಸ ದಿಂದ ಕುಲಗೋತ್ರ ಜಾತಿ ಮೇಲು–ಕೀಳು ಏನೂ ಇಲ್ಲ ಹಾಂ. ಈ ಕ್ಷೇತ್ರದಲ್ಲೇ ಹಾಂ ಕಳೆದ ವರ್ಷ ನಾನೇ ಇಬ್ಬರು ಬಿಳಿ ಮೋರೆ ಫಿರಂಗಿ ಜೋಡಿಯನ್ನು ದೇವರ ಪೂಜೆ ಮಾಡಿಸಿದ್ದೆ ವ್ಹಾಯಿಟ ಜಂಟಲ್ ಮ್ಯಾನ! ಹಾಂ!

ಶಂಕ್ರಪ್ಪ : ಅನ್ನೋದೇನು? ದೇವರ ಪ್ರಾರಬ್ಧ.

ಪಾರ್ವತಮ್ಮ : ಅಲ್ರೀ, ಅಲ್ಲೆ ನೋಡ್ರಿ ಅಲ್ಲೆ! ಕಡಲ ಅಂಚಿಗೆ ಅಲ್ಲೇ ಕಾಣ್ಯಾನಲ್ಲ ಅಂವ ನಮ್ಮ ಬಸವಣ್ಣ ಅಲ್ಲೇನು?

ಶಂಕ್ರಪ್ಪ : ಹೌದು ಮತ್ತೆ, ಸಾಗರೇಶ್ವರ ಲಿಂಗ ನೀರಿಗೆ ಚಲ್ಲಿ ಮುಳಕ ಹಾಕ ಹತ್ತಿದ್ದಾನೆ.

ಭಟ್ರು : ಹಾಂ, ಹೋಗಿ ನೀವೂ ಅಲ್ಲಿಗೇ, ನಡೀರಿ ನಾನೂ ಬಂದೆ.

ಪಾರ್ವತಿ : ಬಸವಣ್ಣೀ ಏ ಬಸವಣ್ಣೆಪ್ಪಾ.

ಶಂಕ್ರಪ್ಪ : ಏ ಹುಚ್ಚಿ ಕೂಗಿ ಗಂಟಲಾ ಹರಕೋತಿಯೇಕೆ? ಕಡಲ ಅಬ್ಬರ ಇದ್ರು ಗಾಳಿ, ನಿನ್ನ ದನಿ ಅವನಿಗೇನು ಕೇಳೊದು?

ಭಟ್ರು : ಹಾಂ, ಹಿಡಿದ ವಿಧಿ ಮೊದಲು ಮುಗಿಸಿರಿ. "ಸಮುದ್ರ ತೀರೆ ರತ್ನಾಕರೆ, ಸ್ನಾನಂ ಅಹಂಕರಿಷ್ಯೇ ತದಂಗ ಭೂತಾಂ ಸಾಗರೇಶ್ವರ ಪೂಜಾಂ...(ಇತರ ಗದ್ದಲ ಭಟ್ಟರ ಮಂತ್ರವನ್ನು ಮುಳುಗಿಸು ತ್ತದೆ. ತೆರೆಗಳ ಅಬ್ಬರ ತೀವ್ರ ಕೇಳಿಸುತ್ತದೆ.) ಹೂಂ ಬನ್ನಿ ನೀರಲ್ಲೇನಿಲ್ಲಿ ಹೆದರಬೇಡಿ ಪಾರ್ವತಮ್ಮನೋರೆ.

ಶಂಕ್ರಪ್ಪ : ಅಕಾ ಅಲ್ನೋಡು. ಬಸವಣ್ಣ ಆ ಗುಂಪಿನ ಜತೆ ಸಮುದ್ರ ಸ್ನಾನ ಮುಗಿಸಿ ಹೊಂಟ ತಿರುಗಿ. ಏ, ಬಸವಣ್ಣೀsss

ಪಾರ್ವತಮ್ಮ : ಹೋಗಲಿ ಬಿಡಿ, ಮೊದಲು ನಮ್ಮ ಸಮುದ್ರ ಸ್ನಾನ ಮುಗಿ

ಸೋಣ. ಅಯ್ಯಪ್ಪಾ ಹ್ಯಾಂಗ ತೆರಿ ಬಂದು ಬಡೀತಾವ ಇವು. ಕಾಲsss ಕುಸೀತಾವ.

ಶಂಕ್ರಪ್ಪ : ಹೆದರಬೇಡಲೇ ಬಾ, ಕಡಲಿಗೆ ಬಂದು ತೆರೆಗೆ ಅಂಜಿದ್ರೆ ಹೇಗೆ?

ಪಾರ್ವತಿ : ಅಂಗ ಬ್ಯಾಡ್ರೀ, ನನಗೆ ಹೆದರಿಕೆ ಆಗ್ತದ. ನಾ ಒಲ್ಲೆ ಅಯ್ಯಯ್ಯೋ...

(ಇಬ್ಬರೂ ನಗುತ್ತ, ಪಾರ್ವತಿ ಹೆದರಿ ಚೀರುತ್ತಿದಂತೆ)

೬

(ದೃಶ್ಯ ಪಲ್ಲಟ ಸ್ವರಜತಿ)

(ಹಿನ್ನೆಲೆ : ರಥೋತ್ಸವದ ಕೋಲಾಹಲ. ಜನ ಜಾತ್ರೆ ಗದ್ದಲ ವಾದ್ಯಗಳ ಮೊರೆತ. ದೂರದ ಅಂಗಡಿಯಿಂದ ಹಳೆ ರೆಕಾರ್ಡ. "ತೇರನೆಳೆಯುತಾರ ತಂಗೀ" ಮಲ್ಲಿಕಾರ್ಜುನ ಮನ್ಸೂರ ಅವರದು)

ಭಟ್ಟ : ಹಾಂ ಶಂಕ್ರಪ್ಪನೋರೇ, ಪಾರ್ವತಮ್ಮ ಎಲ್ಲಿ? ಹಾಂ ಇಲ್ಲೇ ಇಲ್ಲೇ ಈ ಮಾಳಿಗೆ ಕಟಾಂಜನಾ ಹಿಡಿದು ನಿಲ್ಲಿ. ಆಲ್‌ರೈಟ. ಅದೋ ತೇರು. ಹಾಂ! ದೇವರ ರಥಾರೋಹಣ ರಥ ಹೊರ ಟಿದ್ದು ಎಲ್ಲ ಇಲ್ಲಿಂದ ಚೊಕ್ಕ ಕಾಣ್ತದೆ. ಹಾಂ ನಿಮ್ಮ ಬಸಪ್ಪ ಕಂಡ್ರೂ ಕಂಡ. ಆಂ ಏನಂತೀರಿ?

ಪಾರ್ವತಮ್ಮ : ಅಬ್ಬಾ, ಇದೆಂಥ ರಥಾನ್ರೀ–ದೆವ್ವದಂಥ ಗಾಲಿ. ಅಲ್ರೀ ಒಂದಲ್ಲ ಎರಡಲ್ಲ ಆರುಗಾಲಿಗಳು.

ಶಂಕ್ರಪ್ಪ : ಲೇ ಹುಚ್ಚಿ, ಬರೀ ಗಾಲೀನೇ ನೋಡ್ತಾ ನಿಂತಿಯೇನು? ಅಲ್ಲೆ ಮೇಲೆ ಮಂಟಪದಾಗ ದೇವರ ನೋಡು. ಇಕೋ ದೇವರಿಗೆ ಬಾಳೆಹಣ್ಣು ಹೊಡಿ.

ಪಾರ್ವತಮ್ಮ : ಇಶ್ ನಾ ಒಲ್ರೀ ಹೊಡೆಯೋಕೆ ಬರವಲ್ದು. ಸುಮ್ನsss ಹಣ್ಣು ಹಾಳಾಗ್ತಾವ.

ಶಂಕ್ರಪ್ಪ : ಮತ್ತೇನು? ಬರೇ ನುಂಗಾಕ ಬರ್‍ತಾವೇನು ಬಾಳೆಹಣ್ಣು ಆ ಬಸವಣ್ಣಿ ಹಾಂಗ. ಎಲಾ ಇದೇನು ಕಣ್ಣಾಗ ನೀರು?

ಪಾರ್ವತಮ್ಮ : (ಅಳುವ ದನಿಯುಲ್ಲಿ) ಅಂವ ಎಲ್ಹೋದ? ಜತೆಗೇ ಶಿವರಾತ್ರಿ ಯಾತ್ರಿ ಮಾಡೋಣ ಅಂತ ಆಣಿ ಮಾಡಿ ಹೇಳಿದ್ದ–ಬಂದ್ರೂ ಕಾಣದೇ ಉಳಿದೇ ಬಿಟ್ಟ! ಬಸವಣ್ಣಿ! (ಬಿಕ್ಕುತ್ತ) ಎಲ್ಲಿ ಹೋದನೋ ಏನೋ? ನಮ್ಮನ್ಯಾಕ ಹೀಂಗ ಬಿಟ್ಟು ಉಳಿದಾನ?

ಶಂಕ್ರಪ್ಪ : ಲೇ ಹುಚ್ಚೀ ಈ ಉತ್ಸವದ ಹೊತ್ತಾಗ ಇದೇನಂ ಶುರು ಮಾಡಿಬಿಟ್ಟೆ? ನಿನ್ನ ಈ ರಾಗ; ಹಳೇ ಹುಚ್ಚಿ, ಹೋಗಲ್ಲೆ ಕಣ್ಣುಜ್ಜಿಕೋ ಆ ಬಸವಣಿ ಹಾಂಗೇನೇ–ಯಾವಾಗಲೂ ಎಲ್ಹೋದ್ರೂ ಊರ ಉಸಾಬರಿ ಉಸ್ತವಾರಿ! ಬರೋ ಜತೆ ಇನ್ನಾರನ್ನೊ ಗಂಟಿಕ್ಕಿಕೊಂಡು ಬಂದಿರಬೇಕು. ಹೂಂ ಹಿಡಿ ಬಾಳೆಹಣ್ಣು ಹೊಡಿ ಹೂಂ.

ಪಾರ್ವತಮ್ಮ : ನಾ ಒಲ್ರೀ, ನಾ ಒಲ್ಲೆ ಊ ಹೂಂs (ಶಂಕ್ರಪ್ಪನ ಒತ್ತಾಯು) ಹೋಗಲಿ ಕೊಡ್ರಿ ಅಲ್ಲಾ ನನಗೆಲ್ಲಿ ಗುರಿ ಐತಿ? ಇಕಾ, ಅಯ್ಯೋ ಆ ಭಟ್ಟರ ಹೊಟ್ಟೆಗೆ ಬಡದು ಪಿಚಕ್ ಆಯ್ತುಲ್ರೀ–ಈಗೇನು ಮಾಡ್ಲೀ ಅವಯ್ಯs!

ಶಂಕ್ರಪ್ಪ : ಏನಿಲ್ಲ, ಇನ್ನೊಂದು ಹೊಡಿ ಅವರ ಬಾಯಿಗೇ ಬೀಳಲಿ. ಇಕೋ ನಾ ಹೊಡ್ದೆ ನೋಡು!

ಪಾರ್ವತಮ್ಮ : (ಕಿಲಕಿಲನೆ ನಕ್ಕು) ನಿಮುದೇನ್ಮತ್ತ ಮಹಾ ಕೆಲಸ ಅದೋ ಗಾಲಿಗೆ ತಾಗಿ ಕೆಳಗೆ ಆ ಮುಂಡಾಸದ ಮೇಲೆ ಬಿತ್ತು–ಅಕಾ ಅಂವ ತಲೆ ಎತ್ತಿ ನೋಡ್ತಾನ–ಅರೇ ಅವ ನಮ್ಮ ಬಸವಣ್ಣಿ ಅಲ್ಲ?

ಶಂಕ್ರಪ್ಪ : ಎಲಾ ಇವನs ಇಲ್ಲಿ ಇಷ್ಟು ಹತ್ರ ಕಣ್ಮುಂದೇ ಇದ್ಧಾನ ಪಾಪಿ. ಏ ಬಸವಣ್ಣೀ ಎಲೇ ಬಸ್ಯಾ–ಛೇ ಅವಂಗೆ ಕೇಳೋದೇ ಇಲ್ಲ!

ಪಾರ್ವತಮ್ಮ : ಎಂಥ ಗದ್ಲ, ಅದ್ನೋಡ್ರಿ. ಪಾಪಿ ಅಲ್ಲ ಅವ ಪುಣ್ಯಾತ್ಮ. ರಥಾ ಎಳೀತಾನ ಆ ಅಂಥ ಗಾತ್ರದ ಹಗ್ಗ ಜಗ್ತಾನ.

('ಹರ ಹರ ಮಹದೇವ' 'ಹೋ ಹೋ ಹೋ ಗರ್ಜನೆ')

ಶಂಕ್ರಪ್ಪ : ರಥಾ ಹೊರಟಿತು ಬಾ ಕೆಳಗಡೆ ಹೋಗ್ಗೋಣ. ರಸ್ತೇಲಿ ಸಿಕ್ತಾನ ನಿನ್ನ ಪುಣ್ಯಾತ್ಮ! ಹಾಗೇ ಸಂಜೆ ಬಸ್ಸು ಹಿಡಿಯೋದು!

ಪಾರ್ವತಮ್ಮ : ನಾ ಒಲ್ಲೆ.

ಶಂಕ್ರಪ್ಪ : ಯಾಕೆ ಮತ್ತೆ? ಸಮುದ್ರಕ್ಕೆ ಹೋಗಿ ಆ ಉಪ್ಪು ನೀರಲ್ಲಿ ಈ ಕಣ್ಣೀರೆ ಬಿಡ್ತೇ ಕೂಡ್ರುವಾಕಿ ಏನು "ಬಸವಾ ...ಬಸವಾ"... ಅಂದ್ಕೋತಾ,

ಪಾರ್ವತಮ್ಮ : ಸಾಕು ಸುಮ್ಮಿರಿ. ರಾತ್ರೆ ಕೋಟಿ ತೀರ್ಥದಾಗ ತೆಪ್ಪೋತ್ಸವ ಐತಿ ಅದನಿಷ್ಟು ನೋಡಿದ್ರೆ ಶಿವರಾತ್ರಿಯು ಯಾತ್ರಾ ಸಾಂಗ ಆದ್ಹಾಂಗ ಆಗ್ತದ.

ಶಂಕ್ರಪ್ಪ : ಹಾಂಗಾದ್ರೆ ಹಾಗೆ, ನೀ ತೋರಿದ್ದೇ ಧೋರಣ! ನೀಕಟ್ಟಿದ್ದೇ ತೋರಣ!

೭

(ದೃಶ್ಯಪಲ್ಲಟ ಸ್ವರಜತಿ)

(ಹಿನ್ನೆಲೆ : ಮರುದಿನ ಮುಂಜಾನೆ ಮತ್ತೆ ಬಸ್ಸಿನಲ್ಲಿ ಮರಳಿ ಊರಿಗೆ ಹೊರಟಾಗ)

ಶಂಕ್ರಪ್ಪ : ನೋಡಿದ್ದೇನೇ ನಿನ್ನೆ ರಾತ್ರಿ ನಾಟಕಾ?

ಪಾರ್ವತಮ್ಮ : (ದಿಗಿಲು) ನಾಟಕಾ? ನಾವು ನೋಡಿದ್ದು ದೇವರ ಉತ್ಸವಾ–ಜಲಕ್ರೀಡೆ; ಏನ ಆ ಬಾಣಾ ಬಿರುಸು–ಬಾಜಂತ್ರಿ!

ಶಂಕ್ರಪ್ಪ : ಅದು ಸರೀನೇ ಆವರೆ ಅಲ್ಲೆ ನಡೀತಲ್ಲ-ನಮ್ಮ ಬಸಣ್ಣ ನಾಟಕ

ಪಾರ್ವತಮ್ಮ : ಆದೆಂಥ ಧಿಮಾಕೊ ಅವಂದು ಅಂತೇನಿ! ನಾವು ಕೆರಿ ದಂಡೇಲಿ ನಿಂತಿದ್ರು ಅಂವ ದೇವರ ದೋಣಿಲೇ ಕೂತು ತೀರ್ಥ ಸುತ್ತು ಹಾಕ್ತಿದ್ದ!

ಶಂಕ್ರಪ್ಪ : ಮತ್ತ ನೀ ಅವಂಗೆ ಕಣ್ಣೀರ ಹಾಕ್‌ದಿ ಅಲ್ಲ. ಅವನಿಗೆ ಅದೇನು ಜಂಭಾನೋ ಮುದಿ ಹುಂಬ, ದೇವರ ಮುಂದೇ ಇದ್ದಾನ-ಶಿವನ ಮುಂದೆ ಬಸವಾ.

ಪಾರ್ವತಮ್ಮ : ಕೋಟಿ ತೀರ್ಥದ ಆ ನೀರ ಮಂಟಪದಾಗೂ ಅವ ಹೋಗಿ ನಿಂತ. ದೇವರ ಆರತಿ ಪ್ರಸಾದ ತಗೊಳ್ತಿದ್ದ. ಖರೇ ಹೇಳೊದಾದ್ರೆ ಅಂವದೇ ಶಿವರಾತ್ರಿ ಕ್ಷೇತ್ರ ಯಾತ್ರಿ, ಅವಂಗೇ ದಕ್ತು ನೋಡ್ರಿ!

ಶಂಕ್ರಪ್ಪ : ಹೋಗಲಿ ಬಿಡು ಕೊನೆಗೂ ಎಲ್ಲಿ ಹೋಗ್ತಾನ? ಮನೆಗೇ ಬರ್ತಾನ! ಹಾದಿ ತಪ್ಪಿದ ಹೋರಿ ಹಟ್ಟಿಗೇ ಬರ್ತದ ಬರ್ಲಿ ಹೇಳ್ತೀನಿ.

ಪಾರ್ವತಮ್ಮ : ಏನ್ ಹೇಳ್ತೀರಿ? ಅಂ ಇದೇನು ಬಸ್ಸು ನಿಂತು ಬಿಡ್ತಲ್ಲ! (ಬಸ್ಸು ನಿಂತ ಸದ್ದು)

ಶಂಕ್ರಪ್ಪ : ಯಾರೋ ನಿಂದಿರ್ಸಿದರು.
("ನಿಂದಿರ್ಸಿ ನಿಂದಿರ್ಸಿ" ಕೂಗು, 'ನಮ್ಮ ಯಜಮಾನ್ರು ಇಳಿತ್ತಾರಿ'ಬಸವಣ್ಣೆಯದೇ ದನಿ), ಇದೇನು? ನಮ್ಮ ಬಸ್ಯಾನದೇ ದನಿ, ಅವನೇ ನಿಂದಿರ್ಸಿದ್ದು. ನಮ್ಮ ಬಸ್ಸು ಇದು ಅದೇ ಊರು ಬರುವಾಗ ಆತ ಇಳಿದದ್ದು.

ಬಸವಣ್ಣೆಪ್ಪ : (ಗಾಡಿ ಹೊಕ್ಕು) ಯಜಮಾನರೇ, ತಾಯವ್ರೆ ಶರಣರಪ್ಪಾ. ಇಳೀರಿ, ಇಳೀರಿ. ನೀವು ಇಲ್ಲೇ ಇಳಿಲೇ ಬೇಕು. ಅದು ನಮ್ಮ ಅಜ್ಜ ಬಂದಾನೆ, ಅವರದೇ ಆಗ್ರಹ.

ಅಜ್ಜ : (ಕೆಳಗಿಂದ) ಹೂನ್ರಿ ರಾಯರೇ, ಇಲ್ಲೆ ಇಳಿಲೇಬೇಕು. ನಮ್ಮಲ್ಲಿ ಬಂದು ಹೋಗಲೇಬೇಕು,

ಬಸವಣ್ಣೆಪ್ಪ : ಹಾಂ ಏಳ್ರೀ ಬಾಯವ್ರು. ಬ್ಯಾಗು ಗೀಗು ನಾ ಎತ್ಕೊಂಡೀನಿ

ಶಂಕ್ರಪ್ಪ : ಏನೋ, ನಿನ್ನ ತಗಾದೆ. ಯಾವಾಗ ಬಂದೀ? ಇಲ್ಲೇಕೆ ಇಳಿಯೋದು?

ಬಸವಣ್ಣೆಪ್ಪ : ಅದೆಲ್ಲ ಹೇಳ್ತೀನಿ ಕತೆ. ಕಂಡಕ್ಟರ ತಗಾದೇಸೆ ಇಲ್ಲಿ ಮೆಟ್ಟ (ಗಂಟೆಯ ಮೇಲೆ ಗಂಟೆ) ಮೊದಲು

ಅಜ್ಜ : ನಮಸ್ಕಾರ ರಾಯ್ರೇ, ಶರಣ್ರಿ ಬಾಯಪ್ರೇ. ಯಜಮಾನ್ರಿಗೆ ಕೈ ಮುಗೀರಿ ಮೊಮ್ಮಕ್ಕಳೇ ಹುಂ.

ಮಕ್ಕಳು : ನಮಸ್ತೇ, ನಮಸ್ತೇ

ಶಂಕ್ರಪ್ಪ : ನಮಸ್ತೆ, ಇದೆಲ್ಲ ಏನೋ ನಮ್ಮ ಅವಸ್ಥೆ....?....ನಮಸ್ಕಾರ

ಬಸವಣ್ಣೆಪ್ಪ : ಬನ್ನಿ, ಗಾಡೀ ಹತ್ತಿ...ಎಲ್ಲಾ ಹೇಳ್ತೀನಿ.

೮

(ದೃಶ್ಯ ಪಲ್ಲಟ–ಸ್ವರಜತಿ)

(ಹಿನ್ನೆಲೆ : ಗಾಡಿಯಲ್ಲಿ, ಗಾಡಿಗಾಲಿ ಎತ್ತಿನ ಗಂಟೆಗಳ ಸದ್ದಿನ ಹಿನ್ನೆಲೆಗೆ ಹಾದಿಯುದ್ದಕ್ಕೂ ಹಕ್ಕಿ, ದನ, ನಾಯಿಗಳ ಸದ್ದುಗಳು)

ಶಂಕ್ರಪ್ಪ : ಅಜ್ಜಾ, ಹೇಗೆ ನಿಮ್ಮ ಮನೆ ಮಂದಿ ಎಲ್ಲ ಕ್ಷೇಮಾನೇ? ಸೊಸೀ ಕಾಲು....

ಅಜ್ಜ : ಎಲ್ಲ ನಿಮ್ಮೀ ಬವಸಣ್ಣೆಪ್ಪನೋರ ಕಾಲಗುಣ–ಕೈಗುಣ ನೋಡ್ರಿ ಆ ದಿನ ಅಂವಲ್ಲದಿದ್ರೆ ನಮ್ಮ ಪಾಡು ಹಾದೀಲೆ ಬಿದ್ದು ಸಾಯೋದೇ.

ಬಸವಣ್ಣೆಪ್ಪ : ಅದಿರ್ಲಿ ಯಜಮಾನರೇ, ಹ್ಯಾಗಾತು ಶಿವರಾತ್ರಿ ಜಾತ್ರೆ, ಭೂ ಕೈಲಾಸದಿಂದ ಶಿವ–ಪಾರ್ವತಿ ಇಳಿದು ಬಂದ ಹಾಗೆ ಬಂದೀರಿ.

ಪಾರ್ವತಮ್ಮ : ಸಾಕು ಸುಮ್ನಿರು ಭಾಳ ಶಾಣ್ಯಾ ನೀನು. ನಮಗಿಂತ ಮುಂದೆ ಅಲ್ಲಿ ಮೆರದಾಡಿ ಇಲ್ಬಂದು ಸೇರ್ಕೊಂಡಾನ ಮತ್ತ!

ಬಸವಣ್ಣೆಪ್ಪ : ಇಲ್ಬಂದು ಸೇರ್ಕೊಂಡೆ...ನಾನು ಎಲ್ಲಿಂದ?

ಪಾರ್ವತೆಮ್ಮ : ಮತ್ತ ಧಿಮಾಕ ಜೇರೆ ಮಾಡ್ತೀ? ಬಸವಣ್ಣೆ ನಮ್ಮ ಜೆನ್ನಿಗೇ ಗೋಕರ್ಣಕ್ಕೆ ಬಂದಿ. ಹೋದಲ್ಲೆಲ್ಲಾ ಕಣ್ಮುಂದೆ ಕುಣದಾಡ್ತಾ ಇದ್ದಿ!

ಬಸವಣ್ಣೆಪ್ಪ : ಏನೇನು, ಏನ ಹೇಳ್ತೀರಿ ಬಾಯುವರೇ?

ಶಂಕ್ರಪ್ಪ : ಅಲ್ಲೋ ಕದೀಮಾ, ಅಲ್ಲೇ ಮಹಾಬಲೇಶ್ವರನ ಗುಡಿಯಾಗ ಸಮುದ್ರ ತೀರದಾಗ, ರಥೋತ್ಸವದಾಗ ನೀನೇ...

ಪಾರ್ವತೆಮ್ಮ : ರಾತ್ರಿ ತೆಪ್ಪೋತ್ಸವದಾಗs ಎಲ್ಲಿ ಹೋದ್ಯೋ ನೀ ಇದ್ದಿ... ನಮ್ಮ ಮುಂದೇನ, ನಾವೆಷ್ಟು, ಕೂಗಿದ್ವಿ, ಕರೆದ್ವಿ.

ಶಂಕ್ರಪ್ಪ : ನೀ ಎಲ್ಲಿ ಕೇಳ್ತಿದ್ದಿ. ನಿನ್ನ ತುಂಡವೊಂದಿಗೆ ನಡೆದಿತ್ತು ನಿನ್ನ ತಾಂಡವಾ.

ಬಸವಣ್ಣೆಪ್ಪ : ಎಲಾ, ಎಲಾ: ಇದೇನ ಹೇಳ್ತೀರಿ, ಧಣೇರ! ಏನೂ ತಿಳಿಬಲ್ದು ಕೇಳ್ದಿ ಏನೋ ಅಜ್ಜಾ?

ಪಾರ್ವತೆಮ್ಮ : ಹೌದಪ್ಪಾ, ದೊಡ್ಡ ಮನಸಾ ಆದೀ ನೀನು. ಮನಿಗೆ ಮಾರಿ, ಪರೊಪಕಾರಿ.

ಅಜ್ಜ : ಹಂ, ಹಂ ಬಾಯುವ್ರೆ, ಹಾಗೆನ್ನಬೇಡಿ. ನಮ್ಮ ಬಸವಣ್ಣೆಪ್ಪ ಪರೋಪಕಾರೀ ಖರೆ, ನೂರು ಸಲಾಂ ಹೇಳ್ರಿ. ಆದರೆ ಮನೆಗೆ ಮಾರಿ...ಥೇ ಥೇ, ಹಾಗಂದ್ರೆ ಶಿವ ಮೆಚ್ಚಾ.

ಶಂಕ್ರಪ್ಪ : ಅಲ್ರೋ ಅಜ್ಜಾ. ಈ ನಿಮ್ಮ ಪರೋಪಕಾರಿ ನಮ್ಮಜತೆ ಇದ್ದಂವ ನಮ್ಮ ಹಿಂದೆ ಬಂದು ನಮುಂದೆ ಸುಳಿದಾನ, ಗೋಕರ್ಣಯಾತ್ರೆ ಮುಗಿಸಿ ಇಲ್ಲೆ ಬಂದು ಹಾಜರು ಮತ್ತೆ...ಸಂಭಾವಿತನ್ಹಾಂಗೆ ನಮ್ಮ ಸ್ವಾಗತಕ್ಕೆ!

ಬಸವಣ್ಣೆಪ್ಪ : ಇದೇನು ಸಿಕ್ಕಾಪಟ್ಟೆ ಹೇಳ್ತೀರಿ. ಧಣೇರೆ? ನಿಮ್ಮ ಪಾದ ಮುಟ್ಟಿ ಹೇಳ್ತೀನಿ. ನಾನು ಅಂದು ಈ ಊರಿಗೆ, ಈ ಮಂದೀನ ಹೊತ್ಕೊಂಡು ಬಂದವ ಈ ತನಕ ಈ ತಾವ ಬಿಡಲಿಲ್ಲ.

ಅಜ್ಜ : ನಾವೆಲ್ಲಿ ಬಿಡ್ತೇವೆ? ಅದನ್ನ ಅವ ಸಾವಿರ ಹೇಳ್ದ ಗೋಕರ್ಣಕ್ಕೆ ಹೋಗೋದೈತಿ ಅಂತ. ಆದರೆ....

ಬಸವಣ್ಣೆಪ್ಪ : ಹೌದಜ್ಜ ನಿಮ್ಮ ಅವಸ್ಥೆ. ನಿಮ್ಮ ಕಷ್ಟ ಕಣ್ಣಾರೆ ಕಂಡು ನಾ ಹ್ಯಾಂಗ ಬಿಟ್ಹೋಗಲಿ?

ಪಾರ್ವತಮ್ಮ : ಅಂದ್ರೆ ಇದೇನಂತಿ ನೀನು? ನೀನು ಬಂದೇ ಇಲ್ಲೇನು ಗೋಕರ್ಣಕ್ಕೆ?

ಅಜ್ಜ : ಬಾಯವ್ರೆ, ಬಸವಣ್ಣೆ ನಮ್ಮ ಮನೆ ಬಿಟ್ಟು ಕಳೆದ ನಾಲ್ಕು ಐದು ದಿನ ಹೊರಗೆ ಕಾಲ ಹಾಕಿಲ್ಲ, ನನ್ನ, ನನ್ನ ಸೊಸೆ,... ಮೊಮ್ಮಕ್ಕಳ...ಉಪಚಾರ ಉಣಬಡಿಸೋದ್ರಾಗ ಕಳೀತು ಅವನ ಕಾಲ.

ಬಸವಣ್ಣೆಪ್ಪ : ಹೌದು ಯಜಮಾನರೇ, ಈ ಬಾರಿಯೂ ನಂಗೆ ಗೋಕರ್ಣ ಯಾತ್ರೆ ಕೂಡಿ ಬರಲಿಲ್ಲ. ನನ್ನ ಶಿವಪೂಜೆ ಶಿವಯೋಗ ಎಲ್ಲಾ ಇಲ್ಲೇ ಈ ಅಜ್ಜನ ಮನೆ ಮಂದಿ ಸಂಗಾತೇ ಮುಗೀತು.

ಅಜ್ಜ : ಹಾ ಹೊಂಗಲಿ ಬಿಡಿ. ಒಳಬನ್ನಿ. ಇವಳೇ ನಮ್ಮ ಸೊಸೆ. ಈ ಮಕ್ಕಳ ತಾಯಿ.

ಸೊಸೆ : ನಮಸ್ಕಾರ ಬನ್ನಿ ಒಳಗೆ. ಹಾಂ ಮಕ್ಕಳೇ ಸಾಮಾನು ಇಳಿಸಿ. (ಅಜ್ಜನ ಮನೆಯಲ್ಲಿ)

ಶಂಕ್ರಪ್ಪ : ಅಜ್ಜಾ, ಬಸವಣ್ಣೆ ಎಲ್ಲಿ?

ಅಜ್ಜ : ಅವೆಲ್ಲಿ ಒಂದ ಕಡೆ ಕೂಡ್ರಾಂವ? ಹೋದ ನೀರು ಜಗ್ಗಲಿಕ್ಕೆ. ಅಕೋ ಮಕ್ಕಳ ಜತೆ. ಬಾಳಿಗೆ ನೀರು ಹಾಕ್ತಿದಾನ. (ಮಕ್ಕಳ ಕೂಡ ಗಿಡಕ್ಕೆ ನೀರು ಹಾಕುವ ಸದ್ದು).

ಸೊಸೆ : ಬಾಯವ್ರೆ, ನನ್ನ ಮಕ್ಕಳನ್ನ ಭಾಳ ಹಚ್ಕೊಂಡಾನ್ರೀ. ನಮ್ಮ -ನಿಮ್ಮ ಬಸವಣ್ಣೆಪ್ಪ.

ಪಾರ್ವತಮ್ಮ : (ನಕ್ಕು) ಹಿಂದೆ ನಂಮವ ಇದ್ದಾ, ಈಗ ಅಂವ ನಿಮ್ಮವನೇ- ಅಲ್ಲೇನ್ರಿ?

ಶಂಕ್ರಪ್ಪ : ಹೂಂ ಅಲ್ಲ. ಅದೆಂಥ ಪವಾಡ ಅಂದೆ. ಶಿವರಾತ್ರೆ ಯಾತ್ರೆಯ ಮೂರುದಿನ ಈ ಪುಣ್ಯಾತ್ಮ ಇಲ್ಲೇ ಇದ್ದ. ಆದರೆ ನಮಗೆ ಅಲ್ಲಿ ಗೋಕರ್ಣದಾಗ ಪೂಜೇಲಿ ಸ್ನಾನದಾಗ ತೇರಿನ ಮುಂದೆ ಎಲ್ಲ ಕಾಣ್ತಿದ್ದನಲ್ಲ;

ಪಾರ್ವತಮ್ಮ : ಅಲ್ಲೇ ಗೋಕರ್ಣದಾಗ ನಾವು ಸಾವಿರಗಟ್ಲೆ ಯಾತ್ರಿಕರು ಒದ್ದಾಡಿದ್ವಿ. ಆದರೆ ಖರೇ ಶಿವಯೋಗ ಸಿದ್ಧಿ ಇವಗ ಆತು.

ಶಂಕ್ರಪ್ಪ : ಧನ್ಯನಪ್ಪಾ ನೀ. ಹೆಸರೆತ್ತಿದಾಗ ಬಂದೇ ಬಿಟ್ಟೆ ಬಸವಣ್ಣೆ. ನೀನೇ ಧನ್ಯ ಅಲ್ಲೋ-ಈ ಊರಾಗ. ಈ ಮನೆಯಾಗ ದುಡಿತಾ ಇದ್ದಾಗಲೇ ನೀ ಅಲ್ಲೇ ಗೋಕರ್ಣದ ಮಹಾಶಿವರಾತ್ರಿಗೂ ಹೇಗೆ ಬಂದಿ?

ಅಜ್ಜ : ನಾ ಹೇಳ್ತೇನಿ. ನಮ್ಮ ಬಸವಣ್ಣನವರೇ ಹೇಳ್ಯಾರ: "ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುವರಯ್ಯ" ಅಲ್ಲೇನೋ ಬಸವಣ್ಣೆ? ನಮ್ಮ ಮನೆಗೆ ಭಾಗೀರಥಿ ಬಂದ್ಹಾಂಗ ನೀ ಬಂದಿ. ನಮ್ಮ ಕುಲಾ ಉದ್ಧಾರ ಮಾಡಿದಿ (ಗದ್ಗದ).

ಬಸವಣ್ಣೆಪ್ಪ ; ಛೇ, ಛೇ ಹಾಂಗನ್ನಬೇಡಿ ಅಜ್ಜ: ಇದೆಲ್ಲ ದೊಡ್ಡ ಮಾತಾತು. ನೋಡಿ ಯಜಮಾನ್ರೆ, ಬಾಯವ್ರೆ ನಾ ಇಲ್ಲಿ ಸಿಕ್ಕಿ ಬಿದ್ದೆ. ದುಡೀತಿದ್ದೆ. ಆದರೆ ನಿಮಗೆ ಆಣೆಮಾಡಿ ಮಾತು ಕೊಟ್ಟಿದ್ನಲ್ಲಾ-ನಿಮ್ಮ ಜತೆ ಶಿವರಾತ್ರೆ ಯಾತ್ರೆಗೆ ಬರ್ತೀನಂತ. ನನ್ನ ಆತ್ಮಕ್ಕೆ ಅದೇ ಹಂಬಲ. ಅದೇ ಹಳಹಳಿ.

ಅಜ್ಜ ; ಅಂದಾಗ ನಿನ್ನ ದೇಹ ಇಲ್ಲೇ ಇದ್ದರೂ ನಿನ್ನ ಜೀವಾ ನಿನ್ನ ಆತ್ಮ ಇವರ ಬೆನ್ನಿಗೆ ಗೋಕರ್ಣ ಶಿವರಾತ್ರಿಗೆ ಹೋಗಿರಬೇಕು.

ಸೊಸೆ : ಮಾಂವಾ ಈ ಕಲಿಕಾಲದಲ್ಲೂ ಪವಾಡಾ ಆಗ್ತಾವಂತ ಆತು.

ಶಂಕ್ರಪ್ಪ : ನಮ್ಮ ಬಸವಣ್ಣ ಅವತಾರ ಮಾಡಿದ್ದು ಇದೇ ಕಲಿಕಾಲದಲ್ಲೇ ತಂಗೀ. ದಯಾ ಸೇವಾ ಸಜ್ಜನಿಕೆ–ಇದ್ದಲ್ಲಿ ಯಾವಾಗಲೂ ಸತ್ಯ ಯುಗ, ಅಲ್ಲೇನೇ ಯಜಮಾನೀ?

ಪಾರ್ವತಮ್ಮ : ಹೌದು. ಅಂದು ಶಿವರಾತ್ರೆ ಮಹಾತ್ಮೆ ಕೇಳಿದ್ವಲ್ಲ. ಆ ಬ್ಯಾಡ ಚಿಗರೀ ಕೊಲ್ಲಾಕ ಹೋದ. ಆ ಚಿಗರಿ ಎಲ್ಲಾ ನಾ ಮುಂದ ತಾ ಮುಂದ ಅಂತ ಬ್ಯಾಡನ ಬಾಣಕ್ಕೆ ಬಲಿ ಆಗಾಕ ಬಂದವು.

ಸೊಸೆ : ಹೌದ್ರೀ, ಅವು ಬೇಡಗೆ ವಚನ ಕೊಟ್ಟಿದ್ದು ಮನೆಗೆ ಹೋಗಿ ಮರಿಗಳಿಗೆ ಹಾಲುಣಿಸಿ ಹೇಳಿಕೊಂಡು ಬರ್ತೇವೆ ಅಂತ.

ಪಾರ್ವತಮ್ಮ : ಹೌದು ತಂಗಿ. ಬಡಮೃಗ ನಡಕೊಂಡ ಸತ್ಯಕ್ಕೆ ಆ ಬ್ಯಾಡನ ಕರುಳು ಕರಗಿತು. ಅವಗ ಶಿವರಾತ್ರಿ ವ್ರತಾ ಅಲ್ಲೇ ಆ ಮರದ ಡಿಗೆ ಫಲಿಸಿತು.

ಬಸವಣ್ಣೆಪ್ಪ : ಹೌದು ಬಾಯಮ್ರೆ. ಆ ವ್ಯಾಧ ಅಂದದ್ದೇ ಸತ್ಯ-

ಹಿನ್ನೆಲೆಯಲ್ಲಿ : "ಏತೇ ಧನ್ಯಾ ಮೃಗಾಶ್ಚೈವ ಜ್ಞಾನ ಹೀನಾಃ
ಸುಸಂಮತಾಃ
ಸ್ವೀಯೇನೈವ ಶರೀರೇಣ ಪರೋಪಕರಣೇ ರತಾ"

ಮನುಷ್ಯ ಜನ್ಮ ಪಡೆದ ನಾವೇನು ಸಾಧಿಸಿದಾಂಗ ಆತು?

ಶಂಕ್ರಪ್ಪ : ಅಜ್ಜ: ಹೌದಪ್ಪ ನಾವೇನು ಸಾಧಿಸಿದಾಂಗ ಆತು?

ಹಿನ್ನೇಲೆ : "ಪರಕಾಯಮಾಂಚ ಸಂಪೀಡೆ,ಶರೀರಂ ಪೋಷಿತಂ ವೃಥಾ
ಕುಟುಂಬಂಪೋಷಿತುಂ ನಿತ್ಯಂ ಕೃತ್ವ ಪಾಪಾಣಿ ಅನೇಕಶ
ಕೌವಾಂ ಗತಿಂಗಮಿಷ್ಯಾಮಿ ಘಾತಕಂ ಜನ್ಮತಃ ಕ್ಸತಂ
ಇದಾನಿಂ ಚಿಂತಯಾ ಮ್ಯೇವಂ ಧಿಕ ಧಿಕ ಚ ಜೀವಿತಂ ಮಮ"

ಪಾರ್ವತಮ್ಮ : ಖರೇ ಅಂದ್ರ ಶಿವಯೋಗ ಸಿದ್ಧಿ ಪರೋಪಕಾರಿಗೆ ಸುಮ್ಮನs ಶಿವರಾತ್ರೆ ಜಾತ್ರೆ ಮಾಡಿ ಬಂದ್ರೆ ಏನು ಬಂತು?

ಶಂಕ್ರಪ್ಪ : "ದಯೆಯೇ ಧರ್ಮದ ಮೂಲವಯ್ಯಾ" ನಮ್ಮ ಬಸವಣ್ಣ ನುಡಿದದ್ದು ಖರೇನೇ ಅಜ್ಜಾ.

ಅಜ್ಜ : ಮತ್ತೆ ರಾಯ್ರೇ ಅದರಂತೆಯೇ ನಡೆದ ನಿಮ್ಮ ಬಸವಣ್ಣೆಪ್ಪ, ಇದೇನು ಸುಳ್ಳೇ?

(ಮಕ್ಕಳ ಚಪ್ಪಾಳೆ : "ಖರೇನೆ ಖರೆ" ಎಲ್ಲರ ಕಿಲಕಿಲ ನಗು)

ಗೌರೀಶ ಕಾಯ್ಕಿಣಿ

ಕನ್ನಡದ ಕೆಲವೇ ಮೇಧಾವಿ ಸಾಹಿತಿಗಳಲ್ಲಿ ಒಬ್ಬರೆನಿಸಿದ ಗೌರೀಶ ಕಾಯ್ಕಿಣಿ ಅನೇಕ ಪ್ರಕಾರದ ಸಾಹಿತ್ಯವನ್ನು ರಚಿಸಿ ಕನ್ನಡ ಸಾರಸ್ವತ ಭಂಡಾರವನ್ನು ಶ್ರೀಮಂತಗೊಳಿಸಿದವರು. ಅವರು ಸ್ವಭಾವತಃ ಚಿಂತನಶೀಲರು. ಅವರ ಸಾಹಿತ್ಯದಲ್ಲಿ ಕೂಡ ಅದು ಸ್ಫುಟವಾಗಿ ಮೂಡಿ ನಿಲ್ಲುತ್ತದೆ. ಉತ್ತರ ಕನ್ನಡದ ಹಿರಿಮೆಗೂ ಅವರು ಕಾರಣೀಭೂತರು. ಅವರು ಉತ್ತಮ ಪತ್ರಿಕಾಕರ್ತರು ಕೂಡ. ವೃತ್ತಿಯಿಂದ ಅವರು ಶಿಕ್ಷಕರು. ಈವರೆಗೆ ಅವರ ೩೬ ಕೃತಿಗಳು ಪ್ರಕಟವಾಗಿದ್ದು ಇನ್ನೂ ಅನೇಕ ಕೃತಿಗಳು ಬೆಳಕು ಕಾಣಬೇಕಿದೆ.

ಪುಟಗಳು : ೧೦೨ ಬೆಲೆ : ೬-೫೦ ರೂ.

ರಾಘವೇಂದ್ರ ಪ್ರಕಾಶನ (ಅಂಕೋಲಾ - ಉ. ಕ.)